

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 27 ಗುರುವಾರ 2023

ಸಂಪುಟ: 44 | ಸಂಚಿಕೆ: 102 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4



ರಾಜ್ಯದಲ್ಲಿ ವ್ಯಾಪಕ ಮಳೆ; ಹಲವೆಡೆ ಪ್ರವಾಹ ಪರಿಸ್ಥಿತಿ

ತುರ್ತು ಪರಿಹಾರ, ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು

ಸರ್ಕಾರದ ಒಪ್ಪಿಗೆಗೆ ಕಾಯಬೇಡಿ...

- ವಿಡಿಯೋ ಸಂವಾದದಲ್ಲಿ ಡಿಸಿಗಳು, ಜಿಪಂ ಸಿಇಓಗಳಿಗೆ ಸಿಎಂ ಸಿದ್ದರಾಮಯ್ಯ ಸಲಹೆ
- ಹಠಾತ್ ಪ್ರವಾಹದಂತಹ ಪರಿಸ್ಥಿತಿ ಎದುರಿಸಲು ಸರ್ವ ಸನ್ನದ್ಧರಾಗುವಂತೆ ಸೂಚನೆ



ಜು.31ರಿಂದ ನೆರೆ ಪೀಡಿತ ಪ್ರದೇಶಗಳಿಗೆ ಸಿಎಂ ಖುದ್ದು ಭೇಟಿ

ಬೆಂಗಳೂರು, ಜು.26(ಕೆಎಂಶಿ)– ಕರಾವಳಿ, ಉತ್ತರ ಒಳನಾಡು ಸೇರಿದಂತೆ ರಾಜ್ಯದ ವಿವಿಧೆಡೆ ಹಠಾತ್ ಪ್ರವಾಹ ಸಂಭವಿಸಬಹುದೆಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇಂತಹ ಪರಿಸ್ಥಿತಿ ಎದುರಿಸಲು ಸರ್ವ ಸನ್ನದ್ಧವಾಗಿರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ರಾಜ್ಯದ ಹವಾಮಾನ, ಮಳೆ ಮತ್ತು ಬೆಳೆಗೆ ಸಂಬಂಧಿಸಿದ ಸ್ಥಿತಿಗತಿ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ಸಂದರ್ಭದಲ್ಲಿ ಈ ಆದೇಶ ನೀಡಿದ್ದಾರೆ.

ಅತಿವೃಷ್ಟಿ ಉಂಟಾಗಿರುವ ಹಾಗೂ ಪ್ರವಾಹ ಮುನ್ಸೂಚನೆ ಇರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದು, ಕಟ್ಟೆಚ್ಚರ ವಹಿಸಬೇಕು. ತುರ್ತು ಪರಿಹಾರ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ಕೈಗೊಳ್ಳುವ ನಿರ್ಧಾರಗಳಿಗೆ ಸರ್ಕಾರದ ಒಪ್ಪಿಗೆಗಾಗಿ ಕಾಯಬೇಕಾಗಿಲ್ಲ ಎಂದಿದ್ದಾರೆ.

ಅಗತ್ಯ ಕಂಡುಬಂದಲ್ಲಿ ಶಾಲಾ–ಕಾಲೇಜುಗಳಿಗೆ ರಜೆ ನೀಡಿ. ತಂದೆ–ತಾಯಿ ಹಾಗೂ ವಿದ್ಯಾರ್ಥಿಗಳು ಕಟ್ಟುನಿಟ್ಟಾಗಿ ಜಿಲ್ಲಾಡಳಿತದ ಆದೇಶಗಳನ್ನು ಪಾಲನೆ ಮಾಡುವಂತೆ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ. ● 9ನೇ ಪುಟಕ್ಕೆ

ಸಕಾಲದಲ್ಲಿ ಬಿತ್ತನೆ ಬೀಜ, ಗೊಬ್ಬರ ನೀಡಲು ಅಧಿಕಾರಿಗಳಿಗೆ ಸೂಚನೆ

ಬೆಂಗಳೂರು, ಜು.26(ಕೆಎಂಶಿ)–ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದ್ದು,



ರೈತರಿಗೆ ಅಗತ್ಯವಿರುವ ಬಿತ್ತನೆ ಬೀಜ, ಗೊಬ್ಬರ ಸಕಾಲಕ್ಕೆ ನೀಡುವ ಮೂಲಕ ಶೇ.100ರಷ್ಟು ಬಿತ್ತನೆಯಾಗುವಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಡಳಿತಕ್ಕೆ ಸೂಚನೆ ನೀಡಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಜಿಲ್ಲಾಧಿಕಾರಿಗಳು, ಜಿಪಂ ಸಿಇಓಗಳೊಂದಿಗೆ ವೀಡಿಯೋ ಸಂವಾದದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರಾವಳಿ, ಮಲೆನಾಡು ಸೇರಿದಂತೆ ರಾಜ್ಯಾದ್ಯಂತ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜಲಾಶಯಗಳಿಗೆ ನೀರು ದೊಡ್ಡ ಪ್ರಮಾಣದಲ್ಲಿ ಹರಿದು ಬರುತ್ತಿದೆ. ಅತಿವೃಷ್ಟಿ ಹಾಗೂ ನೆರೆ ಹಾವಳಿಯಿಂದ ಉಂಟಾಗುವ ಅನಾಹುತಗಳನ್ನು ತಪ್ಪಿಸಲು ಅಗತ್ಯ ಮುನ್ನೆಚ್ಚರಿಕೆ ವಹಿಸಿ ಎಂದಿದ್ದಾರೆ.

ಎಲ್ಲೆಡೆ ಮಳೆಯಾಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಇಲ್ಲ. ಕೆಲವೆಡೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿತ್ತು. ಆದರೆ, ಆ ಸಮಸ್ಯೆ ಈಗ ಬಗೆಹರಿದಿದೆ. ರಾಜ್ಯದಲ್ಲಿ ಉತ್ತಮ ಮಳೆಯಾಗುತ್ತಿದ್ದು, ● 9ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ನಿಮಗೆ ಯಾವುದೇ ತೊಂದರೆಯಾದರೆ ತುರ್ತು ನೆರವಿಗೆ 1033ಕ್ಕೆ ಕರೆ ಮಾಡಿ



ಮೈಸೂರು, ಜು.26(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ನಿಮ್ಮ ಯಾವುದೇ ತೊಂದರೆ–ತಾಪತ್ರಯಗಳಿಗೆ ನೆರವಿಗಾಗಿ ಸಹಾಯವಾಣಿ ಸಂಖ್ಯೆ: 1033ಕ್ಕೆ ಕರೆ ಮಾಡಬಹುದು.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (NHAI)ದ ಮೂಲಕ 1033 ಉಚಿತ ಕರೆ ಸಹಾಯವಾಣಿ ಸಂಖ್ಯೆ ನೀಡಿದ್ದು, ಹೆದ್ದಾರಿಯ ಪ್ರತೀ 3 ಕಿ.ಮೀ.ಗೆ ಒಂದರಂತೆ ಸಹಾಯವಾಣಿ ಸಂಖ್ಯೆ ಫಲಕವನ್ನು ಅಳವಡಿಸಿದೆ.

ಆ ಸಂಖ್ಯೆಗೆ ಕರೆ ಮಾಡಿದಲ್ಲಿ 30 ನಿಮಿಷದೊಳಗಾಗಿ ಘಟನಾ ಸ್ಥಳಕ್ಕೆ ಆಂಬುಲೆನ್ಸ್, ಕ್ರೇನ್ ಮತ್ತು ಹೆದ್ದಾರಿ ಪೆಟ್ರೋಲಿಂಗ್ ವಾಹನಗಳು ಬರಲಿವೆ. 1033 ಟೋಲ್ ಫ್ರೀ ನಂಬರ್‌ಗೆ ಕರೆ ಮಾಡಿದ್ದಲ್ಲಿ ಕಟರ್ಸ್, ಹೈಡ್ರಾಲಿಕ್ ರಕ್ಷಣಾ ಸಾಮಗ್ರಿಗಳೊಂದಿಗೆ ಕ್ರೇನ್, ಹೈಡ್ರಾಲಿಕ್ ಟೋಯಿಂಗ್ ವಾಹನಗಳಲ್ಲಿ ಪರಿಹಾರ ಸಿಬ್ಬಂದಿ ● 9ನೇ ಪುಟಕ್ಕೆ

1033 ಕಾರ್ಯ ವೈಖರಿ

- 4 ಡಿಜಿಟಲ್ ಯೂನಿವರ್ಸಲ್ ಅಕ್ಸೆಸ್ ನಂಬರ್ 1033
- 1033 ವರ್ಷದ 365 ದಿನವೂ 24x7 ಕಾರ್ಯ ನಿರ್ವಹಣೆ
- ಇದು ಟೋಲ್‌ಫ್ರೀ ಸಹಾಯವಾಣಿ. ಯಾವುದೇ ಶುಲ್ಕವಿಲ್ಲದೆ ಮೊಬೈಲ್ ಇಲ್ಲವೇ ಲ್ಯಾಂಡ್‌ಲೈನ್‌ನಿಂದ ಕರೆ ಮಾಡಬಹುದು.
- ಹೆಲ್ಪ್‌ಲೈನ್‌ಗೆ ಕರೆ ಮಾಡಿದರೆ ಆಪರೇಟರ್‌ಗೆ ಸಂಪರ್ಕ ಕಲ್ಪಿಸಿ ಅವರು ನಿಮ್ಮೊಂದಿಗೆ ಮಾತನಾಡುವರು.
- ತುರ್ತು ಸಂದರ್ಭಗಳಲ್ಲಿ ಬರುವ ಮಾಹಿತಿ ರಕ್ಷಣಾ ಕಾರ್ಯಪಡೆ ತಂಡಕ್ಕೆ ರವಾನೆ.
- ಅಪಘಾತ ಸಂದರ್ಭ ಆಂಬುಲೆನ್ಸ್, ಹೈವೇ ಪಟ್ರೋಲಿಂಗ್ ವಾಹನಗಳು ಸ್ಥಳಕ್ಕೆ ಬರಲು ಅನುಕೂಲ.
- ಅಪಘಾತಕ್ಕೊಳಗಾಗಿ, ಕೆಟ್ಟು ನಿಂತ ವಾಹನಗಳ ತೆರವಿಗೆ ಕ್ರೇನ್ ಆಗಮಿಸಲು ಈ ನಂಬರ್ ಬಳಕೆ.

ಜೂ.1ರಿಂದ ಇಲ್ಲಿವರೆಗೆ ಭಾರೀ ಮಳೆ ಅನಾಹುತದಿಂದ 38 ಮಂದಿ ಸಾವು

ಬೆಂಗಳೂರು, ಜು.26–ಜೂನ್ 1ರಿಂದ ಈವರೆಗೆ ರಾಜ್ಯದಲ್ಲಿ ಪ್ರವಾಹದಲ್ಲಿ ಸಿಲುಕಿ, ಸಿಡಿಲು ಬಡಿದು, ಮನೆ ಕುಸಿದು, ಮರ ಬಿದ್ದು ಹಾಗೂ ಭೂಕುಸಿತದಿಂದ ಒಟ್ಟು 38 ಜೀವಹಾನಿ ಆಗಿದೆ. 35 ಜನರು ಗಾಯಗೊಂಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಜ್ಯದಲ್ಲಿ 57 ಮನೆಗಳು ಸಂಪೂರ್ಣವಾಗಿ, 208 ಮನೆಗಳು ತೀವ್ರವಾಗಿ ಹಾಗೂ 2682 ಮನೆಗಳು ಭಾಗಶಃ ಹಾನಿಯಾಗಿದೆ. ಮಳೆಯಿಂದಾಗಿ 105 ಜಾನುವಾರುಗಳು ಮೃತಪಟ್ಟಿವೆ. 185 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆ ಹಾಗೂ 356 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು–ಒಟ್ಟು 541.39 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಜಲಾವೃತಗೊಂಡಿದೆ. 407 ಕಿ.ಮೀ. ರಾಜ್ಯ ಹೆದ್ದಾರಿ, 425 ಕಿ.ಮೀ. ಜಿಲ್ಲಾ ಹೆದ್ದಾರಿ, ● 9ನೇ ಪುಟಕ್ಕೆ

3ನೇ ಅವಧಿಗೂ ನಾನೇ ಪ್ರಧಾನಿ ಎಂದು ಪರೋಕ್ಷವಾಗಿ ಹಕ್ಕು ಪ್ರತಿಪಾದಿಸಿದ ಮೋದಿ

ನನ್ನ ಮೂರನೇ ಅವಧಿಯಲ್ಲಿ ಭಾರತ ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆ ಆಗುತ್ತೆ; ಇದು ನನ್ನ ಗ್ಯಾರಂಟಿ

ನವದೆಹಲಿ: ನನ್ನ ಸರ್ಕಾರದ ಮೂರನೆ ಅವಧಿಯಲ್ಲಿ ವಿಶ್ವದ ಮೂರನೆ ಅತೀ ದೊಡ್ಡ ಆರ್ಥಿಕತೆಯಾಗಿ ಭಾರತ ಹೆಮ್ಮೆಯಿಂದ ಎದ್ದು ನಿಲ್ಲಲಿದೆ. ಇದು ಈ ಮೋದಿಯ ಗ್ಯಾರಂಟಿ ಎಂದು ಹೇಳುವ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಮೂರನೆ ಅವಧಿಗೂ ನಾನೇ ಪ್ರಧಾನಿ ಎಂದು ಪರೋಕ್ಷವಾಗಿ ಹಕ್ಕು ಪ್ರತಿಪಾದಿಸಿದ್ದಾರೆ.

ದೆಹಲಿಯ ಹೊಸ ಇಂಟರ್ನ್ಯಾಷನಲ್ ಎಕ್ಸಿಬಿಷನ್–ಕಮ್–ಕನ್ವೆನ್ಷನ್ ಸೆಂಟರ್ ಆಗಿರುವ 'ಭಾರತ ಮಂಟಪಂ' ಅನ್ನು ಪ್ರಧಾನಿ ಮೋದಿ ಬುಧವಾರ ಸಂಜೆ ಉದ್ಘಾಟನೆ ಮಾಡಿದರು.



ಸಾಮಾನ್ಯವಾಗಿ ರಾಜಕೀಯ ಹೊರತಾದ ಭಾಷಣಗಳಲ್ಲಿ ದೇಶದ ಅಭಿವೃದ್ಧಿ ವಿಚಾರವಾಗಿಯೋ ಅಥವಾ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡುವ ಪ್ರಧಾನಿ ಮೋದಿ, ಆದರೆ ಇಂದು ಪ್ರಗತಿ ಮೈದಾನದಲ್ಲಿ ನಡೆದ ಕಾರ್ಯಕ್ರಮವನ್ನು ವಿಪಕ್ಷಗಳ ಟೀಕೆಗೆ ಬಳಸಿಕೊಂಡರು. ಭಾರತ್ ಮಂಟಪದಂತಹ ಕೇಂದ್ರಗಳು ದೇಶದ ಪ್ರತಿಷ್ಠೆಯನ್ನು ಹೆಚ್ಚಿಸಿದರೆ, ಅದನ್ನು ತಡೆಯಲು ಪ್ರಯತ್ನಿಸುವವರೂ ಇದ್ದಾರೆ ಎಂದು ಪ್ರಧಾನಿ ಮೋದಿ, ವಿಪಕ್ಷದವರ ಹೆಸರು ಹೇಳದೆ ಅವರನ್ನು ಟೀಕಿಸಿದರು. ಇವರು ಈ ಭಾರತ ಮಂಟಪವನ್ನು ನಿಲ್ಲಿಸಲು ಪ್ರಯತ್ನಿಸಿದರು, ಪ್ರತಿ ಕೆಲಸವನ್ನು ನಿಲ್ಲಿಸಲು ಒಬ್ಬರಲ್ಲಾ ಒಬ್ಬರು ಪ್ರಯತ್ನ ಮಾಡಿದರು. ಬ್ರೇಕಿಂಗ್ ನ್ಯೂಸ್‌ನಲ್ಲಿ, ಎಲ್ಲವನ್ನೂ ● 9ನೇ ಪುಟಕ್ಕೆ



24ನೇ ಕಾರ್ಗಿಲ್ ವಿಜಯ್ ದಿವಸ್ ಆಚರಣೆ; ಹುತಾತ್ಮರಿಗೆ ನಮನ

ಹಲವಾರು ಸಂಘಟನೆಗಳಿಂದ ಮೈಸೂರಿನಲ್ಲಿ ನಾನಾ ಕಾರ್ಯಕ್ರಮಗಳ ಆಯೋಜನೆ





ಮೈಸೂರು, ಜು.26(ಜಿಎ)- ಮೈಸೂರಿನಲ್ಲಿ ವಿವಿಧ ಸಂಘಟನೆಗಳಿಂದ 24ನೇ ಕಾರ್ಗಿಲ್ ವಿಜಯ್ ದಿವಸ್ ಆಚರಣೆ ಮಾಡಲಾಯಿತು. ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕ ಮತ್ತು ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ವತಿಯಿಂದ ನಗರದ ಫೀಲ್ಡ್ ಮಾರ್ಷಲ್ ಕಾರಿಯಪ್ಪ ವೃತ್ತದ ಬಳಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಬೈಕ್ ರ್‍ಯಾಲಿ ಮೂಲಕ ನಗರದಾದ್ಯಂತ ಸಂಚರಿಸಿ ಕಾರ್ಗಿಲ್ ವಿಜಯ್ ದಿವಸ್ ಮಹತ್ವವನ್ನು ಸಾರಲಾಯಿತು.

ನಂತರ ಕುವೆಂಪುನಗರದಲ್ಲಿರುವ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಹಾಗೂ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಮೈಸೂರು ಮತ್ತು ರಾಜ್ಯದ ಗೌರವಾಧ್ಯಕ್ಷರೂ ಆದ ಸಿ.ಎನ್.ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಸೈನಿಕ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ್, ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ಸಿ.ಜಗದೀಶ್ ಮತ್ತು ರೋಟರಿ ಜಿಲ್ಲೆ 3181 ಗವರ್ನರ್ ಹೆಚ್.ಆರ್.ಕೇಶವ್ ಉದ್ಘಾಟಿಸಿದರು.

ಈ ವೇಳೆ ಸಿ.ಎನ್.ಮಂಜೇಗೌಡ ಮಾತನಾಡಿ, ಚುನಾವಣೆ ಸಂದರ್ಭದಲ್ಲಿ ನನ್ನ ಹೆಸರಿನ ಮುಂದೆ ಮಾಜಿ ಸೈನಿಕ ಎಂದು ಇದ್ದರಿಂದ ಜನರು ಗೆಲ್ಲಿಸಿದ್ದಾರೆ. ಊಟ, ಬಟ್ಟೆ ಇಲ್ಲದೇ ಕಡು ಬಡತನದಿಂದ ಸೈನ್ಯಕ್ಕೆ ಸೇರ್ಪಡೆಯಾದೆ. ತರಬೇತಿ ವೇಳೆಯಲ್ಲಿ ಗೋಡೆಗಳ ಮೇಲೆ 'ಏಕ್ ಗೋಲಿಮೇ ಏಕ್ ದುಷ್ಮನ್ ಕೋ ಮಾರೋ' ಎಂದು ಬರೆದಿದ್ದರು. ಅದನ್ನು ಪ್ರತಿ ಬಾರಿ ಓದಿದಾಗ ಮೈ ರೋಮಾಂಚನವಾಗಿ ಮತ್ತಷ್ಟು ಶಿಸ್ತು, ಒಲವು ಹೆಚ್ಚಿತು ಎಂದರು.

ದೇಶಪ್ರೇಮದಿಂದ ಇಂದಿನ ಕಾರ್ಯಕ್ರಮಕ್ಕೆ ಸಾಕಷ್ಟು ಮಂದಿ ಬಂದಿದ್ದಾರೆ. ಕಾರ್ಗಿಲ್ ದಿವಸ್ ಆಚರಣೆಯಲ್ಲಿ ಜನರು ಕಿಕ್ಕಿರಿದು ನಿಲ್ಲಬೇಕು ಆದರೆ ಇಂದು ಆ ಆಸಕ್ತಿ ಇಲ್ಲ. ಇದಕ್ಕೆ ಕಾರಣ ಸರ್ಕಾರಗಳು ಪ್ರಚಾರ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈಗ ಪ್ರಧಾನಿ ಮೋದಿ ಅವರು ಬಂದ ನಂತರ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ಡಿಗ್ರಿ ಸರ್ಟಿಫಿಕೇಟ್ ನೀಡುತ್ತಿದ್ದಾರೆ. ಅದರಿಂದ ಸಾಕಷ್ಟು ಅನುಕೂಲವಾಗುತ್ತಿದೆ. ಆದರೆ, ನಮ್ಮ ಸಮಯದಲ್ಲಿ ಎಕ್ಸಾಂಪಲಿ ಸರ್ಟಿಫಿಕೇಟ್ ನೀಡುತ್ತಿದ್ದರು. ಇದರಿಂದ ಸೂಕ್ತ ಕೆಲಸ ದೊರೆಯುತ್ತಿರಲಿಲ್ಲ. ಆದರಿಂದ ನಿವೃತ್ತಿ ಬಳಿಕ ವಿವಿಧ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದೆ. ನಂತರ ಪೊಲೀಸ್ ಇಲಾಖೆಯಲ್ಲಿ ಕೆಲಸ ದೊರೆಯಿತು. ಸೈನ್ಯದಿಂದ ಬಂದವರಿಗೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡುವುದು ಕಷ್ಟ ಎಂದು ಹೇಳಿದರು.

ಕುಟುಂಬದವರನ್ನು ಬಿಟ್ಟು ಚಳಿ, ಗಾಳಿ, ಬಿಸಿಲು ಲೆಕ್ಕಿಸದೆ ನಾವು ದೇಶ ಕಾದು ಬಂದಿರುತ್ತೇವೆ. ಯಾರಿಗೋ ಸೆಲ್ಯೂಟ್ ಮಾಡಬೇಕು ಎಂದರೆ ಬೇಸರದ ವಿಚಾರ. ಆದ್ದರಿಂದ ಸೈನಿಕರು ಯಾರಿಗೂ ಸೆಲ್ಯೂಟ್ ಹೊಡೆಯಬೇಡಿ. ಚೇರ್ ಹಾಕಿಕೊಂಡು ಕುಳಿತುಕೊಳ್ಳಿ, ಸೈನಿಕರಿಗೆ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ನಯಾ ಪೈಸೆ ನೀಡಿಲ್ಲ. ಆದರೆ ರಾಜೀವ್ ಅವರು ಮುಡಾ ಅಧ್ಯಕ್ಷರಾಗಿದ್ದಾಗ ಮಾಜಿ ಸೈನಿಕರು ಅರ್ಧ ತೆರಿಗೆ ಕಟ್ಟಬೇಕು ಎಂದು ಆದೇಶಿಸಿದರು. ಇದು ಸ್ವಾಗತಾರ್ಹ ಕ್ರಮ ಎಂದರು.

ಸೈನ್ಯದಲ್ಲಿ ಯಾವುದೇ ಜಾತಿ ಪದ್ಧತಿ ಇಲ್ಲ. ಅಲ್ಲಿ ಎಲ್ಲರೂ ಒಂದೇ. ರಾಮಮಂದಿರ, ಗುರುನಾನಕ್ ದೇವಾಲಯ, ಮಸೀದಿಗೆ ಹೋಗುತ್ತೇವೆ. ಸಮಾಜದಲ್ಲಿ ಮಾಜಿ ಸೈನಿಕರ ಮನೆಯವರಿಗೆ ಹೆಚ್ಚಿನ ಗೌರವವಿದೆ. ಈ ರೀತಿ ಕಾರ್ಯಕ್ರಮ ನಡೆದರೆ ಅನೇಕ ಬದಲಾವಣೆಯಾಗುತ್ತದೆ. ಸೈನಿಕರ ಜೊತೆ ನಾನು ನಿರಂತರವಾಗಿದ್ದೇನೆ. ಆರ್ಮಿಗೆ ಸೇರಿದರೆ ಎಲ್ಲಾ ದೊರೆಯುತ್ತದೆ. ದೇಶಕ್ಕೆ ಮಾದರಿಯಾಗಬಹುದು ಎಂದು ನೆರೆದಿದ್ದ ಶಾಲಾ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಸನ್ಮಾನ: ಕಾರ್ಯಕ್ರಮದಲ್ಲಿ ಕಾರ್ಗಿಲ್ ಯುದ್ಧದಲ್ಲಿ ಭಾಗಿಯಾಗಿದ್ದ ಮಾಜಿ ಸೈನಿಕರಾದ ಸುಬೇದಾರ್ ಎಸ್.ಶಿವಕುಮಾರ್, ಹವಾಲ್ದಾರ್ ಪಿ.ಕೆ.ಶ್ರೀನಿವಾಸ್‌ಮೂರ್ತಿ, ಸಿಪಾಯಿ ಎಚ್.ಎಂ.ಕುಮಾರ್, ನಾಯಕ್ ಶಾಂತಪ್ಪ, ಸುಬೇದಾರ್ ಕೆ.ಎನ್.ನಾಗರಾಜ್ ಮತ್ತು ಮಾಜಿ ಸೈನಿಕರ ಪತ್ನಿಯರಿಗೆ ಹಾಗೂ ವೀರನಾರಿಯರಿಗೆ ಅಭಿನಂದಿಸಲಾಯಿತು. ಮೈಸೂರು ಜಿಲ್ಲೆಯ ಪ್ರಥಮ ಮಹಿಳಾ ಪೈಲೆಟ್ ಆಗಿ ಆಯ್ಕೆಯಾಗಿರುವ ಮಾಜಿ ಸೈನಿಕ ವಿಕ್ರಮ್ ರಾಜ್ ಅವರ ಪುತ್ರಿ ತನುಶ್ರೀ ಗೌಡ ಅವರನ್ನು ಸನ್ಮಾನಿಸಲಾಯಿತು.

ಬೈಕ್ ರ್‍ಯಾಲಿ: ಸಂಘ ಆಯೋಜಿಸಿದ್ದ ಬೈಕ್ ರ್‍ಯಾಲಿಗೆ ಮೈಸೂರು ಎನ್‌ಸಿಸಿ ಹೆಡ್ ಕ್ವಾರ್ಟರ್‌ನ ಕಮಾಂಡೆಂಟ್ ಕರ್ನಲ್ ಆರ್.ಆರ್.ಮೆನನ್ ಹಸಿರು ನಿಶಾನೆ ತೋರಿದರು. ಮೆಟ್ರೋಪೋಲ್ ವೃತ್ತದಿಂದ ಆರಂಭವಾದ ರ್‍ಯಾಲಿ ರೈಲ್ವೆ ನಿಲ್ದಾಣ, ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ವೃತ್ತದಿಂದ ಇರ್ವಿನ್ ರಸ್ತೆ, ನೆಹರು ವೃತ್ತ, ಅಶೋಕ ರಸ್ತೆ, ದೊಡ್ಡ ಗಡಿಯಾರ, ಜಯಚಾಮರಾಜ ಒಡೆಯರ್ ಸರ್ಕಲ್, ಹಾರ್ಡಿಂಜ್ ವೃತ್ತ, ದೊಡ್ಡಕೆರೆ ಮೈದಾನದ ರಸ್ತೆಯಿಂದ ಸಾಗಿ ಶಿವರಾತ್ರೀಶ್ವರ ಸರ್ಕಲ್, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಏಕಲವ್ಯ ವೃತ್ತ, ಸರಸ್ವತಿಪುರಂ ಅಗ್ನಿಶಾಮಕದಳ ಕಚೇರಿ ಮುಂಭಾಗದ ರಸ್ತೆ, ಶ್ಯಾಂ ಸ್ಟುಡಿಯೋ, ಅಪೋಲೋ ಆಸ್ಪತ್ರೆ ಜಂಕ್ಷನ್, ಅಕ್ಷಯ ಭಂಡರ್, ವಿಜಯ ಬ್ಯಾಂಕ್ ವೃತ್ತ, ಚಿತ್ರಭಾನು ರಸ್ತೆ, ಕುವೆಂಪುನಗರದ ಕಾಂಪ್ಲೆಕ್ಸ್ ಮೂಲಕ ಸಾಗಿ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ ತಲುಪಿತು.

ಈ ವೇಳೆ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಉಪಾಧ್ಯಕ್ಷ ಎಂ.ಕೆ.ಅಣ್ಣೇಗೌಡ, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ನಂಜುಂಡಸ್ವಾಮಿ, ವೀರನಾರಿ ಘಟಕದ ರಾಜ್ಯಾಧ್ಯಕ್ಷೆ ರಜಿನಿ ಸುಬ್ಬಯ್ಯ, ಸಹಾಯಕ ಗವರ್ನರ್ ಎಂ.ಕೆ. ನಂಜಯ್ಯ, ವಲಯ ಸೇನಾನಿ ಪಿ.ಸುರೇಂದ್ರ, ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಕಾರ್ಯದರ್ಶಿ ಎಸ್.ಗೋಪಾಲಕೃಷ್ಣ, ಕಾರ್ಯಾಧ್ಯಕ್ಷ ಆರ್. ರಾಜೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಯುವ ಭಾರತ್ ಸಂಘಟನೆ: ಕಾರ್ಗಿಲ್ ವಿಜಯ ದಿವಸ್ ಅಂಗವಾಗಿ ಯುವ ಭಾರತ್ ಸಂಘಟನೆ ವತಿಯಿಂದ ಫೀಲ್ಡ್ ಮಾರ್ಷಲ್ ಕಾರಿಯಪ್ಪ ವೃತ್ತದಲ್ಲಿ ಭಾರತ ಧ್ವಜ ಹಿಡಿದು ಯೋಧರಿಗೆ ಜೈಕಾರ ಹಾಕಿದರು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಸೈನಿಕರ ಸೇವೆ ಅವಿಸ್ಮರಣೀಯ. ದೇಶದ ರಕ್ಷಣೆಗೆ ತಮ್ಮ ಜೀವ ಮುಡಿಪಾಗಿಟ್ಟು ಸೇವೆ ಸಲ್ಲಿಸುವ ಸೈನಿಕರಿಗೆ ಪ್ರತಿಯೊಬ್ಬರೂ ಋಣಿಯಾಗಿರಬೇಕು. ಇಂತಹ ಮಹಾನ್ ಸೇವೆಯಲ್ಲಿ ತೊಡಗಿರುವ ಯೋಧರನ್ನು ಗೌರವದಿಂದ ಕಾಣಬೇಕು ಎಂದು ಕರೆ ನೀಡಿದರು.

ಮೇಯರ್ ಶಿವಕುಮಾರ್ ಮಾತನಾಡಿ, ದೇಶಕ್ಕಿಂತ ದೊಡ್ಡದು ಅಥವಾ ಮಹತ್ವದ್ದು ಯಾವುದೂ ಇಲ್ಲ ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಂಡು ಹೆಜ್ಜೆ ಇಡಬೇಕು. ನಮ್ಮೆಲ್ಲರ ರಕ್ಷಣೆಗಾಗಿ ದೇಶದ ಗಡಿಯಲ್ಲಿ ಸೇವೆ ಸಲ್ಲಿಸುವ ಸೈನಿಕರು ಮತ್ತು ಕಾರ್ಗಿಲ್ ಕದನದಲ್ಲಿ ವೀರಮರಣ ಹೊಂದಿದ ಯೋಧರನ್ನು ಸ್ಮರಿಸಬೇಕು ಎಂದರು.

ಇಳೈ ಆಳ್ವಾರ್ ಸ್ವಾಮೀಜಿ, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಪಾಲಿಕ ಸದಸ್ಯೆ ಪ್ರಮೀಳಾ ಭರತ್, ಯುವ ಭಾರತ್ ಸಂಘಟನೆ ಅಧ್ಯಕ್ಷ ಜೋಗಿ ಮಂಜು, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷ ಹೇಮನಂದೀಶ್, ಲಕ್ಷ್ಮೀದೇವಿ, ಜ್ಯೋತಿ ರೇಚಣ್ಣ, ರೇಣುಕ ರಾಜ್, ಅರ್ಚಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಚಾಮರಾಜ ಕ್ಷೇತ್ರದ ಯುವ ಮೋರ್ಚಾ ಅಧ್ಯಕ್ಷ ಸಚಿನ್, ಯುವ ಭಾರತ್ ಸಂಘಟನೆಯ ಶರತ್ ಭಂಡಾರಿ, ಆನಂದ್, ಸುರೇಶ್ ಗೋಲ್ಡ್, ಮುತ್ತಣ್ಣ, ಪಂಚಾಕ್ಷರಿ, ವಿಘ್ನೇಶ್ವರ ಭಟ್, ಶ್ರೀನಿವಾಸ್, ಜೀವನ್, ಜಗದೀಶ್, ಕಡಕೊಳ ಜಗದೀಶ್, ಸುಚೇಂದ್ರ, ಚಕ್ರಪಾಣಿ, ನಾಗಶ್ರೀ, ವಿದ್ಯಾ, ನೇಹಾ ನೈನಾ, ಮಧು ಎನ್. ಪೂಜಾರ್, ಜೀವನ್, ಶಿವರಾಜ್, ರವಿಶಂಕರ್ ಉಪಸ್ಥಿತರಿದ್ದರು.



ಮೈಸೂರಿನ ನರಸಿಂಹರಾಜ ವಿಪ್ರ ಸಂಘದ ಆಶ್ರಯದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಸದಸ್ಯರಾದ ಶಂಕರನಾರಾಯಣ, ಸಂಘದ ಅಧ್ಯಕ್ಷ ಕೃಷ್ಣಯ್ಯ, ಕಾರ್ಯದರ್ಶಿ ದಿನೇಶ್, ಚಂದ್ರಶೇಖರ್, ಸತ್ಯನಾರಾಯಣ, ಮಂಜುನಾಥ್, ಆನಂದ್, ಲೀಲಾವತಿ ಇದ್ದರು.

ಜು.30, ಸಕ್ಕರೆ ಕಾಯಿಲೆ ಬಗ್ಗೆ ಅರಿವು

ಮೈಸೂರು,ಜು.26-ಮೈಸೂರಿನ ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್, ಸುಯೋಗ್ ವುಮೆನ್ಸ್ ಹೆಲ್ತ್ ಕ್ಲಬ್ ಹಾಗೂ ಸುಯೋಗ್ ಆಸ್ಪತ್ರೆಗಳ ಸಂಯುಕ್ತಾಶ್ರಯದಲ್ಲಿ ಜು.30ರ ಭಾನುವಾರ ಬೆಳಗ್ಗೆ 10 ಗಂಟೆಗೆ ಸಕ್ಕರೆಕಾಯಿಲೆ ಬಗ್ಗೆ ಅರಿವಿನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಉದ್ಘಾಟಿಸುವರು. ಸುಯೋಗ್ ಡಯಾಬಿಟಿಕ್ ಹೆಲ್ತ್ ಕ್ಲಬ್‌ನ ಅಧ್ಯಕ್ಷ ಎನ್.ನಂಜಪ್ಪ ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮದಲ್ಲಿ ಸರಣಿ ಉಪನ್ಯಾಸ ಮಾಲಿಕೆಯಡಿ ಸಕ್ಕರೆಕಾಯಿಲೆ ಔಷಧಗಳ ಉಪಯೋಗ, ಅಡ್ಡ ಪರಿಣಾಮಗಳು ಹಾಗೂ ಉಪಯೋಗಿಸುವ ಕ್ರಮಗಳ ಬಗ್ಗೆ ತಜ್ಞ ವೈದ್ಯರು ಉಪನ್ಯಾಸ ನೀಡಲಿದ್ದು, ಇದೇ ವೇಳೆ ರೋಗಿಗಳು ತಮ್ಮ ಅನುಮಾನಗಳನ್ನು ವೈದ್ಯರೊಂದಿಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ಮಧುಮೇಹ ಹಾಗೂ ಹೃದ್ರೋಗ ತಜ್ಞ ಡಾ.ಎಸ್.ಪಿ. ಯೋಗಣ್ಣ, ಡಾ.ಮಹೇಶ್, ಡಾ.ರವಿಕುಮಾರ್, ನರರೋಗ ತಜ್ಞರಾದ ಡಾ. ಶಾಸ್ತಾರ ಪನಿಯಾಲ, ಮೂತ್ರಜನಕಾಂಗ ತಜ್ಞರಾದ ಡಾ.ಅರುಣ್‌ಕುಮಾರ್ ಭಾಗವಹಿಸಿ ಶ್ರೋತೃಗಳ ಪ್ರಶ್ನೆಗಳಿಗೆ ಉತ್ತರಿಸಲಿದ್ದಾರೆ. ಸಕ್ಕರೆಕಾಯಿಲೆ ರೋಗಿಗಳು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಕೋರಲಾಗಿದೆ. ಆಸಕ್ತರು ತಮ್ಮ ಹೆಸರನ್ನು 0821-2566966, 9986399862 ಸಂಪರ್ಕಿಸಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.

ಸುವರ್ಣ ಕರ್ನಾಟಕ ಕೇರಳ ಸಮಾಜದ ನೂತನ ಪದಾಧಿಕಾರಿಗಳು



ಮೈಸೂರು,ಜು.26-ಮೈಸೂರು ಜಿಲ್ಲೆಯ ಸುವರ್ಣ ಕರ್ನಾಟಕ ಕೇರಳ ಸಮಾಜದ ಸರ್ವ ಸದಸ್ಯರ ಸಭೆ ಇತ್ತೀಚೆಗೆ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು. ಈ ವೇಳೆ ಸಮಾಜದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಜಿಲ್ಲಾಧ್ಯಕ್ಷರಾಗಿ ಡಾ. ಮಾನು ಬಿ.ಮೆನನ್, ಉಪಾಧ್ಯಕ್ಷರಾಗಿ ಜಾರ್ಜ್‌ಕುಮಾರ್, ಅನಿರುದ್ಧನ್, ಪ್ರಧಾನ ಕಾರ್ಯದರ್ಶಿಯಾಗಿ ಪಿ.ವಿ.ಜಾರ್ಜ್, ಜಂಟಿ ಕಾರ್ಯದರ್ಶಿಗಳಾಗಿ ಪಿ.ಪಿ. ಬಾಬುರಾಜ್ ಮತ್ತು ಸಿ.ಎಂ.ಥಾಮಸ್, ಖಜಾಂಚಿಯಾಗಿ ಶಿಜುಕೃಷ್ಣನ್ ಹಾಗೂ 8 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಮಾಜಿ ಅಧ್ಯಕ್ಷ ಡಾ. ಅನಿಲ್ ಥಾಮಸ್ ಅವರನ್ನು ರಾಜ್ಯಾಧ್ಯಕ್ಷ ಚಂದ್ರಸೇನನ್ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಶಶಿಧರನ್ ಸನ್ಮಾನಿಸಿದರು.

ನಿಧನ



ಹಜರತ್ ಸೈಯದ್ ಅಸ್ಲಂ ಷಾ ಖಾದ್ರಿ

ಮೈಸೂರು, ಜು.26-ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಹಜರತ್ ಸೈಯದ್ ಅಸ್ಲಂ ಷಾ ಖಾದ್ರಿ (69) ಬುಧವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಈ ಸಂಬಂಧ ಬುಧವಾರ ಸಂಜೆ 5.30 ಗಂಟೆಗೆ, ಅಸರ್ ಪ್ರಾರ್ಥನೆಯ ನಂತರ ಮಸೀದಿ ರೆಹಮಾನಿಯ, ಮೈಸೂರು ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು ಸೌತ್, ಮೈಸೂರು ಇಲ್ಲಿ ನಮಾಜ್-ಎ-ಜನಾಜ಼ ನಡೆಯಿತು. ನಂತರ ಮೈಸೂರಿನ ಊಟಿ-ನಂಜನಗೂಡು ರಸ್ತೆಯಲ್ಲಿರುವ ಮುಸ್ಲಿಮರ ರುದ್ರಭೂಮಿಯಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಸರೆ ತ್ಯಾಜ್ಯ ವಿಲೇವಾರಿ ಘಟಕ ಕಾರ್ಯಾರಂಭ

- ಮೊದಲ ಹಂತದಲ್ಲಿ ಹಸಿಕಸ ಸಂಗ್ರಹ
- ಶೇಖರಿಸಿದ ಹಸಿ ಕಸಕ್ಕೆ ಬ್ಯಾಕ್ಟೀರಿಯಾ ಕಲ್ಚರ್ ಸಿಂಪಡಣೆ
- 42 ದಿನದ ನಂತರ ಯಂತ್ರೋಪಕರಣ ಬಳಕೆಗೆ ನಿರ್ಧಾರ

ಮೈಸೂರು, ಜು.26(ಎಂಟಿವೈ)- ಮೈಸೂರಿನ ಎನ್.ಆರ್.ಕ್ಷೇತ್ರದ ವಿವಿಧ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ವೈಜ್ಞಾನಿಕ ವಿಲೇವಾರಿಗಾಗಿ ಕೆಸರೆಯಲ್ಲಿ ನೂತನವಾಗಿ ನಿರ್ಮಿಸಿರುವ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಹಸಿಕಸ ಸಂಗ್ರಹಣೆ ಮಾಡುವ ಕಾರ್ಯ ಆರಂಭವಾಗಿದೆ.

ಹಸಿಕಸದ ರಾಶಿಗೆ ಬ್ಯಾಕ್ಟೀರಿಯಾ ಕಲ್ಚರ್ ಸಿಂಪಡಣಾ ಕಾರ್ಯ ಆರಂಭಿಸುವ ಮೂಲಕ ನೂತನ ಘಟಕ ಪ್ರಾಯೋಗಿಕವಾಗಿ ಕಾರ್ಯಾರಂಭ ಮಾಡಿದೆ.

ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ 7, 8, 9 ವ್ಯಾಪ್ತಿಯ ವಿವಿಧ ವಾರ್ಡ್‌ಗಳಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ನೂತನ ಘಟಕಕ್ಕೆ ರವಾನಿಸಲಾಗುತ್ತಿದ್ದು, ಮಂಗಳವಾರ ಸಂಜೆಯಿಂದಲೇ ಕೆಸರೆಯಲ್ಲಿನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಚಾಲನೆ ನೀಡಲಾಗಿದೆ. ನಗರಪಾಲಿಕೆಯ ಕಸ ಸಾಗಿಸುವ ಟ್ರಕ್ ಮೂಲಕ ಕೆಸರೆ ತ್ಯಾಜ್ಯ ಘಟಕಕ್ಕೆ ಹಸಿ ಕಸ ಕೊಂಡೊಯ್ದು ಶೆಡ್‌ನಲ್ಲಿ ಸುರಿಯಲಾರಂಭಿಸಿದ್ದು, ಹಸಿಕಸದ ರಾಶಿಗೆ ಬ್ಯಾಕ್ಟೀರಿಯಾ ಕಲ್ಚರ್ ಸಿಂಪಡಣಾ ಕಾರ್ಯ ಆರಂಭಿಸಲಾಗಿದೆ ಇನ್ನು ಮುಂದೆ ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಸಂಗ್ರಹವಾಗುವ ತ್ಯಾಜ್ಯ ಈ ನೂತನ ಘಟಕಕ್ಕೆ ವಿಲೇವಾರಿಯಾಗಲಿದೆ. ಎನ್.ಆರ್. ಕ್ಷೇತ್ರದ ಬಹುತೇಕ ವಾರ್ಡ್‌ಗಳಲ್ಲಿ ಹಸಿ ಕಸವೇ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗುತ್ತಿದ್ದು, ಕಾಂಪೋಸ್ಟ್ ಗೊಬ್ಬರ ತಯಾರಿಕೆಗೆ ಪೂರಕವಾಗಿದೆ. ನೂತನ ಘಟಕದಲ್ಲಿ ಕಾಂಪೋಸ್ಟ್ ಗೊಬ್ಬರ ತಯಾರಿಸಲು ಯಂತ್ರೋಪಕರಣಗಳ ಅಳವಡಿಸಲಾಗಿದ್ದು, ಕಾರ್ಯಾರಂಭಕ್ಕೆ ಅಂತಿಮ ಸಿದ್ಧತೆ ಮಾಡಲಾಗಿದೆ. ಎರಡು ದಿನದಿಂದ ಸಂಗ್ರಹಿಸಲಾಗುತ್ತಿರುವ ಹಸಿ ಕಸದ ರಾಶಿಗೆ ಕಾಂಪೋಸ್ಟ್ ಗೊಬ್ಬರ ತಯಾರಿಕೆಗೆ ಬಳಸುವ ರಾಸಾಯನಿಕ ಸಿಂಪಡಿಸಲಾಗುತ್ತಿದೆ. ಈ ದ್ರಾವಣ ಸಿಂಪಡಣೆ ನಂತರ 42 ದಿನದ ಬಳಿಕ ಯಂತ್ರದ ಮೂಲಕ ಪುಡಿ ಮಾಡಲಾಗುತ್ತದೆ. ಆ ಬಳಿಕವಷ್ಟೇ ಗುಣಮಟ್ಟದ ಕಾಂಪೋಸ್ಟ್ ಗೊಬ್ಬರ ತಯಾರಾಗಲಿದೆ. ಇದಕ್ಕಾಗಿ ಹಸಿಕಸ ಸಂಗ್ರಹಣೆ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.



ಕೆಸರೆಯಲ್ಲಿ ನೂತನವಾಗಿ ನಿರ್ಮಿಸಿರುವ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಹಸಿಕಸ ಸಂಗ್ರಹ ಕಾರ್ಯ ಆರಂಭಿಸಲಾಗಿದೆ.

ಮೈಸೂರು ಮಹಾನಗರಪಾಲಿಕೆ ವತಿಯಿಂದ ನೂತನವಾಗಿ ಸ್ಥಾಪಿಸಲಾಗಿರುವ ಕೆಸರೆ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಪ್ರತಿದಿನ 200 ಟನ್ ತ್ಯಾಜ್ಯ ವಿಲೇವಾರಿ ಮಾಡುವ ಸಾಮರ್ಥ್ಯ ಹೊಂದಿದೆಯಾದರೂ ಪ್ರಾಯೋಗಿಕವಾಗಿ 50 ಟನ್ ಸಾಮರ್ಥ್ಯದ ತ್ಯಾಜ್ಯ ವಿಲೇವಾರಿ ಮಾಡುವ ಕಾರ್ಯ ಆರಂಭಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪೂರ್ಣ ಪ್ರಮಾಣದಲ್ಲಿ ಈ ಘಟಕವನ್ನು ಮುನ್ನಡೆಸಲು ಟೆಂಡರ್ ಪ್ರಕ್ರಿಯೆ ನಡೆಸಿ, ಘಟಕದ ನಿರ್ವಹಣೆಯ ಜವಾಬ್ದಾರಿ ನೀಡಲಾಗುತ್ತದೆ. ಅಲ್ಲಿಯವರೆಗೂ ಮೈಸೂರು ನಗರಪಾಲಿಕೆ ವತಿಯಿಂದಲೇ ತಾತ್ಕಾಲಿಕವಾಗಿ ಕಾಂಪೋಸ್ಟ್ ಗೊಬ್ಬರ ತಯಾರಿಕೆ ಕ್ರಮ ಕೈಗೊಳ್ಳಲಾಗಿದೆ.

ಅರ್ಜಿ ಆಹ್ವಾನ

ಮೈಸೂರು,ಜು.26-2021-22, 2022-23ನೇ ಸಾಲಿನಲ್ಲಿ ಪ್ರಥಮ ಮಾನ್ಯತೆ, ಅದು ನವೀಕರಣವಾಗದಿರುವಂತಹ ಶಾಲೆಗಳು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಲು ಹಾಗೂ 2023-24ನೇ ಸಾಲಿನಲ್ಲಿ ಪ್ರಥಮ ಮಾನ್ಯತೆ ಹಾಗೂ ನವೀಕರಣ ಸಂಬಂಧ ಶಾಲಾ ಆಡಳಿತ ಮಂಡಳಿಗಳು ವೆಬ್‌ಸೈಟ್ ಮೂಲಕ ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆ ಸಲ್ಲಿಸಿ ನವೀಕರಿಸಿಕೊಳ್ಳಲು ಸೂಚಿಸಲಾಗಿದೆ. ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆ ಪಡೆಯುವ ಸಂಬಂಧ ಅರ್ಜಿ ಸಲ್ಲಿಸಲು ಸೆ.11 ಕಡೇ ದಿನಾಂಕವಾಗಿದೆ. ಒಂದು ವೇಳೆ ನಿಗದಿತ ಅವಧಿಯೊಳಗೆ ಮಾನ್ಯತೆ ಪಡೆಯದ ಆಡಳಿತ ಮಂಡಳಿಗಳಿಗೆ ತಮ್ಮ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಸರ್ಕಾರಿ, ಮಾನ್ಯತೆ ಹೊಂದಿರುವ ಹತ್ತಿರದ ಶಾಲೆಗಳಿಗೆ ಟ್ಯಾಗ್ ಮಾಡಲಾಗುವುದು. ಆರ್‌ಟಿಇ ಶುಲ್ಕ ಮರು ಪಾವತಿ ಸಂಬಂಧದ ಎಲ್ಲಾ ಪರಿಣಾಮಗಳಿಗೂ ಸಂಬಂಧಿಸಿದ ಆಡಳಿತ ಮಂಡಳಿಯವರನ್ನೇ ಹೊಣೆಗಾರರನ್ನಾಗಿಸುವುದಲ್ಲದೇ, ಮಾನ್ಯತೆ ನವೀಕರಣ ಮಾಡಿಕೊಳ್ಳದ ಪ್ರಾಥಮಿಕ, ಪ್ರೌಢಶಾಲೆಗಳ ಕುರಿತಂತೆ ಇಲಾಖಾ ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.7.2023 ಗುರುವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3ಗಂಟೆಯವರೆಗೆ

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ, ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
■ **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಪ್ರತಿಭಾನ್ವೇಷಣೆ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ, ಮುಖ್ಯ ಅತಿಥಿಗಳು: ಗುಬ್ಬಿ ತಾಲೂಕು ಖಜಾನೆ ಇಲಾಖೆ ಸಹಾಯಕ ನಿರ್ದೇಶಕಿ ಕು. ಜೆ.ಪಿ.ಸುಷ್ಮಾ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 10.30ಕ್ಕೆ.
■ **ಶ್ರೀ ದುರ್ಗಾ ಫೌಂಡೇಷನ್ ಹಾಗೂ ಶ್ರೀ ಸಂಜೀವಿನಿ ಫೌಂಡೇಷನ್:** ಮಹಿಳೆಯರಿಗೆ ಉಚಿತ ಕಂಪ್ಯೂಟರ್, ಟೈಲರಿಂಗ್, ಮೇಕಪ್, ಹ್ಯಾಂಡ್‌ವರ್ಕ್ ತರಬೇತಿ ಕಾರ್ಯಾಗಾರ, ಮಹಿಳಾ ಅಸ್ಮಿತೆ ಕುರಿತು ಕಾರ್ಯಾಗಾರ, ಸಾನ್ನಿಧ್ಯ: ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳು, ಅತಿಥಿಗಳು: ಸಂಚಾರಿ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಎಚ್.ಪರಶುರಾಮಪ್ಪ, ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಪುಷ್ಪಾ ಅಮರನಾಥ್, ಆರಕ್ಷಕ ನಿರೀಕ್ಷಕ ಸಿ.ಎಂ.ರವೀಂದ್ರ, ಕರಾಮುವಿ ಪ್ರಾಧ್ಯಾಪಕರಾದ ಡಾ.ಆರ್.ಎಚ್. ಪವಿತ್ರ, ಡಾ.ಶೋಭಾರಾಣಿ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾನಂದೀಶ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಶಿಕ್ಷಣ ತಜ್ಞ ದೀಪಾದನಸಿಂಗ್, ಆರ್.ವಾಸುದೇವ ಭಟ್, ಎಂ. ಕೃಷ್ಣದಾಸ್ ಪುರಾಣಿಕ್, ರವಿಶಾಸ್ತ್ರಿ, ಸುಬ್ರಹ್ಮಣ್ಯ ಎಂ.ತಂತ್ರಿ, ಫೌಂಡೇಷನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಶ್ರೀ ಸಂಜೀವಿನಿ ಫೌಂಡೇಷನ್ ಅಧ್ಯಕ್ಷ ಭರತ್‌ಕುಮಾರ್, ಅಶ್ವಿನಿಗೌಡ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.
■ **ಮಹಾಜನ ವಿದ್ಯಾಸಂಸ್ಥೆ, ಮಹಾಜನ ಪ್ರಥಮ ದರ್ಜೆ ಕಾಲೇಜು:** ವಿದ್ಯಾರ್ಥಿ ಸಂಸತ್ ಮತ್ತು ಪ್ರತಿಭಾ ವೇದಿಕೆ ಸಮಾರೋಪ ಸಮಾರಂಭ, ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ, ಮುಖ್ಯ ಅತಿಥಿಗಳು: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ.ಮಾತಾ ಬಿ.ಮಂಜಮ್ಮ ಜೋಗತಿ, ಸಮಾರೋಪ ಭಾಷಣ: ಕರ್ನಾಟಕ ಜಾನಪದ ಅಕಾಡೆಮಿ ಕುಲಸಚಿವೆ ಎನ್.ನಮ್ರತ, ಅಧ್ಯಕ್ಷತೆ: ಕು.ಸೃಷ್ಟಿ ಆರ್.ಜೋಯ್ಸ್, ಉಪಸ್ಥಿತರು: ಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್.ರಮೇಶ್, ಸ್ಥಳ: ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ-ಬಾನುಲಿ ಸರಣೀ, ಪ್ರಸ್ತುತಿ- ಪ್ರಭುಸ್ವಾಮಿ ಮಳಿಮಠ, 6.40 ಪದಸಂಸ್ಕೃತಿ, ಪ್ರಸ್ತುತಿ- ಪರಮೇಶವರ ವಿ.ಭಟ್, 7.15 ಭಾವಗೀತೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ-ಮೈಸೂರು ಉಮೇಶ್, 8.40 ಪಂಪನ ಪೆಂಪು-ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ-ಜಿ. ಶಾಂತಕುಮಾರ್, 9.05 ವಸುದೈವ ಕುಟುಂಬಕಂ -ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಓಲೇಟಿ ವೆಂಕಟೇಶ್ವರುಲು-ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ-ರಾಧಾ ನಾಗರಾಜ್, 1.00 ಪ್ರಗತಿ ಪಥ-ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ-ಭಾಗ್ಯಮ್ಮ ಮತ್ತು ಸಂಗಡಿಗರು, 4.30 ಕನ್ನಡ ಭಾರತಿ-ಸಾಹಿತ್ಯ ಸಂಗೀತಗಳ ಸುಗಮ ಸಂಯೋಜನೆ ಕುರಿತು ರವೀಂದ್ರ ಮುರೂರು ಅವರೊಡನೆ ಸಂವಾದ. ನಡೆಸಿಕೊಡುವವರು ದಿವಾಕರ ಹೆಗಡೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ-ಕಿಸಾನ್‌ವಾಣಿ-ಬಿತ್ತನೆ ಬೀಜದ ಆಯ್ಕೆ ಕುರಿತು ಡಾ.ಹೆಚ್.ಎಂ.ಪಲ್ಲವಿ ಅವರೊಂದಿಗೆ ಸಂದರ್ಶನ, ಸಂದರ್ಶಕರು-ಎನ್.ಕೇಶವಮೂರ್ತಿ, 8.15 ಯುವವಾಣಿ-ಸಂವಹನ ಕೌಶಲಗಳ ಪ್ರಾಮುಖ್ಯತೆ ಕುರಿತು ಚರ್ಚೆಯಲ್ಲಿ ಭಾಗವಹಿಸುವವರು ಕ್ರೈಸ್ಟ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಅಂಡ್ ಆರ್ಟ್ಸ್‌ನ ವಿದ್ಯಾರ್ಥಿಗಳಾದ ಅಮೃತ್ ಸತೀಶ್, ಭಾವನಾ ಎಜ್ಜೈನ್., ಎಂ.ಆರ್.ಉಜ್ವಲ್ ನೀಲಮ್ಮ ಮತ್ತು ಪುನೀತ್ ಪಾರೀಕ್. ನಡೆಸಿಕೊಡುತ್ತಾರೆ ಬಿ.ದಿಗ್ವಿಜಯ್, 9.30 ಕನ್ನಡ ಭಾರತಿ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪದ ವರದಿ

■ **ಮೈಸೂರು ವಿಶ್ವವಿದ್ಯಾನಿಲಯ:** ಸಂಸ್ಥಾಪಕರ ದಿನಾಚರಣೆ, ಉಪಸ್ಥಿತರು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆಂಧ್ರಪ್ರದೇಶದ ವಿಜ್ಞಾನ ವಿವಿ ಕುಲಪತಿ ಪ್ರೊ. ಪಿ.ನಾಗಭೂಷಣ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಸ್ಥಳ: ಕ್ರಾಫರ್ಡ್ ಭವನ, ಬೆಳಗ್ಗೆ 11.30ಕ್ಕೆ.
■ **ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ :** ಉಚಿತ ಕೃತಕ ಕಾಲು ಜೋಡಣೆ ಹಾಗೂ ವಿತರಣಾ ಕಾರ್ಯಕ್ರಮ, ಉದ್ಘಾಟನೆ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ಅಧ್ಯಕ್ಷತೆ : ಸಲಹೆಗಾರ ಡಾ. ಎಂ.ಆರ್. ಸೀತಾರಾಮ್, ಮುಖ್ಯ ಅತಿಥಿಗಳು : ರವಿ ಅಯ್ಯಂಗಾರ್, ಶ್ರೀಮತಿ ಕೆ.ಜಿ.ವಿಮಲ, ಡಾ. ಅಂಜು ಮಜೀದ್, ಸ್ಥಳ: ಸಿಎಸ್‌ಐ ವೆಸ್ಲಿ ಮಹಾ ದೇವಾಲಯ, ಬೆಳಗ್ಗೆ 11.30ಕ್ಕೆ.
■ **ಶ್ರೀ ವ್ಯಾಸರಾಜಪುರ ಮಠ, ಸೋಸಲೆ (ಮುನಿತ್ರಮ ಪೀಠ), ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿ. ಶ್ರೀನಿಧಿ ಆಚಾರ್ಯ ಪ್ಯಾಟಿ ಅವರಿಂದ ಬಾಲಕಾಂಡ ಕುರಿತು ಪ್ರವಚನ, ಸ್ಥಳ: ವಿದ್ಯಾಪೀಠ, ಕೃಷ್ಣಮೂರ್ತಿಪುರಂ, ಸಂಜೆ 6ರಿಂದ 7ರವರೆಗೆ.
■ **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು - ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.
■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮುಂದುವರೆದ ಆನ್‌ಲೈನ್ ದೋಖಾ

ವಿದ್ಯುತ್ ಬಿಲ್ ಕಟ್ಟಲು ವಾಟ್ಸಾಪ್ ಲಿಂಕ್ ಕಳಿಸಿ 5 ಲಕ್ಷ ರೂ. ವಂಚನೆ



ಮೈಸೂರು,ಜು.26–ವಿದ್ಯುತ್ ಬಿಲ್ ಕಟ್ಟುವಂತೆ ವಾಟ್ಸಾಪ್‌ಗೆ ಲಿಂಕ್ ಕಳುಹಿಸಿ ಬ್ಯಾಂಕ್ ಉದ್ಯೋಗಿಯೊಬ್ಬರ ಖಾತೆಯಿಂದ 5 ಲಕ್ಷ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಚಿತ್ರಭಾನು ರಸ್ತೆ ನಿವಾಸಿ ವಿ. ಉಷಾರಾಣಿ(60) ವಂಚನೆಗೊಳಗಾದವರಾಗಿದ್ದು, ವಿದ್ಯುತ್ ಬಿಲ್ ಕಟ್ಟುವಂತೆ ಇವರ ವಾಟ್ಸಾಪ್‌ಗೆ ಲಿಂಕ್‌ವೊಂದು ರವಾನೆಯಾಗಿದೆ. ನಂತರ ವಿವಿಧ ನಂಬರ್‌ಗಳಿಂದ ಕರೆ ಮಾಡಿ ವಿದ್ಯುತ್ ಬಿಲ್ ಕಟ್ಟುವಂತೆ ಒತ್ತಾಯಿಸಿದ್ದರಿಂದ ಅವರು ವಾಟ್ಸಾಪ್‌ನಲ್ಲಿ ತಮಗೆ ಬಂದಿದ್ದ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಕ್ವಿಕ್ ಸಪೋರ್ಟ್ ಆ್ಯಪ್ ಇನ್‌ಸ್ಟಾಲ್ ಆಗಿ ನಂತರ ಇವರ ಖಾತೆಯಿಂದ 5 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ.

ಮತ್ತೊಂದು ಪ್ರಕರಣದಲ್ಲಿ ಪಾರ್ಟ್‌ಟೈಮ್ ಜಾಬ್ ನೀಡುವುದಾಗಿ ನಂಬಿಸಿ ಶಿಕ್ಷಕಿಯಿಂದ 3,99,700 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಟಿ.ಕೆ.ಲೇಔಟ್ ನಿವಾಸಿಯಾಗಿರುವ ಶಿಕ್ಷಕಿ ಅನುರಾಧ ಪ್ರಕಾಶ್ (60) ಅವರ ವಾಟ್ಸಾಪ್‌ಗೆ 84876863185 ಸಂಖ್ಯೆಯಿಂದ ಪಾರ್ಟ್‌ಟೈಮ್ ಜಾಬ್ ಇರುವುದಾಗಿಯೂ ಯೂಟ್ಯೂಬ್ ಚಾನೆಲ್ ಲೈಕ್ ಮಾಡಿ ಸ್ಕ್ರೀನ್‌ಶಾಟ್ ಕಳುಹಿಸಿದರೆ ಹಣ ನೀಡುವುದಾಗಿಯೂ ತಿಳಿಸಲಾಗಿದೆ. ನಂತರ ಇವರನ್ನು ಟೆಲಿಗ್ರಾಂ ಗ್ರೂಪ್‌ವೊಂದರಲ್ಲಿ ಸೇರಿಸಿ ಹಣ ಹೂಡಿಕೆ ಮಾಡಿದರೆ ಕಮಿಷನ್ ನೀಡುವುದಾಗಿ ನಂಬಿಸಲಾಗಿದೆ. ಇವರು 3,99,700 ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಪಾರಗನ್ ಡೀಲರ್‌ಶಿಪ್ ಪಡೆದು 1.30 ಕೋಟಿ ವಂಚನೆ; ವ್ಯಕ್ತಿ ವಿರುದ್ಧ ಕೇಸ್

ಮೈಸೂರು, ಜು. 26– ಮೈಸೂರಿನ ವ್ಯಕ್ತಿಯೋರ್ವ ಬೆಂಗಳೂರಿನ ಪಾರಗನ್ ಕಂಪನಿಯ ಡೀಲರ್‌ಶಿಪ್ ಪಡೆದು ಆ ಕಂಪನಿಗೆ 1.13 ಕೋಟಿ ರೂ. ವಂಚಿಸಿದ್ದಾನೆ ಎಂಬ ಆರೋಪದ ಮೇರೆಗೆ ಕ್ರಿಮಿನಲ್ ಕೇಸ್ ದಾಖಲಾಗಿದೆ.

ಕ್ರೈಂ ಬಾಕ್ಸ್

ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿರುವ ಪಾರಗನ್ ಪಾಲಿಮರ್ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ಗೆ 2018ರ ಜುಲೈ 22ರಂದು ಲಕ್ಷ ರೂ. ಡಿಪಾಸಿಟ್ ಮಾಡಿದ್ದ ಮೈಸೂರಿನ ಸಾತಗಳ್ಳಿ ನಿವಾಸಿ ಮುದಾಸಿರ್ ಉಲ್ಲಾ ಎಂಬಾತ ಎಪಿ ಏಜೆನ್ಸಿ ಹೆಸರಿನಲ್ಲಿ ಡೀಲರ್‌ಶಿಪ್ ಪಡೆದಿದ್ದ. 4 ವರ್ಷಗಳ ಕಾಲ ಸರಿಯಾಗಿ ವ್ಯವಹಾರ ನಡೆಸುತ್ತಿದ್ದ ಈತ ನಂತರ ಕಂಪನಿಯಿಂದ ಪಡೆದಿದ್ದ ವಸ್ತುಗಳಿಗೆ ಹಣ ಪಾವತಿಸಿರಲಿಲ್ಲ ಹಾಗೂ ಸಂಪರ್ಕಕ್ಕೂ ಸಿಗುತ್ತಿರಲಿಲ್ಲ. ಇದೇ ಜುಲೈ 11ರಿಂದ ಆತನ ಮೊಬೈಲ್ ಸ್ವಿಚ್‌ಆಫ್ ಆಗಿದೆ.

ಈ ಹಿನ್ನೆಲೆಯಲ್ಲಿ ಕಂಪನಿಯ ಏರಿಯಾ ಹೆಡ್ ವಿನೋದ್‌ಕುಮಾರ್ ಅವರು ಮೈಸೂರಿಗೆ ಬಂದು ಎಪಿ ಏಜೆನ್ಸಿ ವಿಳಾಸಕ್ಕೆ ಭೇಟಿ ನೀಡಿದಾಗ ಅದಾಗಲೇ ಆತ ಆ ಜಾಗವನ್ನು ಖಾಲಿ ಮಾಡಿ ಹೋಗಿದ್ದಾನೆ ಎಂಬುದು ಗೊತ್ತಾಗಿದೆ. ನಂತರ ಕಲ್ಯಾಣಗಿರಿನಗರದಲ್ಲಿರುವ ಆತನ ಮನೆಗೆ ಹೋದಾಗ ಮನೆಯನ್ನು ಮಾರಾಟ ಮಾಡಿ ತಲೆಮರೆಸಿಕೊಂಡಿರುವುದು ಗೊತ್ತಾಯಿತು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿನೋದ್ ಕುಮಾರ್ ತಿಳಿಸಿದ್ದು, ಈತ ತಮ್ಮ ಕಂಪನಿಯಿಂದ 1,13,96,825 ರೂ.ಗಳ ವಸ್ತುಗಳನ್ನು ಖರೀದಿಸಿ ಹಣ ನೀಡದೇ ವಂಚಿಸಿದ್ದಾನೆ ಎಂದು ತಿಳಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಉದಯಗಿರಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬೈಕ್ ನಂಬರ್ ಪ್ಲೇಟ್ ಮೇಲೆ ಬಿಳಿ ಸ್ಟಿಕ್ಕರ್ ಅಂಟಿಸಿದವನ ವಿರುದ್ಧ ಪ್ರಕರಣ ದಾಖಲು

ಮೈಸೂರು,ಜು.26–ಯುವಕನೋರ್ವ ಬೈಕ್‌ನ ನಂಬರ್ ಪ್ಲೇಟ್‌ಗಳ ಮೇಲೆ ಬಿಳಿ ಸ್ಟಿಕ್ಕರ್ ಅಂಟಿಸಿ ಚಾಲನೆ ಮಾಡುತ್ತಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಗಾಂಧಿನಗರ ನಿವಾಸಿ ಎಸ್. ಪ್ರಫುಲ್ (20) ಆರೋಪಿಯಾಗಿದ್ದು, ಜುಲೈ 24ರಂದು ಸಂಜೆ 4 ಗಂಟೆ ಸುಮಾರಿನಲ್ಲಿ ದೇವರಾಜ ಸಂಚಾರ ಠಾಣೆಯ ಕೋಬ್ರಾ ಸಿಬ್ಬಂದಿ ಗಸ್ತು ತಿರುಗುತ್ತಿದ್ದ ವೇಳೆ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಪಾರ್ಕಿಂಗ್ ಸ್ಥಳದಲ್ಲಿ ಬಜಾಜ್ ಪಲ್ಸರ್ ಎನ್–160 ಬೈಕ್‌ನ ಎರಡೂ ಬದಿಯ ನಂಬರ್ ಪ್ಲೇಟ್‌ಗಳಿಗೆ ಬಿಳಿ ಬಣ್ಣದ ಸ್ಟಿಕ್ಕರ್ ಅಂಟಿಸಿ ಮರೆಮಾಚಿರುವುದು ಕಂಡುಬಂದಿದೆ. ಪೊಲೀಸರು ಬೈಕನ್ನು ವಶಕ್ಕೆ ಪಡೆಯುವ ವೇಳೆಗೆ ಅಲ್ಲಿಗೆ ಪ್ರಫುಲ್ ಬಂದಿದ್ದು, ಇದು ತನ್ನದೇ ಬೈಕ್ ಎಂದು ತಿಳಿಸಿದ್ದಲ್ಲದೇ, ಕೆಎ 55–ಇಸಿ 5650 ಈ ಬೈಕ್‌ನ ಸಂಖ್ಯೆ ಎಂದು ಹೇಳಿದ್ದಾನೆ. ಆದರೆ, ನಂಬರ್ ಪ್ಲೇಟ್ ಮೇಲೆ ಸ್ಟಿಕ್ಕರ್ ಅಂಟಿಸಿದ್ದು ಏಕೆ ಎಂಬುದರ ಬಗ್ಗೆ ಆತ ಸರಿಯಾದ ಮಾಹಿತಿ ನೀಡಿಲ್ಲ. ಈತ ಮೋಸ ಮಾಡುವ ಅಥವಾ ಅಪರಾಧ ಎಸಗುವ ಉದ್ದೇಶದಿಂದ ಬೈಕ್ ನಂಬರ್ ಮರೆಮಾಚಿದ್ದಾನೆ ಎಂದು ದೇವರಾಜ ಸಂಚಾರ ಠಾಣೆ ಕಾನ್ಸ್‌ಟೇಬಲ್ ಆನಂದ್ ಬಿ.ವಲಿ ನೀಡಿದ ದೂರಿನನ್ವಯ ದೇವರಾಜ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 420, 482ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಸಾಫ್ಟ್‌ವೇರ್ ಇಂಜಿನಿಯರ್ ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು



ಮೈಸೂರು, ಜು. 26– ಸಾಫ್ಟ್‌ವೇರ್ ಇಂಜಿನಿಯರ್ ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ಬೆಲವತ್ತ ಗ್ರಾಮದಲ್ಲಿ ನಡೆದಿದೆ.

ಮೇಟಗಳ್ಳಿಯಲ್ಲಿರುವ ಐಟಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಕೆ.ಪಿ. ದೇವರಾಜ್(33) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರ ಪತ್ನಿ ಗರ್ಭವತಿಯಾಗಿದ್ದು, ಜುಲೈ 12ರಂದು ದಾವಣಗೆರೆಯ ತವರು ಮನೆಗೆ ಹೋಗಿದ್ದಾರೆ. ಅವರೊಂದಿಗೆ ದೇವರಾಜ್ ಕೂಡ ಹೋಗಿದ್ದು, ಇವರ ಮನೆಯ ಮೊದಲ ಮಹಡಿಯಲ್ಲಿ ವಾಸವಿರುವ ಸೂರಜ್ ಎಂಬುವರಿಗೆ ಮನೆಯ ಕೀಯನ್ನು ನೀಡಿ ಫಿಶ್ ಟ್ಯಾಂಕ್‌ಗೆ ಆಹಾರ ಹಾಕುವಂತೆ ಮನವಿ ಮಾಡಿಕೊಂಡಿದ್ದರು.

ಸೂರಜ್ ಅವರು ಜುಲೈ 22ರಂದು ಬೆಳಗ್ಗೆ ಫಿಶ್ ಟ್ಯಾಂಕ್‌ಗೆ ಆಹಾರ ಹಾಕಿ ಬೆಂಗಳೂರಿಗೆ ಹೋಗಿದ್ದಾರೆ. ಜುಲೈ 25ರಂದು ಬೆಳಗ್ಗೆ ದೇವರಾಜ್ ಹಿಂತಿರುಗಿದಾಗ ಅವರ ಮನೆಯ ಡೋರ್ ಲಾಕ್ ಅನ್ನು ಮೀಟಿ ಒಳನುಗ್ಗಿದ ಖದೀಮರು, ವಾರ್ಡ್‌ರೋಬ್‌ಗಳನ್ನು ಮುರಿದು ಅದರಲ್ಲಿದ್ದ 55 ಗ್ರಾಂ ತೂಕದ ಚಿನ್ನಾಭರಣ ಹಾಗೂ 60 ಗ್ರಾಂ ತೂಕದ ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಎನ್.ಆರ್.ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲ್ಯಾನ್ಸ್‌ಡೌನ್ ಕಟ್ಟಡದ ಬಳಿ ಸ್ಕೂಟರ್ ಕಳವು



ಮೈಸೂರು,ಜು.26–ಮೈಸೂರಿನ ಲ್ಯಾನ್ಸ್‌ಡೌನ್ ಕಟ್ಟಡದ ಹಿಂಭಾಗ ನಿಲ್ಲಿಸಿದ್ದ ಸ್ಕೂಟರ್ ಕಳವು ಮಾಡಲಾಗಿದೆ. ರಾಜೀವ್‌ನಗರ ನಿವಾಸಿ ಅಬ್ದುಲ್ ವಹಾಬ್ ಎಂಬುವರು ಜು.23ರಂದು ಬೆಳಗ್ಗೆ 11.30ರಲ್ಲಿ ಲ್ಯಾನ್ಸ್‌ಡೌನ್ ಕಟ್ಟಡದ ಹಿಂಭಾಗವಿರುವ ಮಾಡ್ರರ್ನ್ ಸೀವಿಂಗ್ ಮೆಷಿನ್ ಅಂಗಡಿ ಮುಂಭಾಗ ಸುಜುಕಿ ಆಕ್ಸೆಸ್–125 ಸ್ಕೂಟರ್ (ಕೆಎ 09–ಹೆಚ್‌ವಿ 4949) ಅನ್ನು ನಿಲ್ಲಿಸಿ, ಕೀಯನ್ನು ಮರೆತು ಸ್ಕೂಟರ್‌ನಲ್ಲೇ ಬಿಟ್ಟು ಹೋಗಿದ್ದಾರೆ. 12 ಗಂಟೆಗೆ ಹಿಂತಿರುಗಿ ಬಂದು ನೋಡುವಷ್ಟರಲ್ಲಿ ಸ್ಕೂಟರ್ ಕಳವಾಗಿದೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಅವರ ಪುತ್ರ ಮಹಮದ್ ಇದ್ರಿಸ್ ಖಾನ್ ಪ್ರಕರಣ ದಾಖಲಿಸಿದ್ದಾರೆ.

ಡಾ.ಪುರುಷೋತ್ತಮ ಬಿಳಿಮಲೆ ಅವರಿಂದ ಉಪನ್ಯಾಸ ಮಾಲೆ

ಮೈಸೂರು, ಜು. 26– ಮೈಸೂರಿನ ಕುವೆಂಪುನಗರದಲ್ಲಿರುವ ಕಲಾಸುರುಚಿ ರಂಗಮನೆಯಲ್ಲಿ ಜುಲೈ 28, 29 ಮತ್ತು 30ರಂದು ಡಾ.ಪುರುಷೋತ್ತಮ ಬಿಳಿಮಲೆ ಅವರಿಂದ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯ ಕುರಿತು ಉಪನ್ಯಾಸ ಮಾಲೆ ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಹಳೆ ಡಿಸಿ ಕಚೇರಿ ಕಟ್ಟಡ ಸಂರಕ್ಷಣೆ

● ಪಾರಂಪರಿಕ ಸಂರಕ್ಷಣಾ ಸಮಿತಿ ನಿರ್ಧಾರ ● ಮೈಸೂರಿನಲ್ಲಿನ ಡಿಜಿಟಲ್ ಜಾಹೀರಾತು ಫಲಕಗಳ ತೆರವು

ಮೈಸೂರು, ಜು.26(ಎಂಕೆ)– ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡ ಸಂರಕ್ಷಣೆ ಜೊತೆಗೆ ನಗರದೆಲ್ಲೆಡೆ ಇರುವ ಡಿಜಿಟಲ್ ಜಾಹೀರಾತು(ಎಲ್‌ಇಡಿ ಸ್ಕ್ರೀನ್) ಫಲಕಗಳನ್ನು ತೆರವುಗೊಳಿಸಲು ಪಾರಂಪರಿಕ ಸಂರಕ್ಷಣಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು.

ಬುಧವಾರ ಹಳೆ ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೈಸೂರು ಪಾರಂಪರಿಕ ನಗರವಾಗಿದೆ. ಪಾರಂಪರಿಕ ನಗರದಲ್ಲಿ ಡಿಜಿಟಲ್ ಜಾಹೀರಾತು ಫಲಕಗಳನ್ನು ಅಳವಡಿಸುವಂತಿಲ್ಲ. ಆದ್ದರಿಂದ ಕೂಡಲೇ ತೆರವುಗೊಳಿಸಬೇಕು ಹಾಗೂ ಹಳೆ ಜಿಲ್ಲಾಧಿಕಾರಿಗಳ ಕಚೇರಿಯನ್ನು ಮ್ಯೂಸಿಯಂ ಅಥವಾ ಇನ್ನಿತರೆ ಕಾರ್ಯಗಳಿಗೆ ಬಳಸುವ ಮೊದಲು ಸಂರಕ್ಷಣೆ ಮಾಡಲು ತೀರ್ಮಾನಿಸಲಾಯಿತು.



ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು ಮಾತನಾಡಿ, ಮೈಸೂರನ್ನು ಪಾರಂಪರಿಕ ನಗರಿ ಎಂದು ಕರೆಯಲಾಗುತ್ತದೆ. ನೂರಾರು ಪಾರಂಪರಿಕ ಕಟ್ಟಡಗಳನ್ನು ಹೊಂದಿರುವ ನಗರದಲ್ಲಿ ಡಿಜಿಟಲ್ ಜಾಹಿರಾತು ಫಲಕಗಳನ್ನು ಅಳವಡಿಸುವಂತಿಲ್ಲ. ಅಲ್ಲದೆ ಡಿಜಿಟಲ್ ಜಾಹೀರಾತು ಫಲಕಗಳಿಂದ ವಾಹನ ಸವಾರರಿಗೆ ಕಿರಿಕಿರಿಯುಂಟಾಗುತ್ತಿದೆ ಎಂದು ಮನವರಿಕೆ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ರಾಮಸ್ವಾಮಿ ವೃತ್ತ, ಒಂಟಿಕೊಪ್ಪಲು ವೃತ್ತ, ಕೆಎಸ್‌ಒಯು, ಆಯಿಷ್ ಸೇರಿದಂತೆ ಹಲವೆಡೆ ಎಲ್‌ಇಡಿ ಸ್ಕ್ರೀನ್‌ಗಳಿದ್ದು, ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದನ್ನು ನಾನು ಕೂಡ ಗಮನಿಸಿದ್ದೇನೆ. ಆದ್ದರಿಂದ ಕೂಡಲೇ ನಗರದೆಲ್ಲೆಡೆ ಇರುವ ಡಿಜಿಟಲ್ ಜಾಹೀರಾತು ಫಲಕಗಳನ್ನು ತೆರವುಗೊಳಿಸಬೇಕು. ಈ ಕುರಿತು ಕ್ರಮ ಕೈಗೊಳ್ಳುವಂತೆ ನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿಯವರಿಗೆ ಸೂಚನೆ ನೀಡಿದರು.

ಸಂರಕ್ಷಣೆ ಮೊದಲು: ಹಳೆ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡವನ್ನು ಮ್ಯೂಸಿಯಂ ಮಾಡಿ, ಮೈಸೂರು ವಿವಿಗೆ ಕೊಡಿ ಎಂಬ ಮಾತುಗಳು ಕೇಳಿ ಬರುತ್ತಿವೆ. ಅದರಲ್ಲಿ ಮುಖ್ಯವಾಗಿ ಮ್ಯೂಸಿಯಂ ಮಾಡುವುದು ಸರಿಯಾಗಿದೆ ಎಂಬುದು ಹಲವರ ಅಭಿಪ್ರಾಯವಾಗಿದೆ. ಏನೇ ಆಗಬೇಕಾದರೂ ಮೊದಲ ಕಟ್ಟಡ ಸಂರಕ್ಷಣೆಗೆ ಆಗಬೇಕು. ಆದ್ದರಿಂದ ಸಂರಕ್ಷಣೆ ಆದ್ಯತೆ ನೀಡಿ, ನಂತರ ಕಟ್ಟಡ ಏನಾಗಬೇಕು ಎಂಬುದರ ಕುರಿತು ಚರ್ಚಿಸುವುದು ಒಳಿತು ಎಂದು ನಿರ್ಧರಿಸಲಾಯಿತು.

8ಕ್ಕೂ ಹೆಚ್ಚು ಕಟ್ಟಡಗಳಿಗೆ ಒಪ್ಪಿಗೆ: ಪಾರಂಪರಿಕ ಕಟ್ಟಡಗಳ ಅಕ್ಕ–ಪಕ್ಕದಲ್ಲಿರುವ ಕಟ್ಟಡಗಳ ದುರಸ್ತಿ ಅಥವಾ ನಿರ್ಮಾಣಕ್ಕೆ ಸಂಬಂಧಿಸಿದಂತೆ 8ಕ್ಕೂ ಹೆಚ್ಚು ಕಟ್ಟಡಗಳಿಗೆ ಒಪ್ಪಿಗೆ ನೀಡಲಾಯಿತು. ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಕಾಯ್ದೆ ಅನ್ವಯ ಪಾರಂಪರಿಕ ಕಟ್ಟಡಗಳಿಗಿಂತ ಎತ್ತರ ಕಟ್ಟುವಂತಿಲ್ಲ. ಪಾರಂಪರಿಕ ಕಟ್ಟಡದ ಮಾದರಿಯಲ್ಲಿ ಅಕ್ಕ–ಪಕ್ಕದ ಕಟ್ಟಡಗಳ ಮುಂಭಾಗ ವಿನ್ಯಾಸ ಇರಬೇಕು ಎಂಬುದನ್ನು ಸೂಚಿಸಲಾಯಿತು. ಸಭೆಯಲ್ಲಿ ಮುಡಾ ಆಯುಕ್ತ ದಿನೇಶ್ ಕುಮಾರ್, ಪಾರಂಪರಿಕ ಇಲಾಖೆ ಉಪ ನಿರ್ದೇಶಕಿ ಮಂಜುಳಾ, ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯ ಶಕೀಬುರ್ ರೆಹಮಾನ್, ನಗರಪಾಲಿಕೆ ಹಾಗೂ ಮುಡಾ ಇಂಜಿನಿಯರ್‌ಗಳು ಉಪಸ್ಥಿತರಿದ್ದರು.

ವಚನಗಳಿಗೆ ವಚನದ ಮೂಲಕವೇ ಅರ್ಥ ಹುಡುಕಿದರೆ ಕನ್ನಡಕ್ಕೆ ಲಾಭ

● ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ ಅಭಿಮತ
● ಸಂಪೂರ್ಣ ವಚನಗಳ ಅಧ್ಯಯನಕ್ಕೆ 45 ವರ್ಷ ಬೇಕು



ಮೈಸೂರು,ಜು.26(ಎಂಕೆ)–ವಚನಗಳ ಮುಖಾಂತರವೇ ವಚನಗಳಲ್ಲಿನ ಪದಗಳಿಗೆ ಅರ್ಥ ಹುಡುಕಿದರೆ ಕನ್ನಡಕ್ಕೆ ಬಹಳ ದೊಡ್ಡ ಲಾಭವಾಗಲಿದೆ ಎಂದು ವಿಮರ್ಶಕ ಓ.ಎಲ್. ನಾಗಭೂಷಣಸ್ವಾಮಿ ಅಭಿಪ್ರಾಯಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿಯಲ್ಲಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನದ ಅಂಗವಾಗಿ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಮತ್ತು ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದಿನಕ್ಕೆ ಒಂದೇ ವಚನ ಓದಿ ಅರ್ಥ ಮಾಡಿಕೊಳ್ಳುತ್ತೇನೆ ಎಂದುಕೊಂಡರೆ, ಇರುವ ಅಷ್ಟೂ ವಚನಗಳನ್ನು ಓದಿ ಅರ್ಥ ಮಾಡಿಕೊಂಡು ಮುಕ್ತಾಯಗೊಳಿಸಲು ಸುಮಾರು 45 ವರ್ಷಗಳು ಬೇಕಾಗುತ್ತದೆ ಎಂದು ತಿಳಿಸಿದರು.

ವಚನಗಳನ್ನು ನಾವು ಎಷ್ಟು ಗಮನವಿಟ್ಟು ನೋಡಬೇಕೋ ಅಷ್ಟು ಗಮನವಿಟ್ಟು ನೋಡಿಲ್ಲ ಎನ್ನಿಸುತ್ತದೆ. ನನ್ನ ತಲೆಮಾರಿನ ವಿದ್ವಾಂಸರ ಸೋಮಾರಿತನದಿಂದ ದೊಡ್ಡ ಶಬ್ದ ಸಂಪುಟಗಳಲ್ಲಿ ನನಗೆ ಯಾವ ಪದದ ಅರ್ಥ ಬೇಕಾಗುತ್ತದೆಯೋ ಆ ಪದದ ಅರ್ಥವೇ ಸಿಗುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಪದಗಳ ನಿಘಂಟು: ಇವತ್ತು ವಚನಗಳು ಕಷ್ಟದಲ್ಲಿರುವುದು ಸಂಸ್ಕೃತ ಪದಗಳಿಂದಲ್ಲ. ಸಂಸ್ಕೃತ ಪದಕ್ಕೆ ನಿಘಂಟು ಸಿಗಲಿದೆ. ಆದರೆ ನಮಗೆ ಕಷ್ಟ ಕೊಡುವುದು ಇವತ್ತು ಬಳಕೆಯಲ್ಲಿರುವ ಕನ್ನಡ ಪದಗಳಿಂದ. ಆದ್ದರಿಂದ ನಾವು ವಚನಗಳಲ್ಲಿರುವ ಕನ್ನಡ ಪದಗಳ ನಿಘಂಟು ಮಾಡಬೇಕು. ಪಂಪ ಬಳಸಿರುವ ಕನ್ನಡ ಪದಗಳ ನಿಘಂಟನ್ನು ಮಾಡಬೇಕು. ಆದರೆ ಆ ಸವಾಲನ್ನು ಸ್ವೀಕರಿಸಲು ನಮಗ್ಯಾರಿಗೂ ಶಕ್ತಿ, ಧೈರ್ಯ ಉಳಿದುಕೊಂಡಿಲ್ಲ ಎಂದು ವಿಷಾದಿಸಿದರು.

ವಚನಗಳ ಸಂರಕ್ಷಣೆ: ವಚನ ಸಂರಕ್ಷಣೆ ಮುಂದೇನು? ಎಂಬುದರ ಬಗ್ಗೆ ಮಾತನಾಡಿದ ನವದೆಹಲಿ ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಡಾ.ಪುರುಷೋತ್ತಮ ಬಿಳಿಮಲೆ, ಆಧುನಿಕ ವಿಧಾನದಲ್ಲಿ ವಚನಗಳ ಸಂರಕ್ಷಣೆ ಕಾರ್ಯ ನಡೆಯುತ್ತಿದೆ. 'ವಚನ ಸಂಚಯ' ಎಂಬ ವೆಬ್‌ಸೈಟ್‌ನಲ್ಲಿ 218 ಪುರುಷ ಹಾಗೂ 21 ಮಹಿಳಾ ವಚನಕಾರರ 20,929 ವಚನಗಳಿವೆ. ವಚನಗಳ ಇನ್ನಷ್ಟು ಸಂರಕ್ಷಣೆಗಾಗಿ ಆರ್ಕೈವ್ ನಿರ್ಮಾಣವಾಗಬೇಕು. ಇದರಲ್ಲಿ ವಚನ ಸಂಬಂಧಿತ ಪತ್ರಗಳು, ವರದಿಗಳು, ಲೇಖನಗಳು, ಸಂಘಟನೆಗಳು, ಪುಸ್ತಕಗಳು, ಟಿಪ್ಪಣಿಗಳು, ಡೈರಿಗಳು, ಉಪನ್ಯಾಸಗಳು, ವಚನ ಹಾಡುಗಾರಿಕೆ, ಛಾಯಾಚಿತ್ರಗಳೊಂದಿಗೆ ದೈನಂದಿನ ಚಟುವಟಿಕೆಗಳ ಭಾಗವಾಗಿರಬೇಕು ಎಂದು ಪ್ರತಿಪಾದಿಸಿದರು. ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ಪಿ.ಸಿದ್ಧಾಶ್ರಮ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ವಿಜಯಕುಮಾರಿ ಎಸ್.ಕರಿಕಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್ ಮತ್ತಿತರರಿದ್ದರು.

ಸತೀಶ್ ಜಾರಕಿಹೊಳಿಯಿಂದ ನಿತಿನ್ ಗಡ್ಕರಿ ಭೇಟಿ

ಶಿರಾಡಿಘಾಟ್ ಸುರಂಗ ಸೇರಿ ಹಲವು ಕಾಮಗಾರಿಗಳ ಬಗ್ಗೆ ಚರ್ಚೆ



ದೆಹಲಿ: ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಬುಧವಾರ ದೆಹಲಿಯಲ್ಲಿ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಭೇಟಿ ಮಾಡಿದ್ದು, ಶಿರಾಡಿಘಾಟ್‌ನಲ್ಲಿ ಸುರಂಗ ನಿರ್ಮಾಣ ಸೇರಿದಂತೆ ರಾಜ್ಯದ ಹಲವು ಕಾಮಗಾರಿಗಳ ಬಗ್ಗೆ ಚರ್ಚಿಸಿದ್ದಾರೆ.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸತೀಶ್ ಜಾರಕಿಹೊಳಿ, ರಾಜ್ಯದಲ್ಲಿ ನನೆಗುದಿಗೆ ಬಿದ್ದಿರುವ ಕಾಮಗಾರಿಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ಈ ಕುರಿತಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರ ಒಂದು ಒಪ್ಪಂದಕ್ಕೆ ಬಂದಿವೆ ಎಂದರು.

ಶಿರಾಡಿಘಾಟ್ ಸುರಂಗ ನಿರ್ಮಾಣ, ಗೋಕಾಕ್ ನಗರದಲ್ಲಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣ, ಬೆಳಗಾವಿ ನಗರದ ಹಳೆಯ ಎನ್‌ಎಚ್–4ನ ಪುಣೆ–ಬೆಂಗಳೂರು ರಸ್ತೆಯಲ್ಲಿ ಎಲಿವೇಟೆಡ್ ಕಾರಿಡಾರ್ ನಿರ್ಮಾಣ ಸೇರಿದಂತೆ ವಿವಿಧ ಯೋಜನೆಗಳ ಬಗ್ಗೆ ಚರ್ಚಿಸಿರುವುದಾಗಿ ಜಾರಕಿಹೊಳಿ ತಿಳಿಸಿದ್ದಾರೆ. ಶಿರಾಡಿಘಾಟ್‌ನಲ್ಲಿ ಸುರಂಗ ನಿರ್ಮಾಣಕ್ಕೆ ಅರಣ್ಯ ಸಮಸ್ಯೆ ಇದೆ. 1 ಎಕರೆ ಜಮೀನು ಸಮಸ್ಯೆ ಇರಬಾರದು. ರಾಜ್ಯದಿಂದ ಸ್ಪಷ್ಟ ಪ್ರಸ್ತಾವನೆ ಬೇಕಾಗಿದ್ದು, ಸಿಎಂ ಸಿದ್ದರಾಮಯ್ಯ ಜತೆ ಚರ್ಚಿಸುತ್ತೇನೆ ಎಂದರು. ಇನ್ನು ರಾಜ್ಯದ 38 ರಾಷ್ಟ್ರೀಯ ಹೆದ್ದಾರಿಗಳು ಅಪ್‌ಗ್ರೇಡ್ ಆಗಬೇಕಿದೆ. ಬೆಂಗಳೂರಿನಲ್ಲಿ ಸುರಂಗ ನಿರ್ಮಿಸುವ ಬಗ್ಗೆ ಆಸಕ್ತಿ ವಹಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಪತ್ರ ಕೂಡ ಬರೆದಿದ್ದಾರೆ. ಅಂತಿಮ ಪ್ರಸ್ತಾವನೆ ಮುಂದಿನ ದಿನಗಳಲ್ಲಿ ಇಡಲಿದ್ದೇವೆ. ಯಾರು ಹಣ ಹೂಡಿಕೆ ಮಾಡಬೇಕೆಂದು ನಿರ್ಧಾರ ಮಾಡಬೇಕು ಎಂದರು.

ನೈಸ್ ಯೋಜನೆಯಿಂದ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ



ಬೆಂಗಳೂರು: ನೈಸ್ ರಸ್ತೆ ಯೋಜನೆಯಿಂದ ಭೂಮಿ ಕಳೆದುಕೊಂಡ ರೈತರಿಗೆ ನಿವೇಶನ ಕೊಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಭರವಸೆ ನೀಡಿದರು.

ಬೆಂಗಳೂರಿನ ಸೋಂಪುರ ಗ್ರಾಮದ ರೈತರ ನಿಯೋಗವು ಕುಮಾರಕೃಪಾ ಅತಿಥಿ ಗೃಹದಲ್ಲಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಅಹವಾಲು ಸಲ್ಲಿಸಿದ ವೇಳೆ ಉಪಮುಖ್ಯಮಂತ್ರಿಗಳು ಈ ಬಗ್ಗೆ ಭರವಸೆ ನೀಡಿದರು.

ನೈಸ್ ರಸ್ತೆಗೆ ನಮ್ಮ ಜಮೀನು ಭೂಸ್ವಾಧೀನ ಮಾಡಿಕೊಂಡು 23 ವರ್ಷಗಳಾಗಿವೆ. ಭೂಮಿಗೆ ಪರಿಹಾರ ಮೊತ್ತ ಸಿಕ್ಕಿದೆ. ಆದರೆ, ನಮಗೆ ನಿವೇಶನ ನೀಡುವ ಭರವಸೆ ಈವರೆಗೂ ಈಡೇರಿಲ್ಲ. ಅಧಿಕಾರಿಗಳನ್ನು ಕೇಳಿದರೆ, ಸರ್ಕಾರದಿಂದ ಅನುಮತಿ ಸಿಕ್ಕಿಲ್ಲ ಎಂದು ಹೇಳುತ್ತಿದ್ದಾರೆ. ಯಾವೊಬ್ಬ ರೈತರಿಗೂ ನಿವೇಶನ ಹಂಚಿಕೆ ಮಾಡಿಲ್ಲ. ಸೋಂಪುರ ಗ್ರಾಮಕ್ಕೆ ನೀವು ಭೇಟಿ ನೀಡಿ ಅಲ್ಲಿನ ಜನರ ಸಮಸ್ಯೆ ಖುದ್ದು ಪರಿಶೀಲಿಸಿ, ಸಮಸ್ಯೆ ಬಗೆಹರಿಸಬೇಕು ಎಂದು ರೈತರು ಮನವಿ ಮಾಡಿಕೊಂಡರು.

ಇದಕ್ಕೆ ಪ್ರತಿಕ್ರಿಯಿಸಿದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಈ ವಿಚಾರವಾಗಿ ಮೊನ್ನೆಯಷ್ಟೇ ಅಧಿಕಾರಿಗಳ ಜತೆ ಚರ್ಚಿಸಿದೆ. ಸುಪ್ರೀಂಕೋರ್ಟ್‌ನಲ್ಲಿ KIADB ಆಕ್ಟ್ ಹಾಗೂ ಬಿಡಿಎ ಆಕ್ಟ್‌ನಲ್ಲಿ ಹಳೆ ದರಕ್ಕೆ ಪರಿಹಾರ ನೀಡಬೇಕು ಎಂದು ಆದೇಶ ನೀಡಲಾಗಿದೆ. ಈ ವಿಚಾರವಾಗಿ ಎರಡು ದಿನಗಳಲ್ಲಿ ಮಾತನಾಡುತ್ತೇನೆ. ನಿಮ್ಮ ಮನವಿ ಪರಿಶೀಲಿಸುತ್ತೇನೆ. ನಿವೇಶನ ವಿಚಾರ ನನ್ನ ಗಮನಕ್ಕೆ ಬಂದಿದೆ. ನಿವೇಶನ ಕೊಡಿಸಲು ಕ್ರಮ ಕೈಗೊಳ್ಳಲಾಗುವುದು. ಉಳಿದ ವಿಚಾರಗಳನ್ನು ಪರಿಶೀಲನೆ ಮಾಡುತ್ತೇನೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ಮಣಿಪುರ ಹಿಂಸಾಚಾರ: ಪ್ರತಿಪಕ್ಷಗಳಿಂದ ಸಂಸತ್ತಿನಲ್ಲಿ ಕಪ್ಪು ಬಟ್ಟೆ ಧರಿಸಿ ಇಂದು ಪ್ರತಿಭಟನೆ

ನವದೆಹಲಿ: ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ವಿರುದ್ಧದ ಪ್ರತಿಭಟನೆಯನ್ನು ಮತ್ತಷ್ಟು ತೀವ್ರಗೊಳಿಸುತ್ತಿರುವ ಪ್ರತಿಪಕ್ಷಗಳ ಮೈತ್ರಿಕೂಟ INDIAದ ಎಲ್ಲಾ ಸಂಸದರು ಗುರುವಾರ ಸಂಸತ್ತಿನಲ್ಲಿ ಕಪ್ಪು ಬಟ್ಟೆ ಧರಿಸಿ ಧರಣಿ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನಲ್ಲಿ ಇದುವರೆಗೂ ಹೇಳಿಕೆ ನೀಡದಿರುವುದನ್ನು ಖಂಡಿಸಲು INDIAದ ಎಲ್ಲಾ ಸಂಸದರು ಕಪ್ಪು ಬಟ್ಟೆ ಧರಿಸಿ ಸಂಸತ್ತಿಗೆ ಆಗಮಿಸುವಂತೆ ಸೂಚಿಸಲಾಗಿದೆ ಎಂದು ಆಪ್ ಬಣದ ಸಂಸದರೊಬ್ಬರು ತಿಳಿಸಿದ್ದಾರೆ.

ಈ ಮಧ್ಯೆ, ಪ್ರತಿಪಕ್ಷಗಳ ಮೈತ್ರಿಕೂಟದ ಪರವಾಗಿ ಕಾಂಗ್ರೆಸ್, ಮೋದಿ ಸರ್ಕಾರದ ವಿರುದ್ಧ ಮಂಡಿಸಿದ ಅವಿಶ್ವಾಸ ನಿರ್ಣಯವನ್ನು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಬುಧವಾರ ಅಂಗೀಕರಿಸಿದ್ದಾರೆ.

ಎಲ್ಲಾ ಪಕ್ಷಗಳ ನಾಯಕರೊಂದಿಗೆ ಸಮಾಲೋಚಿಸಿದ ನಂತರ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಯ ದಿನಾಂಕವನ್ನು ನಿರ್ಧರಿಸಲಾಗುವುದು ಎಂದು ಓಂ ಬಿರ್ಲಾ ಅವರು ತಿಳಿಸಿದ್ದಾರೆ.

ಪ್ರತಿಪಕ್ಷಗಳ ಪ್ರತಿಭಟನೆಯ ನಡುವೆಯೇ ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ತಿದ್ದುಪಡಿ ಮಸೂದೆ ಸೇರಿದಂತೆ 6 ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು ಮತ್ತು ಅರಣ್ಯ (ಸಂರಕ್ಷಣೆ) ಕಾಯಿದೆಗೆ ತಿದ್ದುಪಡಿ ಮಸೂದೆ ಅಂಗೀಕರಿಸಲಾಗಿದೆ. ಬಳಿಕ ಕಲಾಪವನ್ನು ಮುಂದೂಡಲಾಗಿದೆ.

ಅಹಿಂದ ಮಾದರಿಯಲ್ಲಿ 'ಎಂಬಿಸಿ' ಸಮಾವೇಶ



ಕಲಬುರಗಿ: ಅಹಿಂದ ಮಾದರಿಯಲ್ಲಿ ನಡೆಯುವ ಅತಿ ಹಿಂದುಳಿದ ವರ್ಗಗಳ ('ಎಂಬಿಸಿ') ಸಮಾವೇಶದ ಪೂರ್ವಭಾವಿಯಾಗಿ ಸಮಾನಮನಸ್ಕರ ವಿಶೇಷ ಚಿಂತನಾ ಸಭೆಯನ್ನು ಸೆ.9ರಂದು ಬೆಂಗಳೂರಿನಲ್ಲಿ ನಡೆಸಲಾಗುವುದು ಎಂದು ಚಿತ್ತಾಪುರದ ನಾರಾಯಣ ಗುರುಗಳ ಶಕ್ತಿ ಪೀಠದ ಮುಖ್ಯಸ್ಥ ಪ್ರಣವಾನಂದ ಸ್ವಾಮೀಜಿ ತಿಳಿಸಿದರು.

ಅಂದು ಬೆಳಗ್ಗೆ 10ಕ್ಕೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯುವ ಚಿಂತನಾ ಸಭೆಗೆ ಅತಿ ಹಿಂದುಳಿದ ಸಮುದಾಯಗಳ ನಾಯಕರು ಭಾಗವಹಿಸುವರು. 2024ರ ಜನವರಿ ತಿಂಗಳಲ್ಲಿ ಉಡುಪಿಯಲ್ಲಿ ನಡೆಯುವ ಎಂಬಿಸಿ ಸಮಾವೇಶದ ರೂಪುರೇಷೆ ಕುರಿತು ಚರ್ಚಿಸಲಾಗುವುದು ಎಂದರು. ಈಡಿಗ, ಬಿಲ್ಲವ, ನಾಮಧಾರಿ ಸಮುದಾಯದ ನೇತೃತ್ವದಲ್ಲಿ ಅತಿ ಹಿಂದುಳಿದ ವರ್ಗಗಳನ್ನು ಜತೆಗೂಡಿಸಿಕೊಂಡು ಎಂಬಿಸಿ ಸಮಾವೇಶ ನಡೆಸಲಾಗುವುದು. ಅಹಿಂದದಲ್ಲಿ ಗುರುತಿಸಿಕೊಂಡಿದ್ದರೂ ಬಹುತೇಕ ಎಂಬಿಸಿ ಸಮುದಾಯಗಳಿಗೆ ರಾಜಕೀಯ ಪ್ರಾತಿನಿಧ್ಯ ಹಾಗೂ ಸಾಂವಿಧಾನಿಕ ಸವಲತ್ತುಗಳು ಸಿಗುತ್ತಿಲ್ಲ. ಹೀಗಾಗಿ, ಅಹಿಂದಕ್ಕೆ ಪರ್ಯಾಯವಾಗಿ ಎಂಬಿಸಿ ಒಕ್ಕೂಟ ರಚಿಸಲಾಗುವುದು ಎಂದರು.

ಡೇ–ನಲ್ಮ್ ಅಭಿಯಾನದಡಿ ಸಮಿತಿ ರಚನೆ

ಮೈಸೂರು,ಜು.26– ಸರಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿಬದಿ ವ್ಯಾಪಾರಿಗಳ ಕುಂದು ಕೊರತೆ ನಿವಾರಣಾ ಸಮಿತಿಯನ್ನು ನಿವೃತ್ತ ಸಿವಿಲ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಬೇಕಾಗಿದೆ. ಒಬ್ಬರು ನಿವೃತ್ತ ಸಿವಿಲ್ ನ್ಯಾಯಾಧೀಶರು ಮತ್ತು ಕಳಂಕರಹಿತ ಸೇವಾ ದಾಖಲೆಯುಳ್ಳ ರಾಜ್ಯ ಸರ್ಕಾರದ ನಿವೃತ್ತ ಎ ದರ್ಜೆ ಅಧಿಕಾರಿ ಹಾಗೂ ಒಬ್ಬರು ಬೀದಿಬದಿ ವ್ಯಾಪಾರರನ್ನು ಒಳಗೊಂಡ ಅನೌಪಚಾರಿಕ ಆರ್ಥಿಕ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಪ್ರಖ್ಯಾತ ಸಾಮಾಜಿಕ ಕಾರ್ಯಕರ್ತರು, ಪ್ರಕಟಣೆ ಹೊರಡಿಸಿದ ವಾರದೊಳಗೆ ಸರಗೂರು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಪ್ರಥಮ ದರ್ಜೆ ಸಹಾಯಕ ಅರುಣ್ ಆರಾಧ್ಯ ದೂ.ಸಂ: 8904422739 ಅನ್ನು ಸಂಪರ್ಕಿಸಬಹುದು.

ಸ್ವಾತಂತ್ರ್ಯ ದಿನಾಚರಣೆ ವ್ಯವಸ್ಥಿತವಾಗಿ ಆಯೋಜಿಸಿ

ಸ್ವಾತಂತ್ರ್ಯ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ


ಮೈಸೂರು ಡಿಸಿ ಕಚೇರಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆಯ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿದರು.

ಮೈಸೂರು,ಜು.26– ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ರೂಪಿಸಲಾಗಿರುವ ಎಲ್ಲಾ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಆಯೋಜಿಸಿ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಧ್ವಜಾರೋಹಣಕ್ಕೆ ಸಂಬಂಧಿಸಿದಂತೆ ಪೂರ್ವ ಸಿದ್ಧತೆಗಳನ್ನು ನಡೆಸಿಕೊಳ್ಳಿ. ಪರಿಸರ ಸ್ನೇಹಿ ಧ್ವಜ ಬಳಕೆಗೆ ಹೆಚ್ಚು ಒತ್ತು ನೀಡುವಂತೆ ಹಾಗೂ ಪ್ಲಾಸ್ಟಿಕ್ ಧ್ವಜದ ಬಳಕೆ ನಿಷೇಧಿಸುವಂತೆ ಸೂಚಿಸಿದರು.

ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರನ್ನು ಒಳಗೊಂಡಂತೆ ಸ್ವಾತಂತ್ರ ಹೋರಾಟಗಾರರನ್ನು ಸ್ಮರಿಸುವ ಹಾಗೂ ದೇಶಭಕ್ತಿಯನ್ನು ಮೆರೆಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ಆಯೋಜನೆಗೊಳ್ಳಲಿ. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ರೂಪಿಸಲು ಕ್ರಮವಹಿಸಿ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಡಿಡಿಪಿಐ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಿಗೆ ಸೂಚಿಸಿದರು.

ಪರೇಡ್ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುವ ಸಂದರ್ಭದಲ್ಲಿ ಪೊಲೀಸ್ ಬಂದೋಬಸ್ತ್ ಒದಗಿಸುವುದು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹೋರಾಟಗಾರರ ಮನೆಯವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸುವ ಕೆಲಸ ಆಗಬೇಕು. ಇಲಾಖಾವಾರು ನಿಯೋಜಿಸಿರುವ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ರೂಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ನಾಳೆ 'ಮಾರ್ಗದರ್ಶಿ' ವಿದ್ಯಾರ್ಥಿ, ಅಧಿಕಾರಿಗಳ ನೇರ ಸಂವಾದ

ಮೈಸೂರು,ಜು.26– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಲಿಕಾರ್ಥಿ ಕಲ್ಯಾಣ ಕೇಂದ್ರದ ವತಿಯಿಂದ ಜು.28ರಂದು "ಮಾರ್ಗದರ್ಶಿ" ವಿದ್ಯಾರ್ಥಿ ಮತ್ತು ಅಧಿಕಾರಿಗಳ ನೇರ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಶರಣಪ್ಪ ವಿ ಹಲಸೆ ಉದ್ಘಾಟಿಸಲಿದ್ದಾರೆ. ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ ಭಾಗವಹಿಸಲಿದ್ದಾರೆ ಎಂದು ಕಲಿಕಾರ್ಥಿ ಕಲ್ಯಾಣ ಕೇಂದ್ರದ ಸಂಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಶೀಲಾ : ಲಾಯರ್‌ನನ್ನು ಮದುವೆಯಾಗಿ ದೊಡ್ಡ ತಪ್ಪು ಮಾಡಿದೆ ಅನ್ನಿಸ್ತಾ ಇದೆ.
ಲೀಲಾ : ಯಾಕೆ, ಏನಾಯ್ತು?
ಶೀಲಾ : ನಾನು ಏನೇ ಹೇಳಿದ್ರೂ ಭಗವದ್ಗೀತೆ ಮೇಲೆ ಪ್ರಮಾಣ ಮಾಡಿ ಹೇಳು ಅಂತಿರ್ತಾರೆ ಕಣೇ!

ಮೈಸೂರು ಮಿತ್ರ

ಗುರುವಾರ, 27 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ದ್ವೇಷಿಸುವವನ ದೊಡ್ಡ ಶತ್ರುವೆಂದರೆ ಸ್ವತಃ ಅವನ ದ್ವೇಷ. ಅದು ಅವನಿಗೆ ಹಾನಿ ಮಾಡದೆ ಇರದು. – ತಿರುವಳ್ಳುವರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಂಡರೆ ಸೇರದವನಿಗೆ ಉಂಡರೆ ಸೇರೀತೆ?

ನಿಮ್ಮ ಪತ್ರಗಳು

ನಿರ್ಮಾಪಕರ ಸಮಸ್ಯೆಗಳು ಬಗೆಹರಿಯಲಿ

ಮಾನ್ಯರೆ,

ಸುಮಾರು 89 ವರ್ಷಗಳಿಗಿಂತ ಅಧಿಕ ಇತಿಹಾಸ ಹೊಂದಿರುವ ಕನ್ನಡ ಚಿತ್ರರಂಗ ಇಂದು ನಾವಿಕನಿಲ್ಲದ ದೋಣಿಯಂತಾಗಿದೆ. ಕನ್ನಡ ಚಿತ್ರ ಕಲಾವಿದರ ಸಂಘದ ಪ್ರಪ್ರಥಮ ಅಧ್ಯಕ್ಷರಾಗಿ ಡಾ.ರಾಜ್‌ಕುಮಾರ್ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿ, ಕಲಾವಿದರು ಎದುರಿಸುತ್ತಿದ್ದ ಹಲವಾರು ಜಟಿಲ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು. ಅವರ ನಿಧನದ ನಂತರ, ಡಾ.ಅಂಬರೀಶ್ ಆ ಸ್ಥಾನವನ್ನು ತುಂಬಿದ್ದರು. ಅವರ ನಿಧನದ ನಂತರ, ಕನ್ನಡ ಚಿತ್ರರಂಗದ ನಟ–ನಟಿಯರ ಸಂಘಕ್ಕೆ ಅಧಿಕೃತವಾಗಿ ಅಧ್ಯಕ್ಷರೇ ಇಲ್ಲದಂತಾಗಿದೆ.

ಡಾ.ಶಿವರಾಜಕುಮಾರ್, ರವಿಚಂದ್ರನ್ ಮುಂತಾದ ಹಿರಿಯ ನಟರು, ಕೆಲವು ಸಮಸ್ಯೆಯನ್ನು ಬಗೆಹರಿಸಲು ಮುಂದಾಗುತ್ತಿರುವುದು ಕಂಡು ಬರುತ್ತಿದೆ. ಇತ್ತೀಚೆಗೆ ಖ್ಯಾತ ನಾಯಕ ನಟ ಹಾಗೂ ನಿರೂಪಕ ಸುದೀಪ್ ಹಾಗೂ ನಿರ್ಮಾಪಕ ಎಂ.ಎನ್.ಕುಮಾರ್ ನಡುವೆ ಹಣಕಾಸಿನ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ವಾಕ್ಸಮರ ಇನ್ನೂ ತಣ್ಣಗಾದ ಹಾಗೇ ಕಾಣುತ್ತಿಲ್ಲ. ನಿರ್ಮಾಪಕರ ಸಂಘ, ನಿರ್ದೇಶಕರ ಸಂಘ, ಸಾಹಸ ಕಲಾವಿದರ ಸಂಘ ಇತ್ಯಾದಿ ಅಸ್ತಿತ್ವದಲ್ಲಿ ಇದ್ದರೂ ಸಹ ಕಲಾವಿದರ ಸಂಘಕ್ಕೆ ಅಧಿಕೃತ ಅಥವಾ ಚುನಾಯಿತ ಅಧ್ಯಕ್ಷರಿಲ್ಲದಿರುವುದು ಎದ್ದು ಕಾಣುತ್ತಿದೆ. ಇಂದಿನ ನಿರ್ಮಾಪಕರು ಕೋಟ್ಯಂತರ ರೂಪಾಯಿಗಳನ್ನು ಚೆಲ್ಲಿ ಚಿತ್ರ ನಿರ್ಮಿಸುತ್ತಾರೆ. ಕೆಲವು ಪ್ಯಾನ್ ಇಂಡಿಯಾ ಸಿನಿಮಾಗಳ ನಿರ್ಮಾಣಕ್ಕೆ ನೂರಾರು ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಆದರೆ, ನಿರ್ಮಾಪಕರಿಗೆ ನಾಯಕ ನಟ ಅಥವಾ ಅಥವಾ ಬೇರ್‍ಯಾವುದೇ ಪ್ರಮುಖ ಕಲಾವಿದರ ಕಾಲ್‌ಶೀಟ್ ಸಮಸ್ಯೆಗಳು ಉಂಟಾದರೆ, ಚಿತ್ರೀಕರಣ ಕುಂಠಿತವಾಗುತ್ತದೆ. ಇಂದಿಗೂ ಸಹ ಕನ್ನಡ ಚಿತ್ರರಂಗದಲ್ಲಿ ಕೆಲವು ಒಳ್ಳೆಯ ಚಿತ್ರಗಳು ತಯಾರಾಗುತ್ತಿವೆ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿಗಳನ್ನು ಸಹ ಗಳಿಸುತ್ತಿವೆ. ನಿರ್ಮಾಪಕರನ್ನು "ಅನ್ನದಾತರು" ಎಂದು ಕರೆಯಲಾಗುತ್ತದೆ. ನಿರ್ಮಾಪಕರ ಹಾಗೂ ನಟ–ನಟಿಯರ ಮಧ್ಯೆ ಉಂಟಾಗುವ ಸಮಸ್ಯೆಗಳನ್ನು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ತ್ವರಿತವಾಗಿ ಬಗೆಹರಿಸಿ, ಸಮಸ್ಯೆಗಳಿಗೆ ಸೌಹಾರ್ದಯುತ ರೀತಿಯಲ್ಲಿ ಪರಿಹಾರ ಕಂಡು ಕೊಳ್ಳಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮಣಿಪುರದ ಬೆತ್ತಲೆ ಪ್ರಕರಣ : ಆರೋಪಿಗಳಿಗೆ ಶಿಕ್ಷೆಯಾಗಲಿ

ಮಾನ್ಯರೆ,

ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿರುವ ಮಣಿಪುರದಲ್ಲಿ ನಡೆದ ಮನುಷ್ಯ ವಿರೋಧಿ ಹೀನ ಕೃತ್ಯಕ್ಕೆ ಯಾವುದೇ ಮುಲಾಜಿಲ್ಲದೆ, ಆರೋಪಿಗಳನ್ನು ರಕ್ಷಣೆ ಮಾಡುವ ದಾರಿ ಹುಡಕದೇ ನಿರ್ದಾಕ್ಷಿಣ್ಯವಾಗಿ ಗಲ್ಲು ಶಿಕ್ಷೆಯನ್ನೇ ನೀಡಬೇಕಾದ ಪ್ರಕರಣ ಇದಾಗಿದೆ. ಮಣಿಪುರ ರಾಜ್ಯದಲ್ಲಿ ಎರಡು ಸಮುದಾಯಗಳ ನಡುವೆ ನಿರಂತರವಾಗಿ ಸುಮಾರು ನಾಲ್ಕೈದು ತಿಂಗಳಿನಿಂದಲೂ ನಡೆಯುತ್ತಿರುವ ಅಲ್ಲಿನ ಹಿಂಸಾತ್ಮಕ ಬೆಳವಣಿಗೆ ವಿಕೃತ ಸ್ವರೂಪವನ್ನು ಪಡೆದುಕೊಂಡಿದೆ ಎಂಬುವುದಕ್ಕೆ ಅಲ್ಲಿನ ಕುಕಿ ಸಮುದಾಯದ ಮಹಿಳೆಯರನ್ನು ಬೆತ್ತಲೆ ಮಾಡಿ, ಬೀದಿ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಹಾಗೂ ಸಾಮೂಹಿಕ ಅತ್ಯಾಚಾರಕ್ಕೆ ನೂಕಿ ಕೊನೆಗೆ ಹತ್ಯೆ ಮಾಡಿದ ಘಟನೆ ಸಾಕ್ಷಿಯಾಗಿದೆ.ಇದೊಂದು ಗಂಭೀರ ಪ್ರಕರಣವಾದ ಕಾರಣ ಸ್ವಯಂ ಪ್ರೇರಿತವಾಗಿ ಸುಪ್ರೀಂಕೋರ್ಟ್ ಈ ಪ್ರಕರಣವನ್ನು ಕೈಗೆತ್ತಿಕೊಂಡಿದೆ. ಈ ನಮ್ಮ ನಾಗರಿಕ ಸಮಾಜದಲ್ಲಿ ಈ ಘಟನೆ ನಿಜಕ್ಕೂ ರಾಜ್ಯವಲ್ಲದೆ ದೇಶವೇ ತಲೆ ತಗ್ಗಿಸುವಂತಾಗಿದೆ. ಇಂತಹ ಕೃತ್ಯವನ್ನು ಮಾಡಿದ ಕ್ರೂರತೆಯ ಮನಸ್ಸುಗಳಿಗೆ ಈ ಮನುಷ್ಯತ್ವದ ಜಗತ್ತಿನಲ್ಲಿ ಜೀವಿಸಲು ಅರ್ಹತೆ ಇಲ್ಲದ ಈ ಆರೋಪಿಗಳಿಗೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆಯನ್ನು ನೀಡುವುದರ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಇಂತಹ ದೌರ್ಜನ್ಯಗಳಿಂದ ರಕ್ಷಣೆ ಮಾಡಬೇಕಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾ, ನಗರ

ಗಡಿಯಾರಕ್ಕೆ ಹೊಂದಿಕೊಂಡಿರುವ ರೇಡಿಯೋ ರಿಪೇರಿ ಮಾಡಿಸಿ?

ಮಾನ್ಯರೆ,

ಮಾನಸ ಗಂಗೋತ್ರಿಯು ಒಂದು ಸುಂದರ ತಾಣ. ಶಿಕ್ಷಣದ ದೇಗುಲವು ಹೌದು ಮತ್ತು ಪ್ರಕೃತಿಯ ಮಡಿಲು ಹೌದು ಎನ್ನುವಂತಿದೆ. ಸುತ್ತಲೂ ಗಿಡ ಮರಗಳು ಹಸಿರಿನಿಂದ ಕಂಗೊಳಿಸುತ್ತಿರುತ್ತವೆ. ಸುಮಾರು ಐದಾರು ಕಿಲೋಮೀಟರ್‌ನಷ್ಟು ಸುತ್ತುವರೆದಿರುವ ಈ ಸುಂದರ ತಾಣ ಬೆಳಗಿನ ವಾಯುವಿಹಾರಿಗಳಿಗೆ ಒಂದು ಸುಂದರ ವಾಯುವಿಹಾರ ಸ್ಥಳವಾಗಿ ಮಾರ್ಪಟ್ಟಿದೆ ಎನ್ನಬಹುದು. ಪ್ರತಿನಿತ್ಯ ಮುಂಜಾನೆ ಈ ಸುಂದರ ಸೌಂದರ್ಯವನ್ನು ಸವಿಯಲು ನೂರಾರು ಸಂಖ್ಯೆಯಲ್ಲಿ ಎಲ್ಲಾ ವಯೋಮಾನದವರು ವಾಕಿಂಗ್ ಮಾಡಲೆಂದು ಈ ಮಾನಸ ಗಂಗೋತ್ರಿಯ ಒಳಾಂಗಣಕ್ಕೆ ಬರುತ್ತಾರೆ.

ಈ ಒಳಾಂಗಣದ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಕ್ರೀಡಾಂಗಣದ ಹಿಂಭಾಗ ಒಂದು ದೊಡ್ಡ ಗಡಿಯಾರವನ್ನು ನಿರ್ಮಿಸಲಾಗಿದೆ. ಆಶ್ಚರ್ಯವೆಂದರೆ ಈ ಗಡಿಯಾರಕ್ಕೆ ಸೇರಿಕೊಂಡಂತೆ ರೇಡಿಯೋವನ್ನು ಅಳವಡಿಸಲಾಗಿದೆ. ಪ್ರತಿ ಮುಂಜಾನೆ ಆಕಾಶವಾಣಿಯಲ್ಲಿ ಬರುವ ಸ್ವಚ್ಛ ಕನ್ನಡ ಭಾಷೆಯನ್ನು ಕೇಳುತ್ತಾ ವಾಯುವಿಹಾರಿಗಳು ವಿಹಾರ ಮಾಡುತ್ತಿದ್ದರು. ಇದು ಅವರ ಮನಸ್ಸಿಗೆ ಮುದವನ್ನು ನೀಡುತ್ತಿತ್ತು ಮತ್ತು ಅವರ ಕರ್ಣಗಳಿಗೆ ಇಂಪನ್ನು ನೀಡುತ್ತಿತ್ತು. ವಿಪರ್ಯಾಸವೆಂದರೆ ಇತ್ತೀಚೆಗೆ ಸುಮಾರು ಒಂದು ತಿಂಗಳಿನಿಂದ ಈ ಗಡಿಯಾರದ ರೇಡಿಯೋ ರಿಪೇರಿಗೆ ಬಂದಂತಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ದಯಮಾಡಿ ಇದನ್ನು ಸರಿಪಡಿಸಿಯೋ ಇಲ್ಲ ಇದರಲ್ಲಿ ಕಂಡುಬಂದಿರುವ ದೋಷವನ್ನು ಸರಿಪಡಿಸಿ ವಾಕಿಂಗ್ ಮಾಡುವ ಜನತೆಗೆ ಮುಂಜಾನೆ ರೇಡಿಯೋ ಕೇಳುವ ಅವಕಾಶ ಮಾಡಿಕೊಡಬೇಕಾಗಿ ಎಲ್ಲಾ ವಾಯುವಿಹಾರಿಗಳ ಪರವಾಗಿ ಮನವಿ.

–ಅನಿಲ್‌ರಾಜ, ಸಹ ಶಿಕ್ಷಕ, ಸಿದ್ಧಾರ್ಥನಗರ, ಮೈಸೂರು

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

ಜುಲೈ 24ರ 'ಮೈಸೂರು ಮಿತ್ರ' ಸಂಚಿಕೆಯ ಮುಖಪುಟದಲ್ಲಿ ಜು.27ರಂದು ಕರ್ನಾಟಕ ಕಾಂಗ್ರೆಸ್ ಶಾಸಕಾಂಗ ಪಕ್ಷ (ಸಿಎಲ್‌ಪಿ)ದ ಸಭೆ ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ನಡೆಯಲಿದೆ ಎಂದು ಪ್ರಕಟವಾಗಿದ್ದು, ಅದನ್ನು 'ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ' ಬೆಂಗಳೂರಿನ ಅರಮನೆ ರಸ್ತೆಯ ಸಿಓಡಿ ಕಚೇರಿ ಮುಂಭಾಗದಲ್ಲಿರುವ ಹೋಟೆಲ್ ರ್‍ಯಾಡಿಸನ್ ಬ್ಲೂ (ಏಟ್ರಿಯಾ ಹೋಟೆಲ್) ಹೋಟೆಲ್‌ನಲ್ಲಿ ನಡೆಯಲಿದೆ ಎಂದು ಓದಿಕೊಳ್ಳುವುದು. ತಪ್ಪಿಗಾಗಿ ವಿಷಾದಿಸುತ್ತೇವೆ. –ಸಂ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಪುರುಷನ ಸೇಡು ಸಾಧನೆಗೆ ಮಹಿಳೆಯರ ದೇಹಗಳೇ ಯುದ್ಧ ಭೂಮಿಗಳಾಗುತ್ತಿವೆ...!

ಈಶಾನ್ಯ ಭಾರತದ ಎಂಟು ರಾಜ್ಯಗಳಲ್ಲಿ ಒಂದಾದ ಮಣಿಪುರದಲ್ಲಿ ನಡೆಯುತ್ತಿರುವ ಕುಕಿ ಮತ್ತು ಮೈತೇಯಿ ಗುಂಪುಗಳ ನಡುವಣ ಸಂಘರ್ಷ ಅತಿರೇಕದ ಸ್ಥಿತಿಯನ್ನು ತಲುಪಿ, ಮೇಯಿತಿ ಪುರುಷರ ಗುಂಪೊಂದು, ಇಬ್ಬರು ಕುಕಿ ಮಹಿಳೆಯರನ್ನು ನಗ್ನ ಸ್ಥಿತಿಯಲ್ಲಿ ಮೆರವಣಿಗೆ ಮಾಡಿ, ಅವರನ್ನು ಎಳೆದಾಡಿ ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಘಟನೆ ಸಾಮಾಜಿಕ ಮಾಧ್ಯಮಗಳಲ್ಲಿ ಎಲ್ಲೆಡೆ ಬಿತ್ತರಿಸಲ್ಪಟ್ಟಾಗ ತಲೆತಗ್ಗಿಸಿದ್ದು ನಮ್ಮ ದೇಶದ ಮಾನಾಭಿಮಾನ ಮತ್ತು ಆತ್ಮಗೌರವ. ಲಿಂಗ ನ್ಯಾಯ ಸ್ಥಾಪನೆಗಾಗಿ ನಡೆಯುತ್ತಿರುವ ಸಂಘರ್ಷಕ್ಕೆ ಈ ಘಟನೆ ದೊಡ್ಡ ಸವಾಲನ್ನು ಎಸೆದಿದ್ದು, ಮಹಿಳೆಯರು ತಮ್ಮ 'ಜೈವಿಕತೆ'ಯನ್ನು ತಮ್ಮೊಡನೆ ಹೇಗೆ ಹೊತ್ತುಕೊಂಡೇ ನಡೆಯಬೇಕೆಂಬ ಕಟು ಸತ್ಯವನ್ನು ನಮ್ಮ ಮುಂದೆ ತೆರೆದಿಟ್ಟಿದೆ.



> ದೇಶದ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಈ ಘಟನೆಗೆ ಕಾರಣರಾದವರಿಗೆ ಶಿಕ್ಷೆ ವಿಧಿಸಿ, ಇಲ್ಲ ಈ ವಿಚಾರವನ್ನು ನ್ಯಾಯಾಂಗಕ್ಕೆ ಒಪ್ಪಿಸಿ ಎಂಬ ಅಂತಿಮ ಎಚ್ಚರಿಕೆ ನೀಡಿದೆ. ಅತ್ಯಾಚಾರಿಗಳು ನಡೆಸಿದ ಮಾರಣ ಹೋಮಕ್ಕೆ ಎಂಥ ಶಿಕ್ಷೆಯೇ ಆಗಲಿ, ಅದರಿಂದ ಬದುಕನ್ನು ಕಳೆದುಕೊಂಡವರಿಗೆ, ಅಸಹನೀಯ ದೈಹಿಕ–ಮಾನಸಿಕ ಯಾತನೆ ಅನುಭವಿಸಿದವರಿಗೆ ನ್ಯಾಯ ದೊರೆಯುವುದೇ?

ಕುಕಿ ಮಹಿಳೆಯರಿಬ್ಬರ ಮೇಲೆ ದೌರ್ಜನ್ಯ ನಡೆದದ್ದು ಮಣಿಪುರದ ಕಂಗ್ ಕೋಪಿ ಜಿಲ್ಲೆಯಲ್ಲಿ. ಈ ಅಮಾನುಷ ಕೃತ್ಯಕ್ಕೆ ವಿಶ್ವವ್ಯಾಪಿ ಪ್ರಚಾರ ದೊರೆತದ್ದು ಜುಲೈ 19 ರಂದು ವಿಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಿಸಲ್ಪಟ್ಟಾಗ. ಆದರೆ ಈ ಘಟನೆ ನಡೆದದ್ದು ಮೇ ತಿಂಗಳ 4ನೇ ತಾರೀಖಿನಂದು, ಅಂದರೆ 75 ದಿನಗಳ ಹಿಂದೆ. ಸರ್ಕಾರ, ಆರಕ್ಷಕ ವ್ಯವಸ್ಥೆ ಮತ್ತು ರಾಷ್ಟ್ರೀಯ ಮಹಿಳಾ ಆಯೋಗ –ಈ ಮೂರು ಸಂಸ್ಥೆಗಳ ಗಮನಕ್ಕೆ ವಿಚಾರವನ್ನು ತರಲಾಗಿದ್ದರೂ ಯಾವುದೇ ಕ್ರಮವನ್ನು ಕೈಗೊಳ್ಳದಿದ್ದುದು ಅಧಿಕಾರಾರೂಢ ವ್ಯವಸ್ಥೆ ಮಹಿಳಾ ಸುರಕ್ಷತೆಯನ್ನು ಹೇಗೆ ಕಡೆಗಣಿಸುತ್ತಿದೆ ಎಂಬುದಕ್ಕೆ ಒಂದು ಜೀವಂತ ಸಾಕ್ಷಿ. ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿಯುತ್ತಿದ್ದರೂ ಕುಕಿ ಮತ್ತು ಮೈತೇಯಿ ಗುಂಪುಗಳ ನಡುವಣ ಘರ್ಷಣೆ ಹಿಂಸಾಚಾರಕ್ಕೆ ತಿರುಗಿ ರಾಜ್ಯದ ನಾನಾ ಭಾಗಗಳಲ್ಲಿ ಸಾವು–ನೋವುಗಳು, ಸಾರ್ವಜನಿಕ ಆಸ್ತಿ ಹಾನಿ ಸಂಭವಿಸಿದ್ದು, ಮಹಿಳೆಯರ ಮೇಲೆ ದೌರ್ಜನ್ಯ ನಡೆಯುವ ಸಂಭವವಿದೆ ಎನ್ನುವುದು ಗೊತ್ತಿದ್ದರೂ ಆಡಳಿತಾರೂಢ ವ್ಯವಸ್ಥೆ ಈ ಗಂಭೀರ ಪರಿಸ್ಥಿತಿಯನ್ನು ಅಲಕ್ಷಿಸಿದ್ದು ಏಕೆ?

ಕುಕಿ ಮತ್ತು ಮೈತೇಯಿ ಗುಂಪುಗಳ ನಡುವೆ ನಡೆಯುತ್ತಿರುವ ಘರ್ಷಣೆಗೆ ಒಂದು ಐತಿಹಾಸಿಕ ಹಿನ್ನೆಲೆ ಇದೆ. ಮೈತೇಯಿ ಸಮುದಾಯ ಮಣಿಪುರ ರಾಜ್ಯದ ಜನಸಂಖ್ಯೆಯಲ್ಲಿ ಶೇಕಡಾ 53 ರಷ್ಟಿದ್ದು ಸಾಮಾಜಿಕ–ಆರ್ಥಿಕ–ಶೈಕ್ಷಣಿಕ ರಾಜಕೀಯ ಕ್ಷೇತ್ರಗಳಲ್ಲಿ ಅವರು ಅತ್ಯಂತ ಪ್ರಬಲ ಸ್ಥಾನದಲ್ಲಿದ್ದಾರೆ. ಕುಕಿ ಬುಡಕಟ್ಟು ಸಮುದಾಯಕ್ಕೆ ಬೆಟ್ಟ ಪ್ರದೇಶಗಳಲ್ಲಿರುವ ಭೂಮಿಯ ಮೇಲೆ ಸಾಂಪ್ರದಾಯಿಕ ಹಕ್ಕುಗಳಿದ್ದು ಮೈತೇಯಿ ಗುಂಪಿಗೆ ಈ ಹಕ್ಕು ಇರುವುದಿಲ್ಲ. ಕೇವಲ ಭೂ ಹಕ್ಕೇ ಅಲ್ಲದೆ ಬುಡಕಟ್ಟು ಸಮುದಾಯಗಳಿಗೆ ಇರುವ ಸೌಲಭ್ಯಗಳನ್ನು ತಮಗೂ ನೀಡಬೇಕು, ತಮ್ಮನ್ನು ಬುಡಕಟ್ಟು ಸಮುದಾಯವೆಂದು ಪರಿಗಣಿಸಬೇಕು ಎಂಬ ಮೈತೇಯಿ ಸಮುದಾಯದ ಬೇಡಿಕೆಗೆ ಸ್ಪಂದಿಸಿದ ಮಣಿಪುರ ಉಚ್ಚ ನ್ಯಾಯಾಲಯ, ಏಪ್ರಿಲ್ ತಿಂಗಳಿನಲ್ಲಿ ರಾಜ್ಯ ಸರ್ಕಾರಕ್ಕೆ, ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯಕ್ಕೆ ಮೈತೇಯಿಗೆ ಬುಡಕಟ್ಟು ಸ್ಥಾನ ನೀಡಲು ಶಿಫಾರಸ್ಸು ಮಾಡಬೇಕೆಂದು ಇತ್ತ ನಿರ್ದೇಶನವೇ ಕುಕಿ ಬುಡಕಟ್ಟುಗಳ ಆಕ್ರೋಶಕ್ಕೆ ಕಾರಣವಾಗಿದ್ದು, ಎರಡು ಸಮುದಾಯಗಳ ನಡುವೆ ಅಂತರ್ಗಾಮಿಯಂತೆ ಪ್ರವಹಿಸುತ್ತಿದ್ದ ಅಸಮಾಧಾನ ಮೇ ತಿಂಗಳಲ್ಲಿ ಭುಗಿಲೆದ್ದಿತು. ಬುಡಕಟ್ಟು ವಿದ್ಯಾರ್ಥಿಗಳ ರಾಜ್ಯ ಸಂಘಟನೆ ಬುಡಕಟ್ಟು ಐಕ್ಯತಾ ನಡಿಗೆಗೆ ಇತ್ತ ಕರೆ, ಚೂರಾಚಂದ್ ಜಿಲ್ಲೆಯಲ್ಲಿ ಎರಡು ಗುಂಪುಗಳ ನಡುವೆ ತೀವ್ರ ಘರ್ಷಣೆಗಳಿಗೆ ಎಡೆ ಮಾಡಿಕೊಟ್ಟಿದ್ದು, ಎರಡು ಕಡೆಗಳಲ್ಲೂ ಸಾವು–ನೋವುಗಳು ಸಂಭವಿಸಿದ್ದು, ಮೈತೇಯಿ ಸಮುದಾಯ ಪ್ರತೀಕಾರವನ್ನು ಸಾಧಿಸಿಕೊಳ್ಳಲು ಈ ಇಬ್ಬರು ಕುಕಿ ಹೆಣ್ಣು ಮಕ್ಕಳ ಮೇಲೆ ದೈಹಿಕ ಹಲ್ಲೆ ಮಾಡಲಾಯಿತು ಎಂಬುದು ವರದಿಗಳ ಪ್ರಕಾರ ತಿಳಿದು ಬಂದಿದೆ. ರಾಜ್ಯದ ಬೇರೆಡೆಗಳಿಂದಲೂ ಅತ್ಯಾಚಾರದ ಪ್ರಕರಣಗಳು ವರದಿಯಾಗುತ್ತಿವೆ.

ಕುಕಿ ಮತ್ತು ಮೈತೇಯಿ ಸಮುದಾಯಗಳ ನಡುವೆ ಏರ್ಪಟ್ಟಿರುವ ಬಿಕ್ಕಟ್ಟಿಗೆ ಒಂದು ದೀರ್ಘಕಾಲೀನ ಇತಿಹಾಸವೇ ಇದೆ. ಮೊದಲಿಗೆ ಗಮನಿಸಬೇಕಾದ ಅಂಶವೆಂದರೆ ಇವೆರಡೂ ಸಮರೂಪವಾದ ವರ್ಗಗಳಲ್ಲ. ಇವೆರಡು ಸಮುದಾಯಗಳಲ್ಲೂ ಉಪ ಗುಂಪುಗಳಿದ್ದು ಅವುಗಳ ಹಕ್ಕುಗಳು ಮತ್ತು ಬಾಧ್ಯತೆಗಳಲ್ಲಿ ಗಮನಾರ್ಹವಾದ ವ್ಯತ್ಯಾಸಗಳಿವೆ. ಎರಡು ಗುಂಪುಗಳಲ್ಲೂ ತಾವು ಪಡೆದಿರುವ ಅನುಕೂಲಗಳನ್ನು ಕಳೆದು ಕೊಳ್ಳಬಹುದೆಂಬ ಭಯವಿದ್ದು, ಪರಸ್ಪರ ದೋಷಾರೋಪಣೆ ಮತ್ತು ಅಂತರ–ಗುಂಪು ಕಲಹಗಳು ನಡೆಯುತ್ತಲೇ ಬಂದಿವೆ. ಈ ವಿಷಯದ ಬಗ್ಗೆ ಅರಿವಿದ್ದರೂ ಅದಕ್ಕೆ ಸೂಕ್ತ ಪರಿಹಾರವನ್ನು ಹುಡುಕಬೇಕೆಂಬ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಪರಿಸ್ಥಿತಿ ಬಿಗಿಯಾಗುತ್ತಲೇ ಬಂದಿದ್ದು ಈಗ ಹಿಂಸಾಚಾರ, ಆಸ್ತಿ ಹಾನಿ, ಜೀವ ಹಾನಿ, ಸ್ಥಳಾಂತರ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ– ಇವುಗಳು ತೂಗು ಕತ್ತಿಯಂತೆ ಈ ಎರಡು ಸಮುದಾಯಗಳನ್ನು ಕಾಡುತ್ತಲೇ ಇವೆ.

ಎರಡು ಗುಂಪುಗಳ ನಡುವೆ ನಡೆಯುವ ಘರ್ಷಣೆಗಳು ಅಥವಾ ಯುದ್ಧದ ಸಂದರ್ಭಗಳಲ್ಲಿ ಶತ್ರು ಗುಂಪಿನ ಮಹಿಳೆಯರ ದೇಹದ ಮೇಲೆ ಆಕ್ರಮಣ ನಡೆಸಿ ತಮ್ಮ ಪ್ರಾಬಲ್ಯ ಪ್ರದರ್ಶನ ಮಾಡುವ ದುಷ್ಟ ಸಂಸ್ಕೃತಿಗೆ ಒಂದು ದೀರ್ಘ ಇತಿಹಾಸವೇ ಇದೆ. ಈ ಕ್ರೌರ್ಯ ವ್ಯಕ್ತವಾಗುವುದು ಅತ್ಯಾಚಾರ, ಲೈಂಗಿಕ ದಾಸ್ಯತ್ವ, ಸಾಮೂಹಿಕ ಅತ್ಯಾಚಾರ, ಜನನಾಂಗ ಹರಣ ಮುಂತಾದ ಕೃತ್ಯಗಳ ಮೂಲಕ. ಈ ಪ್ರವೃತ್ತಿ ಯಾವುದೇ ಕಾಲ–ದೇಶಕ್ಕೆ ಸೀಮಿತವಾಗಿಲ್ಲ. ಘರ್ಷಣೆಯಲ್ಲಿ ತೊಡಗಿರುವ ಗುಂಪುಗಳಿಂದ ನಡೆಯುವ ದೌರ್ಜನ್ಯ ಒಂದೆಡೆಯಾದರೆ, ಮತ್ತೊಂದೆಡೆ ಸೇನಾ ಪಡೆಗಳು ಅನೇಕ ಕಡೆಗಳಲ್ಲಿ ನಡೆಸುವ ಲೈಂಗಿಕ ದೌರ್ಜನ್ಯಗಳೂ ಘರ್ಷಣಾ ವಲಯಗಳಲ್ಲಿ ವಾಸಿಸುವ ಮಹಿಳೆಯರನ್ನು ಸದಾ ಕಾಲ ಭಯದ ವಾತಾವರಣದಲ್ಲಿ ಬದುಕುವಂಥ ಪರಿಸ್ಥಿತಿಗೆ ತಳ್ಳುತ್ತವೆ. ಮಣಿಪುರ ರಾಜ್ಯದಲ್ಲಿಯೂ ಬಹುಕಾಲದಿಂದಲೂ ಸೇನಾಪಡೆಗಳಿಗೆ ನೀಡಿರುವ ವಿಶೇಷ ಹಕ್ಕುಗಳ ಕಾಯಿದೆಯನ್ನು ಬಳಸಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿರುವ ನಿದರ್ಶನಗಳಿವೆ.

'ಮಹಿಳೆಯರ ದೇಹಗಳನ್ನೇ ಯುದ್ಧ ಭೂಮಿಗಳಾಗಿ ಪರಿವರ್ತಿಸಿ' ತನ್ನ ಎದುರಾಳಿಯ ಮೇಲೆ ಸೇಡನ್ನು ತೀರಿಸಿಕೊಳ್ಳುವುದು ಪುರುಷ ಪ್ರಧಾನ ಸಂಸ್ಕೃತಿಯ ಒಂದು ಮುಖವಷ್ಟೇ. ಮಣಿಪುರದಲ್ಲಿ ನಡೆಯುತ್ತಿರುವ ಅತ್ಯಾಚಾರ ಈಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿರುವ ಘಟನೆಗಷ್ಟೇ ಸೀಮಿತವಾಗಿಲ್ಲ. ಮಾಧ್ಯಮ ವರದಿಗಳ ಪ್ರಕಾರ ಕಂಗ್ ಕೋಪಿ ಜಿಲ್ಲೆಯ ಘಟನೆ ನಡೆದ 11 ದಿನಗಳ ನಂತರ, ಎಂದರೆ ಮೇ 15 ರಂದು 18 ವರ್ಷದ ಮಹಿಳೆಯ ಮೇಲೆ ಮಣಿಪುರದ ಇಂಫಾಲ್ ಪೂರ್ವ ಭಾಗದಲ್ಲಿ ಸಾಮೂಹಿಕ ಅತ್ಯಾಚಾರ ನಡೆದ ಘಟನೆಯನ್ನು ಕುರಿತು ಆಕೆ ನೀಡಿದ ದೂರು, ಜುಲೈ 21ರಂದು ಶೂನ್ಯ ಎಫ್.ಐ.ಆರ್. ಆಗಿ ಪೊಲೀಸ್ ಠಾಣೆಯಲ್ಲಿ ದಾಖಲಾಯಿತು. ಮೇ 15ರಂದು ನಾಲ್ಕು ಜನ ಮೈತೇಯಿ ಮಹಿಳೆಯರು ಆಕೆಯನ್ನು ಸೆರೆ ಹಿಡಿದು ನಾಲ್ಕು ಮಂದಿ ಸಶಸ್ತ್ರ ಪುರುಷರಿಗೆ ಒಪ್ಪಿಸಿದ್ದು, ಈ ಪುರುಷರು ಆ ಮಹಿಳೆಗೆ ಚಿತ್ರಹಿಂಸೆ ನೀಡಿ ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲ್ಲಲು ಯತ್ನಿಸಿ ಕಾರಿನಲ್ಲಿ ಕರೆದೊಯ್ಯುತ್ತಿದ್ದಾಗ ತಪ್ಪಿಸಿಕೊಂಡ ಆಕೆ, ನೆರೆ ರಾಜ್ಯ ನಾಗಾಲ್ಯಾಂಡ್‌ನ ಆಸ್ಪತ್ರೆಯೊಂದರಲ್ಲಿ ತೀರಾ ಗಂಭೀರ ಪರಿಸ್ಥಿತಿಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದದ್ದು, ನಂತರ ಮಣಿಪುರಕ್ಕೆ ಹಿಂದಿರುಗಿ ಪೊಲೀಸರಿಗೆ ತಿಳಿಸಿದ್ದನ್ನು, ಆಕೆ ತನ್ನ ದೂರಿನಲ್ಲಿ ತಿಳಿಸಿರುವುದು ಈ ಅಂತರ ಗುಂಪು ಕಲಹ ಎತ್ತ ಸಾಗುತ್ತಿದೆ ಎಂಬ ಸೂಚನೆಯನ್ನು ನಮಗೆ ನೀಡುತ್ತಿದೆ.

ಪದೇ ಪದೇ ಘರ್ಷಣಾತ್ಮಕ ವಲಯಗಳಲ್ಲಿ ಮರುಕಳಿಸುತ್ತಿರುವ ಲಿಂಗಾಧಾರಿತ ದೌರ್ಜನ್ಯದ ಘಟನೆಗಳಿಗೆ ಕಾನೂನು ರಕ್ಷಕರ ಮತ್ತು ನಾಗರಿಕ ಸಮಾಜದ ಪ್ರತಿಕ್ರಿಯೆಯಾದರೂ ಏನು? ಮಣಿಪುರದ ವಿಡಿಯೋಗಳು ಸಾಮಾಜಿಕ ಜಾಲತಾಣಗಳ ಮೂಲಕ ಜಗಜ್ಜಾಹಿರಾದಾಗ ಈ ಘಟನೆಗೆ ಕಾರಣರಾದ ನಾಲ್ಕು ಅತ್ಯಾಚಾರಿಗಳನ್ನು 75 ದಿನಗಳ ನಂತರ ಬಂಧಿಸಲಾಗಿದೆ. ಇವರಲ್ಲಿ ಒಬ್ಬನ ಗ್ರಾಮದಲ್ಲಿ ಮೈತೇಯಿ ಮಹಿಳೆಯರೇ ಆತನ ಮನೆಯನ್ನು ಸುಟ್ಟು ಹಾಕಿದ್ದಾರೆ. ಪೊಲೀಸರೇನೋ ಇನ್ನು ಹೆಚ್ಚು ಮಂದಿ ಬಂಧನಕ್ಕೆ ಒಳಗಾಗುವ ಸಾಧ್ಯತೆ ಇದೆ ಎಂದು ಈಗ ಹೇಳುತ್ತಿದ್ದಾರೆ. ಅದೂ ಆಡಳಿತಾರೂಢ ವ್ಯವಸ್ಥೆ ಮತ್ತು ಪೊಲೀಸ್ ಇಲಾಖೆ ವ್ಯಾಪಕ ಟೀಕೆಗಳಿಗೆ ಒಳಗಾದ ಮೇಲೆ! ದೇಶದ ಸರ್ವೋಚ್ಚ ನ್ಯಾಯಾಲಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಈ ಘಟನೆಗೆ ಕಾರಣರಾದವರಿಗೆ ಶಿಕ್ಷೆ ವಿಧಿಸಿ, ಇಲ್ಲ ಈ ವಿಚಾರವನ್ನು ನ್ಯಾಯಾಂಗಕ್ಕೆ ಒಪ್ಪಿಸಿ ಎಂಬ ಅಂತಿಮ ಎಚ್ಚರಿಕೆಯನ್ನು ನೀಡಿದೆ.

ಅತ್ಯಾಚಾರಿಗಳು ನಡೆಸಿದ ಮಾರಣ ಹೋಮಕ್ಕೆ ಎಂಥ ಶಿಕ್ಷೆಯೇ ಆಗಲಿ, ಅದರಿಂದ ಬದುಕನ್ನು ಕಳೆದುಕೊಂಡವರಿಗೆ, ಅಸಹನೀಯ ದೈಹಿಕ–ಮಾನಸಿಕ ಯಾತನೆ ಅನುಭವಿಸಿದವರಿಗೆ ನ್ಯಾಯ ದೊರೆಯುವುದೇ? ಇನ್ನಾದರೂ ಗುಂಪು ಘರ್ಷಣೆಗಳಲ್ಲಿ, ಸೇನಾ ಕಾರ್ಯಾಚರಣೆಗಳಲ್ಲಿ, ಯುದ್ಧ ಪರಿಸ್ಥಿತಿಗಳಲ್ಲಿ ನಡೆಯುವ ಲಿಂಗಾಧಾರಿತ ಕ್ರೌರ್ಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲು ಆಡಳಿತಾತ್ಮಕ ವ್ಯವಸ್ಥೆ ಸಿದ್ಧವಾಗಬಹುದೇ?


ಜಾತಿಗಣತಿ ವರದಿ ಬಿಡುಗಡೆಗೆ ಮುಖ್ಯಮಂತ್ರಿಗಳಿಗೆ ಮನವಿ



ಮೈಸೂರು, ಜು.26(ಎಂಕೆ)– ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಜಾತಿ ಜನಗಣತಿ ವರದಿ ಬಿಡುಗಡೆ ಹಾಗೂ ಸ್ಥಳಿಯ ಸಂಸ್ಥೆಗಳಲ್ಲಿರುವ ಮೀಸಲಾತಿ ಮಾದರಿಯಲ್ಲಿಯೇ ವಿಧಾನಸಭೆ, ವಿಧಾನ ಪರಿಷತ್ ಹಾಗೂ ಲೋಕಸಭೆಯಲ್ಲಿಯೂ ಮೀಸಲಾತಿ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಮನವಿ ಸಲ್ಲಿಸಲಾಯಿತು.

ಬೆಂಗಳೂರಿನ ಕೃಷ್ಣಾ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತಲ್ಲದೆ ರಾಷ್ಟ್ರ ಮಟ್ಟದ ಚಿತ್ರ ಕಲಾವಿದ ಡಾ.ಬಾಬು ರಾವ್ ನಡೋನಿ ಬಿಡಿಸಿದ್ದ ಸಿದ್ದರಾಮಯ್ಯ ಅವರ ಭಾವಚಿತ್ರವನ್ನು ನೀಡಲಾಯಿತು. ಹಿಂದುಳಿದ ವರ್ಗದ ಮುಖಂಡರಾದ ಎನ್.ಆರ್. ನಾಗೇಶ್, ಯೋಗೇಶ್ ಉಪ್ಪಾರ್, ಲೋಕೇಶ್ ಕುಮಾರ್, ಬಸಪ್ಪ, ಯು.ಎಸ್.ಸಚಿನ್, ಆರ್.ಕೆ.ರಮೇಶ್, ರವಿ ಮತ್ತಿತರರಿದ್ದರು.

ಇಮ್ಮಡಿಗೊಳ್ಳುತ್ತಿದೆ 'ರಘುಲಾಲ್' ಸಸ್ಯ ಸಂಕುಲ ನಿಸ್ವಾರ್ಥ ಸೇವೆ




ರಘುಲಾಲ್ ರಾಘವನ್

ಮೈಸೂರು, ಜು.26(ಪಿಎಂ)– ಸಸ್ಯ ಸಂಕುಲ ಸಮೃದ್ಧಿಗೆ ಮೈಸೂರಿನ ಪ್ರಸಿದ್ಧ ಔಷಧ ಮಳಿಗೆ ರಘುಲಾಲ್ ಅಂಡ್ ಕಂಪನಿ ಮಾಲೀಕ ಎನ್.ರಾಘವನ್ ಅವರ ಸೇವೆ ದಿನದಿಂದ ದಿನಕ್ಕೆ ಇಮ್ಮಡಿಗೊಳ್ಳುತ್ತಿದೆ.

ಪರಿಸರದ ಬಗ್ಗೆ ಅತೀವ ಕಾಳಜಿ ಹೊಂದಿರುವ ಇವರು, ಸಸ್ಯ ಸಂಕುಲ ಉಳಿಸಿ, ಬೆಳೆಸಲು ಮೈಸೂರು ನಗರದಲ್ಲಿ ಉದಾತ್ತ ಸೇವೆಗೆ ಹೆಸರಾಗಿದ್ದಾರೆ.

ಗಿಡಗಳಿಗೆ ರಕ್ಷಣೆಗೆ ಅಗತ್ಯವಿರುವ ಟ್ರೀ ಗಾರ್ಡ್‌ಗಳನ್ನು (ಬೇಲಿ) ಉಚಿತವಾಗಿ ಒದಗಿಸುವ ಮೂಲಕ ತಮ್ಮ ಸಸ್ಯ ಸೇವೆ ಮುಂದುವರೆಸಿದ್ದಾರೆ. ಸಸಿ ನೆಡುವ ಜೊತೆಗೆ ಪರಿಸರ ಪ್ರೇಮಿಗಳು ನೆಟ್ಟ ಸಸಿಗಳಿಗೂ ಟ್ರೀ ಗಾರ್ಡ್ ನೀಡುವ ಸಾರ್ಥಕ ಸೇವೆ ನಿರಂತರವಾಗಿ ಸಾಗಿದೆ. ಆ ಮೂಲಕ ಸಸ್ಯ ಸಂಕುಲ ಉಳಿಸಿ ಬೆಳೆಸಿ ಮಾನವ ಸಂಕುಲಕ್ಕೂ ಉತ್ತಮ ಗಾಳಿ–ಮಳೆ ಸಿಗಲು ವಿಶಿಷ್ಟ ಕೊಡುಗೆ ನೀಡುವ ಕಾಯಕದಲ್ಲಿ ನಿರತರಾದವರಲ್ಲಿ ಇವರೂ ಮುಂಚೂಣಿಯಲ್ಲಿದ್ದಾರೆ. ಆಯಾ ವಾತಾವರಣಕ್ಕೆ ಪೂರಕವಾಗಿ ಬಿದಿರು, ಕಬ್ಬಿಣದ ಟ್ರೀ ಗಾರ್ಡ್ ವಿತರಿಸುವ ಮೂಲಕ ಜನ–ಜಾನುವಾರುಗಳಿಂದ ಸಸ್ಯಗಳನ್ನು ರಕ್ಷಿಸಿ ಪೋಷಿಸುವ ಇವರ ಕಾರ್ಯಕ್ಕೆ ಗಣ್ಯಾತಿಗಣ್ಯರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಹಸಿರೀಕರಣ, ಪರಿಸರ ಸಂರಕ್ಷಣೆ, ಬದೀಬದಿ ವ್ಯಾಪಾರಿಗಳಿಗೆ ಅಗತ್ಯ ಸಾಮಗ್ರಿಗಳ ನೆರವು ಹೀಗೆ ನಾನಾ ಸೇವಾ ಕಾರ್ಯದಲ್ಲಿ ಜನಮನ್ನಣೆ ಗಳಿಸಿದ್ದಾರೆ. ಮಳೆ, ಬಿಸಿಲಲ್ಲಿ ವ್ಯಾಪಾರ ಮಾಡುವ ಬೀದಿಬದಿ ವ್ಯಾಪಾರಿಗಳಿಗೆ ಅದೆಷ್ಟೋ





ತಳ್ಳುವ ಗಾಡಿಗಳನ್ನು ನೀಡಿದ್ದಾರೆ. ಇವರು ನೆಟ್ಟು ಪೋಷಿಸಿದ ಅದೆಷ್ಟೂ ಅಸಂಖ್ಯಾ ಗಿಡಗಳು ಇಂದು ಮರವಾಗಿ ಮೈಸೂರಿನ ಪ್ರಾಕೃತಿಕ ಸೌಂದರ್ಯದ ಮಡಿಲಿನಲ್ಲಿ ಕಂಗೊಳಿಸುತ್ತಿವೆ. ಮೈಸೂರಿನ ಯಾವುದೇ ಭಾಗಕ್ಕೆ ಹೋದರೂ ರಘುಲಾಲ್ ರಕ್ಷಾ ಕವಚದಲ್ಲಿ ಗಿಡ–ಮರಗಳು ನಳನಳಿಸುತ್ತಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಬಿನಿ ಜಲಾಶಯ ಭರ್ತಿಗೆ ಒಂದೇ ಅಡಿ ಬಾಕಿ

● 20 ಸಾವಿರ ಕ್ಯುಸೆಕ್ ನೀರು ಬಿಡುಗಡೆ ● ಕೆಲವೆಡೆ ಸೇತುವೆ, ರಸ್ತೆಗಳು ಜಲಾವೃತ, ಸಂಚಾರ ಸ್ಥಗಿತ



"ಕಬಿನಿ ಜಲಾಶಯ ಭರ್ತಿಯಾದ ಹಿನ್ನೆಲೆಯಲ್ಲಿ ಬಾಗಿನ ಅರ್ಪಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರಮುಖ ಮಂತ್ರಿಗಳು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ ಜಲಾಶಯಕ್ಕೆ ಬಾಗಿನ ಅರ್ಪಿಸುವ ದಿನಾಂಕವನ್ನು ನಿಗದಿಪಡಿಸಲಾಗುವುದು.

–ಅನಿಲ್ ಚಿಕ್ಕಮಾದು, ಹೆಚ್.ಡಿ.ಕೋಟೆ ಶಾಸಕ.

ಹೆಚ್.ಡಿ.ಕೋಟೆ. ಜು.26– ಕೇರಳದ ವೈನಾಡಿನಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಕಬಿನಿ ಜಲಾಶಯಕ್ಕೆ ಭಾರೀ ಒಳಹರಿವಿದ್ದು, ಜಲಾಶಯ ತುಂಬಲು ಇನ್ನು ಕೇವಲ ಒಂದು ಅಡಿ ಬಾಕಿ ಇದೆ

ಜಲಾಶಯದ ಗರಿಷ್ಠ ಮಟ್ಟ 2284 ಅಡಿ ಇದ್ದು, ಜಲಾಶಯದ ಇಂದಿನ ಮಟ್ಟ 2283 ಅಡಿ. ಜಲಾಶಯಕ್ಕೆ 25 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿರುವ ಹಿನ್ನೆಲೆಯಲ್ಲಿ ಜಲಾಶಯದ ಪ್ರಮುಖ ನಾಲ್ಕು ಕ್ರಸ್ಟ್ ಗೇಟ್‌ಗಳಿಂದ 15 ಸಾವಿರ ಕ್ಯುಸೆಕ್ ಹಾಗೂ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್‌ನಿಂದ 5 ಸಾವಿರ ಸೇರಿದಂತೆ ಒಟ್ಟು 20 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುತ್ತಿದೆ.

ಜಲಾಶಯದ ಭದ್ರತಾ ದೃಷ್ಟಿಯಿಂದ 20 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಬಿಟ್ಟಿರುವುದರಿಂದ ಜಲಾಶಯದ ಮುಂಭಾಗದ ಸೇತುವೆ ಮುಳುಗಡೆಯಾಗಿದ್ದು, ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಇದೇ ರೀತಿ ಬೀಚನಹಳ್ಳಿ ಮತ್ತು ಬಿದರಹಳ್ಳಿ ಸರ್ಕಲ್ ಮಧ್ಯ ಇರುವ ಸೇತುವೆ ಮುಳುಗಡೆ ಆಗಿರುವುದರಿಂದ ಎರಡು ಕಡೆ ಬ್ಯಾರಿಕೇಡ್ ಹಾಕಿ ವಾಹನ ಸಂಚಾರ ನಿರ್ಬಂಧಿಸಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ. ಹ್ಯಾಂಡ್‌ಪೋಸ್ಟ್‌ನಿಂದ ಎನ್.ಬೇಗೂರಿಗೆ ತೆರಳುವ ಬಿದರಹಳ್ಳಿ, ತೆರಣಿಮುಂಟಿ ಮೊಸರಹಳ್ಳ ಬಸಾಪುರ, ಕೆಂಚನಹಳ್ಳಿ, ಮೂರ್ ಬಾಂಡ್, ಭೀಮನಕೊಲ್ಲಿ, ಎನ್.ಬೇಗೂರು, ಬೀರಂಬಳ್ಳಿ, ಗೆಂಡತ್ತೂರು ಗ್ರಾಮಗಳಿಗೆ ತೆರಳುವ ರಸ್ತೆಯೂ ನೀರಿನಲ್ಲಿ ಮುಳುಗಡೆಯಾಗಿರುವುದರಿಂದ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಹ್ಯಾಂಡ್‌ಪೋಸ್ಟ್, ಸರಗೂರು ಮಾರ್ಗವಾಗಿ ವಾಹನಗಳು ಸಂಚರಿಸುತ್ತಿವೆ. ಹ್ಯಾಂಡ್‌ಪೋಸ್ಟ್‌ನಿಂದ ಎನ್.ಬೇಗೂರು ಇತರೆ ಗ್ರಾಮಗಳಿಗೆ ತೆರಳುವ ಲಘು ವಾಹನ ಸವಾರರಿಗೆ ಅಣೆಕಟ್ಟಿನ ಮೇಲೆ ಅವಕಾಶ ನೀಡಿದ್ದು, ಭಾರೀ ಗಾತ್ರದ ವಾಹನಗಳ ಪ್ರವೇಶ ನಿರ್ಬಂಧಿಸಲಾಗಿದೆ. ಸಾರಿಗೆ ಬಸ್ ಸೇರಿದಂತೆ ಭಾರೀ ವಾಹನಗಳು ಸರಗೂರು ಮಾರ್ಗವಾಗಿ ತೆರಳಬೇಕಾಗಿದೆ.


ಜಲಾಶಯಕ್ಕೆ ದಿನೇ ದಿನೆ ಒಳ ಹರಿವಿನ ಪ್ರಮಾಣ ಹೆಚ್ಚುತ್ತಿದ್ದು, ಜಲಾಶಯದ ನೀರಾವರಿ ಅಧಿಕಾರಿಗಳು ಸ್ಥಳದಲ್ಲಿ ಮೊಕ್ಕಾಂ ಹೂಡಿ ಜಲಾಶಯದ ಮೇಲೆ ನಿಗಾ ವಹಿಸಿದ್ದಾರೆ. ಜಲಾಶಯ ಭರ್ತಿ ಆಗುತ್ತಿರುವುದರಿಂದ ಜಲಾಶಯ ವೀಕ್ಷಿಸಲು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ.

"ಜಲಾಶಯಕ್ಕೆ 25 ಸಾವಿರ ಕ್ಯುಸೆಕ್ ಒಳಹರಿವಿದ್ದು, ಜಲಾಶಯದ ಭದ್ರತಾ ದೃಷ್ಟಿಯಿಂದ 20 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗಿದೆ. ಕೇರಳದಲ್ಲಿ ಮಳೆ ಪ್ರಮಾಣ ಹೆಚ್ಚಾಗುತ್ತಿರುವ ಕಾರಣ ಒಳ ಹರಿವಿನ ಪ್ರಮಾಣ ಇನ್ನೂ ಮೂರು ದಿನ ಇದೇ ರೀತಿ ಇರುತ್ತದೆ. ಜಲಾಶಯದ ಸರಾಸರಿ ಮಟ್ಟ ಕಾಯ್ದುಕೊಂಡು ಹೊರ ಹರಿಸಲಾಗುತ್ತಿದೆ. ಜಲಾಶಯ ಭರ್ತಿ ಆಗುತ್ತಿರುವ ಹಿನ್ನೆಲೆಯಲ್ಲಿ ಈಗಾಗಲೇ ನದಿ ಪಾತ್ರದ ಜನರಿಗೆ ಕರಪತ್ರ ಹಂಚಿ ಸುರಕ್ಷಿತ ಸ್ಥಳಕ್ಕೆ ತೆರಳಲು ಮನವಿ ಮಾಡಲಾಗಿದೆ.

–ಚಂದ್ರಶೇಖರ್, ಇಇ, ಕಬಿನಿ ಜಲಾಶಯ.

ಕಬಿನಿ ನೀರಿನ ಮಟ್ಟ	
ಗರಿಷ್ಠ ಮಟ್ಟ	2284 ಅಡಿ
ಬುಧವಾರ	2282.83 ಅಡಿ
ಒಳಹರಿವು	24813 ಕ್ಯುಸೆಕ್
ಹೊರಹರಿವು	20000 ಕ್ಯುಸೆಕ್

ಕೆಆರ್‌ಎಸ್ ನೀರಿನ ಮಟ್ಟ 106.50 ಅಡಿಗೆ ಏರಿಕೆ



ಶ್ರೀರಂಗಪಟ್ಟಣ, ಜು.26– ಕೆಲವು ದಿನಗಳಿಂದ ಕೊಡಗಿನಲ್ಲಿ ಧಾರಾಕಾರ ಮಳೆಯಾದ ಪರಿಣಾಮ ಕೆಆರ್‌ಎಸ್ (ಕೃಷ್ಣರಾಜ ಸಾಗರ) ಅಣೆಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಬುಧವಾರ ರಾತ್ರಿ 8 ಗಂಟೆ ವೇಳೆಗೆ ಕೆಆರ್‌ಎಸ್ ನೀರಿನ ಮಟ್ಟ 106.50 ಅಡಿಗೆ ಏರಿಕೆಯಾಗಿದೆ.

ಕೆಆರ್‌ಎಸ್ ಅಣೆಕಟ್ಟೆಗೆ 40,917 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, 5,238 ಕ್ಯುಸೆಕ್ ನೀರನ್ನು ಹೊರ ಬಿಡಲಾಗುತ್ತಿದೆ. ಮತ್ತೊಂದೆಡೆ ಅಣೆಕಟ್ಟೆ ಭರ್ತಿಯಾಗುವ ಮಟ್ಟಕ್ಕೆ ಬಂದಾಗ 40 ಹೊಸ ಕ್ರಸ್ಟ್ ಗೇಟ್‌ಗಳ ಮೂಲಕವೂ ನೀರನ್ನು ಹೊರ ಬಿಡಲು ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ. ಅಣೆಕಟ್ಟೆಯ ಒಟ್ಟು 153 ಕ್ರಸ್ಟ್ ಗೇಟ್‌ಗಳ ಪೈಕಿ 136 ಗೇಟ್‌ಗಳನ್ನು ಬದಲಾಯಿಸುವ ಕಾಮಗಾರಿಯು ವಿಶ್ವ ಬ್ಯಾಂಕ್‌ನ 69 ಕೋಟಿ ರೂ. ಆರ್ಥಿಕ ನೆರವಿನಿಂದ ಕೈಗೊಳ್ಳಲಾಗಿದೆ. ಈ ಪೈಕಿ 40 ಗೇಟ್‌ಗಳ ಬದಲಾವಣೆ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಅಣೆಕಟ್ಟೆ ಭರ್ತಿಯಾಗುವ ಮಟ್ಟಕ್ಕೆ ಬಂದಾಗ ಈ ಗೇಟ್‌ಗಳ ಮೂಲಕವೂ ನೀರು ಹೊರ ಬಿಡಲು ಸಿದ್ಧತೆ ನಡೆದಿದೆ ಎಂದು ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅಬು ಫಾರುಖ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸೂಪರ್‌ವೈಸರಿ ಕಂಟ್ರೋಲ್ ಮತ್ತು ಡಾಟಾ ಆಕ್ವಿಸೇಷನ್ (ಎಸ್‌ಸಿಎಡಿಎ) ಎಂಬ ವ್ಯವಸ್ಥೆ ಅಣೆಕಟ್ಟೆಗೆ ನೀರಿನ ಒಳ ಹರಿವಿನ ಮೇಲೆ ನಿಗಾ ವಹಿಸುತ್ತದೆ. ಅಣೆಕಟ್ಟೆಯಲ್ಲಿ ನೀರಿನ ಪ್ರಮಾಣ ಆಧರಿಸಿ ನೀರನ್ನು ಹಂತಹಂತವಾಗಿ ಹೊರ ಬಿಡಲಾಗುತ್ತದೆ. ನೀರಿನ ಮಟ್ಟ 80 ಅಡಿ ಇದ್ದರೆ 17 ಗೇಟ್‌ಗಳು, 106 ಅಡಿಗೆ 40, 103 ಅಡಿಗೆ 48, 114 ಅಡಿ ಮಟ್ಟದಲ್ಲಿ 48 ಗೇಟ್‌ಗಳು ಸೇರಿದಂತೆ ಒಟ್ಟು 153 ಗೇಟ್‌ಗಳಲ್ಲಿ ಅಣೆಕಟ್ಟೆ ಸಂಪೂರ್ಣ ಭರ್ತಿಯಾದಾಗ ನೀರು ಬಿಡಲಾಗುತ್ತದೆ.

ಕ್ರಸ್ಟ್ ಗೇಟ್‌ಗಳನ್ನು ಬದಲಾಯಿಸುವ ಕಾಮಗಾರಿ ಸಂಪೂರ್ಣವಾಗಿ ಮುಗಿದ ನಂತರ ಸ್ವಯಂಚಾಲಿತವಾಗಿ ಗೇಟ್‌ಗಳಿಂದ ನೀರನ್ನು ಹೊರ ಬಿಡುವ ವ್ಯವಸ್ಥೆ ಮಾಡಿಕೊಳ್ಳಲಾಗುವುದು ಎಂದು ಅವರು ಹೇಳಿದರು.

ಈ ಮಧ್ಯೆ ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ಹೆಚ್ಚಿರುವುದರಿಂದ ರೈತರ ಬೆಳೆಗಳಿಗೆ ನೀರು ಬಿಡಬೇಕೆಂದು ರೈತ ಸಂಘದ ಮುಖಂಡರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ರೈತರಿಗೆ ಸೂಕ್ತ ಪರಿಹಾರಕ್ಕೆ ಆಗ್ರಹ



ಮೈಸೂರು,ಜು.26(ಪಿಎಂ)– ಕೋಚನಹಳ್ಳಿಯಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಭೂಮಿ ನೀಡಿರುವ ಗ್ರಾಮದ ರೈತರಿಗೆ ವಾರದೊಳಗೆ ಸೂಕ್ತ ಪರಿಹಾರ ನೀಡಬೇಕು. ಇಲ್ಲವಾದರೆ ಕೋಚನಹಳ್ಳಿ ಗ್ರಾಮದಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು ಎಂದು ಕೋಚನಹಳ್ಳಿ ರೈತರ ಹೋರಾಟ ಸಮಿತಿ ಎಚ್ಚರಿಕೆ ನೀಡಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಮುಖಂಡ ಹೊಸಕೋಟೆ ಬಸವರಾಜು, ಹೆರಿಟೇಜ್ ಗಾಲ್ಫ್ ಕಂಪನಿಯವರು ಕೋಚನಹಳ್ಳಿ ರೈತರಿಂದ ಖರೀದಿಸಿದ್ದ 189 ಎಕರೆಗೆ ಸಂಬಂಧಿಸಿದಂತೆ 105 ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಸರ್ಕಾರ ಮಧ್ಯೆ ಪ್ರವೇಶಿಸಿ, ಸೂಕ್ತ ಪರಿಹಾರ ಕೊಡಿಸಬೇಕು ಎಂದು ಒತ್ತಾಯಿಸಿದರು.

ಎಕರೆಗೆ 1.25 ಲಕ್ಷದಿಂದ 2 ಲಕ್ಷ ರೂ. ವರೆಗಿನ ಮೊತ್ತದಲ್ಲಿ ಹೆರಿಟೇಜ್ ಗಾಲ್ಫ್ ಕಂಪನಿಯವರು ರೈತರಿಂದ ಭೂಮಿ ಖರೀದಿಸಿದ್ದರು. ಈ ಕಂಪನಿಯು ಭೂಮಿ ನೀಡಿದ ಪ್ರತಿಯೊಂದು ರೈತ ಕುಟುಂಬಕ್ಕೂ ಉದ್ಯೋಗ ನೀಡುವ ಭರವಸೆ ನೀಡಿತ್ತು. ಆದರೆ ರೈತರಿಂದ ಖರೀದಿಸಿದ ಭೂಮಿಯನ್ನು ಕಂಪನಿ ನಿರ್ದೇಶಕರು, ಬೇನಾಮಿ ಹೆಸರುಗಳಲ್ಲಿ ನೋಂದಾಯಿಸಿದ್ದಾರೆ ಎಂದು ದೂರಿದರು.

ಕೊನೆಗೆ ಕಂಪನಿ ಹೇಳಿದಂತೆ ಯಾವುದೇ ಚಟುವಟಿಕೆಗಳು ನಡೆಯಲಿಲ್ಲ. ರೈತರಿಂದ ಖರೀದಿಸಿದ್ದ ಭೂಮಿಯನ್ನು ಕಂಪನಿಯಿಂದ (ಬೇನಾಮಿ ಪಾಲುದಾರರ ಹೆಸರಿನಲ್ಲಿ) ಎಕರೆಗೆ 47.50 ಲಕ್ಷ ರೂ.ನಂತೆ ಕೆಐಎಡಿಬಿ ಖರೀದಿ ಮಾಡಿದೆ. ಆ ಮೂಲಕ ನಿಜವಾದ ಭೂಮಿ ಮಾಲೀಕರಾದ ರೈತರನ್ನು ವಂಚಿಸಲಾಗಿದೆ ಎಂದು ಆರೋಪಿಸಿದರು. ಮುಖಂಡರಾದ ಚಂದ್ರಶೇಖರ ಮೇಟಿ, ಉಗ್ರನರಸಿಂಹೇಗೌಡ, ಮಂಡಕಳ್ಳಿ ಮಹೇಶ್, ಮಹೇಶ್, ಮರಂಕಯ್ಯ ಗೋಷ್ಠಿಯಲ್ಲಿದ್ದರು.

ಗೃಹಲಕ್ಷ್ಮಿ ನಕಲಿ ಪತ್ರ: ಸಿಕ್ಕಿಬಿದ್ದ ಸೈಬರ್ ಸೆಂಟರ್ ಮಾಲೀಕ, ಬೀಗ ಜಡಿದ ಪೊಲೀಸರು





ಸುರೇಶ್‌ಕುಮಾರ್

ಮೈಸೂರು, ಜು.26(ಸಿಎನ್)–ಸರ್ಕಾರದ ಗೃಹಲಕ್ಷ್ಮಿ ಯೋಜನೆಯ ನಕಲಿ ಮಂಜೂರಾತಿ ಪತ್ರ ಸಿದ್ಧಪಡಿಸುತ್ತಿದ್ದ ಸೈಬರ್ ಸೆಂಟರ್ ಮಾಲೀಕನನ್ನು ಮೇಟಗಳ್ಳಿ ಪೊಲೀಸರು ಬಂಧಿಸಿದ್ದಾರೆ.

ಮೇಟಗಳ್ಳಿಯ ಸುಧಾಮೂರ್ತಿ ರಸ್ತೆಯ, ನಕುಲ್ ನೆಟ್ ವರ್ಲ್ಡ್ ಸಿಎಸ್‌ಸಿ ಸೈಬರ್ ಸೆಂಟರ್ ಮಾಲೀಕ ಸುರೇಶ್ ಕುಮಾರ್ (38) ಬಂಧಿತ ಆರೋಪಿ.

ಸರ್ಕಾರದ ಮಹತ್ವದ ಯೋಜನೆಗಳಲ್ಲೊಂದಾದ ಮನೆ ಯಜಮಾನಿಗೆ ತಿಂಗಳಿಗೆ 2000 ರೂ. ನೀಡುವ ಗೃಹಲಕ್ಷ್ಮಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜುಲೈ 19ರಂದು ಚಾಲನೆ ನೀಡಿದ್ದರು. ಕೆಲ ಸೈಬರ್ ಸೆಂಟರ್ ಮಾಲೀಕರು ಅನಧಿಕೃತವಾಗಿ ಲಾಗಿನ್ ಪಾಸ್‌ವರ್ಡ್ ಪಡೆದು ಅರ್ಜಿ ಸಲ್ಲಿಕೆಗೆ ಹಣ ಪಡೆದು ವಂಚಿಸುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ.

ಇದೀಗ ಮೈಸೂರಿನ ಮೇಟಗಳ್ಳಿ ಸೈಬರ್ ಸೆಂಟರ್ ಮಾಲೀಕ ಸುರೇಶ್ ನಕಲಿ ಸರ್ಟಿಫಿಕೇಟ್‌ಗಳನ್ನು ಸಿದ್ಧಪಡಿಸಿ, ಫಲಾನುಭವಿಗಳಿಂದ 70–100 ರೂ. ವಸೂಲಿ ಮಾಡುತ್ತಿರುವ ಬಗ್ಗೆ ತಿಳಿದ, ಪಕ್ಕದ ಕರ್ನಾಟಕ ಒನ್ ಕೇಂದ್ರದ ಸಿಬ್ಬಂದಿ ಸುಕೇಶ್ ಕುಮಾರ್, ವಿಡಿಯೋ ಚಿತ್ರೀಕರಿಸಿ ಸಾಕ್ಷ್ಯ ಸಮೇತ ಪೊಲೀಸರಿಗೆ ದೂರು ನೀಡಿದ್ದರು.

ಎಸಿಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ಸೈಬರ್ ಸೆಂಟರ್ ಮೇಲೆ ದಾಳಿ ನಡೆಸಿ, ಬೀಗ ಜಡಿದು, ಕೆಲವು ಫೇಕ್ ಸರ್ಟಿಫಿಕೇಟ್‌ಗಳನ್ನ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈತ ಪಡೆದಿದ್ದ ಸಿಎಸ್‌ಸಿ ಪರವಾನಗಿಯೂ ಅಂತ್ಯಗೊಂಡಿದ್ದು, ಪರವಾನಗಿ ನವೀಕರಣ ಮಾಡಿಕೊಂಡಿಲ್ಲ ಎಂದು ತಿಳಿದು ಬಂದಿದೆ.

ಸರ್ಕಾರಿ ವ್ಯಾಪ್ತಿಯ ಸೇವಾ ಕೇಂದ್ರಗಳಲ್ಲಿ ವಿಪರೀತ ಜನದಟ್ಟಣೆ ಆಗುತ್ತಿರುವ ಹಿನ್ನೆಲೆ ಸಾಕಷ್ಟು ಮಹಿಳೆಯರು ನೋಂದಣಿಗಾಗಿ ಸೈಬರ್ ಸೆಂಟರ್‌ಗಳ ಮೊರೆ ಹೋಗಿದ್ದಾರೆ. ಇದನ್ನೇ ಲಾಭ ಮಾಡಿಕೊಂಡ ಸುರೇಶ್ ತನ್ನ ಕಂಪ್ಯೂಟರ್‌ನಲ್ಲಿ ಮೈಕ್ರೋಸಾಫ್ಟ್ ವರ್ಡ್ ಸಾಫ್ಟ್‌ವೇರ್ ಮೂಲಕ ಮಂಜೂರಾತಿ ಪತ್ರವನ್ನು ಎಡಿಟ್ ಮಾಡಿ, ನಕಲಿ ಸರ್ಟಿಫಿಕೇಟ್‌ಗಳನ್ನು ಸಿದ್ಧಪಡಿಸಿ ಅನೇಕ ಮಂದಿಗೆ ಯಾಮಾರಿಸಿದ್ದಾನೆ. ಸದ್ಯ ಸೈಬರ್ ಸೆಂಟರ್‌ನ ಕಂಪ್ಯೂಟರ್‌ಗಳನ್ನು ಸೀಜ್ ಮಾಡಲಾಗಿದೆ.

ನಗರ ಪೊಲೀಸ್ ಆಯುಕ್ತ ಡಾ.ಬಿ. ರಮೇಶ್ ಮಾರ್ಗದರ್ಶನ ಹಾಗೂ ಡಿಸಿಪಿಗಳಾದ ಮುತ್ತುರಾಜ್, ಜಾಹ್ನವಿ ಅವರ ಉಸ್ತುವಾರಿಯಲ್ಲಿ ಎಸಿಪಿ ಗಜೇಂದ್ರ ಪ್ರಸಾದ್, ಮೇಟಗಳ್ಳಿ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್ ಹಾಗೂ ಸಿಬ್ಬಂದಿ ದಾಳಿ ನಡೆಸಿ ಆರೋಪಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂಬಂಧ ಮೇಟಗಳ್ಳಿ ಠಾಣೆಯ ಪೊಲೀಸರು ಸೆಕ್ಷನ್ 420, 464 ರ ಅಡಿ ಪ್ರಕರಣ ದಾಖಲಿಸಿದ್ದಾರೆ.

ಅಂಚೆ ನೇಮಕಾತಿ ನೇರ ಸಂದರ್ಶನ

ಮೈಸೂರು,ಜು.26–ಅಂಚೆ ಜೀವವಿಮೆ ಹಾಗೂ ಗ್ರಾಮೀಣ ಅಂಚೆ ಜೀವವಿಮೆ ಸೇವೆಯನ್ನು ಸಾರ್ವಜನಿಕರಿಗೆ ತಲುಪಿಸುವ ಸಲುವಾಗಿ ಏಜೆಂಟ್‌ಗಳನ್ನು ನೇರ ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಆ.10ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ವಿಭಾಗದ ಯಾದವಗಿರಿ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನೇರ ಸಂದರ್ಶನ ಏರ್ಪಡಿಸಲಾಗಿದೆ. ಸಂದರ್ಶನದಲ್ಲಿ ಭಾಗವಹಿಸಲು ಅಭ್ಯರ್ಥಿಗಳ ವಯೋಮಿತಿ 18ರಿಂದ 50 ವರ್ಷದೊಳಗಿರಬೇಕು. SSLC ಯಲ್ಲಿ ತೇರ್ಗಡೆ ಹೊಂದಿರಬೇಕು. ಅರ್ಜಿಗಳನ್ನು ಹತ್ತಿರದ ಅಂಚೆ ಕಚೇರಿಯಿಂದ ಪಡೆದುಕೊಂಡು ಜನ್ಮ ದಿನಾಂಕ, ವಿದ್ಯಾರ್ಹತೆ, ಅನುಭವ ವಿವರಗಳನ್ನು ಒಳಗೊಂಡ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು ಎಂದು ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜು.26– ನರಸಿಂಹರಾಜ ಮೊಹಲ್ಲಾ ವಿಭಾಗ ವ್ಯಾಪ್ತಿಯ ಕಾಮಗಾರಿ ನಿಮಿತ್ತ ಜು.27 ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ಸಿದ್ದಿಖಿನಗರ, ಶಿವರಾತ್ರೀಶ್ವರ ನಗರ, ಮಣಿಪಾಲ್ ಹಾಸ್ಪಿಟಲ್ಸ್, ಹನುಮಂತನಗರ, ಹುಡ್ಕೊ, ಇಂಡಸ್ಟ್ರಿಯಲ್ 'ಎ' ಬಡಾವಣೆ, 'ಸಿ' ಬಡಾವಣೆ, ಟೆಲಿಫೋನ್ ಎಕ್ಸ್‌ಚೇಂಜ್, ಕೆ.ಎಸ್.ಆರ್‌ಟಿಸಿ ಡಿಪೋ, ಲಿಡ್ಕರ್ ಕಾಲೋನಿ, ಇಂಡಸ್ಟ್ರಿಯಲ್ 'ಬಿ' ಬಡಾವಣೆ, ಹೈವೆ ವೃತ್ತ, ಸ್ಟಾರ್ ಆಫ್ ಮೈಸೂರು, ಪರಹಾ ಕಾಂಪೌಂಡ್, ಕಾವೇರಿನಗರ, ಬೆಲವತ್ತ, ಸಾದನಹಳ್ಳಿ, ಸಿದ್ದಲಿಂಗಪುರ, ಕೆ.ಆರ್ ಮಿಲ್ ಕಾಲೋನಿ, ನಾಗನಹಳ್ಳಿ,ಲಕ್ಷ್ಮೀಪುರಂ, ಕಳಸ್ತವಾಡಿ, ಮೈಸೂರು–ಬೆಂಗಳೂರು ಮುಖ್ಯ ರಸ್ತೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



ಜು.30, ಬಲಿಜ ಸಂಘದ ವಿಶೇಷ ಸಾಮಾನ್ಯ ಸಭೆ



ಮೈಸೂರು,ಜು.26(ಪಿಎಂ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಜು.30 ರಂದು ಬೆಳಗ್ಗೆ 11ಕ್ಕೆ ಬಲಿಜ ಸಂಘದ ವಿಶೇಷ ಸಾಮಾನ್ಯ ಸಭೆ ಆಯೋಜಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ಕೆ.ಲಿಂಗರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘದ ಸದಸ್ಯರು ತಪ್ಪದೇ ಗುರುತಿನ ಚೀಟಿಯೊಂದಿಗೆ ಸಭೆಗೆ ಆಗಮಿಸಬೇಕು. ಜೊತೆಗೆ ಜಯನಗರದಲ್ಲಿರುವ ಸಂಘದ ಕಚೇರಿ ಆವರಣದಲ್ಲಿದ್ದ ಸಮುದಾಯದ ಪುರುಷರ ಉಚಿತ ವಿದ್ಯಾರ್ಥಿನಿಲಯದ ಕಟ್ಟಡವನ್ನು ನವೀಕರಿಸಿ ಪುನರಾರಂಭಿಸಲಾಗುತ್ತಿದೆ. ಪಿಯುಸಿ ಮತ್ತು ಮೇಲ್ಪಟ್ಟ ಸಮುದಾಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಈ ಸಂಬಂಧ ಹೆಚ್ಚಿನ ವಿವರಗಳಿಗೆ ವಿದ್ಯಾರ್ಥಿಗಳು ಮೊ.ಸಂ. 90089 12444 ಸಂಪರ್ಕಿಸಬಹುದು ಎಂದರು.

ಆಸಕ್ತರು ಸಂಘದ ಸರ್ವತೋಮುಖ ಅಭಿವೃದ್ಧಿಗೆ ಆರ್ಥಿಕ ಸಹಾಯ ನೀಡಬಹುದು ಎಂದರು. ಸಂಘದ ಉಪಾಧ್ಯಕ್ಷ ಕೆ.ಚಿನ್ನಸ್ವಾಮಿ, ಜಂಟಿ ಕಾರ್ಯದರ್ಶಿ ಜಿ.ಮಹೇಶ್ ನಾಯ್ಡು, ಖಜಾಂಚಿ ಆರ್. ಮಂಜುನಾಥ್, ನಿರ್ದೇಶಕ ಎಂ.ಎಸ್. ಯೋಗೀಶ್ ಗೋಷ್ಠಿಯಲ್ಲಿದ್ದರು.

ಜು.30, ಕಾರ್ಗಿಲ್ ವಿಜಯ ದಿವಸ್ ಪ್ರಯುಕ್ತ ಜಾಥಾ, ಸ್ವಚ್ಛತಾ ಶ್ರಮದಾನ



ಮೂವ್‌ಮೆಂಟ್‌ನ ಸಂಸ್ಥಾಪಕ ವಿ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಜು.26(ಪಿಎಂ)– ಮೈಸೂರು ಎಕ್ಸ್–ಸರ್ವಿಸ್‌ಮೆನ್ ಮೂವ್‌ಮೆಂಟ್ ವತಿಯಿಂದ ಕಾರ್ಗಿಲ್ ವಿಜಯ ದಿವಸದ ಪ್ರಯುಕ್ತ ಜು.30ರಂದು ಕಾಲ್ನಡಿಗೆ ಜಾಥಾ ಹಾಗೂ ಸ್ವಚ್ಛತಾ ಶ್ರಮದಾನ ಹಮ್ಮಿಕೊಳ್ಳಲಾಗಿದೆ ಎಂದು ಮೂವ್‌ಮೆಂಟ್‌ನ ಸಂಸ್ಥಾಪಕ ವಿ.ಮಹೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಅವರ ವೃತ್ತದಲ್ಲಿ (ಮೆಟ್ರೋಪೋಲ್ ವೃತ್ತ) ಬೆಳಗ್ಗೆ 6.30ಕ್ಕೆ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ನಂತರ ಜಾಥಾಗೆ ಚಾಲನೆ ನೀಡಲಾಗುವುದು. ದೇಶಭಕ್ತಿ ಹಾಗೂ ವಿಜಯ ಘೋಷಣೆಗಳೊಂದಿಗೆ ಜಾಥಾ ಸಾಗಲಿದೆ ಎಂದರು.

ದಾಸಪ್ಪ ವೃತ್ತ, ಬಾಬು ಜಗಜೀವನರಾಂ ವೃತ್ತ, ಜೆಕೆ ಮೈದಾನ ರಸ್ತೆ ಮಾರ್ಗದಲ್ಲಿ ಸಾಗಿ ಕೆಆರ್ ಆಸ್ಪತ್ರೆ ಆವರಣದಲ್ಲಿ ಜಾಥಾ ಮುಕ್ತಾಯಗೊಳ್ಳಲಿದೆ. ಬೆಳಗ್ಗೆ 7ರಿಂದ 8ರವರೆಗೆ ಕೆಆರ್ ಆಸ್ಪತ್ರೆ ಆವರಣದಲ್ಲಿ ಸ್ವಚ್ಛತಾ ಶ್ರಮದಾನ ನಡೆಸಲಾಗುವುದು. ನಂತರ ಉಪಾಹಾರ ವಿತರಣೆ ಮಾಡಿ, ಸ್ವಚ್ಛತಾ ಶ್ರಮದಾನದಲ್ಲಿ ಪಾಲ್ಗೊಂಡಿದ್ದ ಎಲ್ಲರಿಗೂ ಪ್ರಶಂಸನಾ ಪತ್ರ ವಿತರಿಸಲಾಗುವುದು ಎಂದು ಹೇಳಿದರು.

ನಮ್ಮ ಸಂಘಟನೆಯ ಎಲ್ಲಾ ಸದಸ್ಯರು ಹಾಗೂ ಅವರ ಕುಟುಂಬದವರು ಸೇರಿದಂತೆ ವಿವಿಧ ಸಂಘಟನೆಯವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಆಸಕ್ತ ಸಾರ್ವಜನಿಕರೂ ಭಾಗವಹಿಸಬಹುದು ಎಂದರು. ಮೂವ್‌ಮೆಂಟ್‌ನ ಅಧ್ಯಕ್ಷ ಪ್ರಿನ್ಸ್, ಪ್ರಧಾನ ಕಾರ್ಯದರ್ಶಿ ಸಿ.ಎಂ.ಶ್ರೀಧರ್, ನಿರ್ದೇಶಕ ಕಿಶೋರ್ ಕದಮ್ ಗೋಷ್ಠಿಯಲ್ಲಿದ್ದರು.

ವಿಶ್ವಕರ್ಮ ಕುಲಶಾಸ್ತ್ರೀಯ ಅಧ್ಯಯನ ಸಂಬಂಧ ನಾಳೆ ಸಭೆ



ಮೈಸೂರು,ಜು.26(ಪಿಎಂ)– ವಿಶ್ವಕರ್ಮ ಮತ್ತು ಅದರ ಉಪ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನಕ್ಕಾಗಿ ಸರ್ಕಾರ ರಚಿಸಿರುವ ಸಮಿತಿಯು ಮಾಹಿತಿ ಸಂಗ್ರಹಕ್ಕಾಗಿ ಮೈಸೂರಿನಲ್ಲಿ ಜು.28 ರಂದು ಸಭೆ ಆಯೋಜಿಸಿದೆ ಎಂದು ಕರ್ನಾಟಕ ರಾಜ್ಯ ವಿಶ್ವಕರ್ಮ ಬಡಗಿ ಕೆಲಸಗಾರರ ಸಂಘದ ಅಧ್ಯಕ್ಷ ಎಂ. ಮೊಗಣ್ಣಾಚಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 10.30ಕ್ಕೆ ಸರಸ್ವತಿಪುರಂನ ವಿಶ್ವಕರ್ಮ ವಿದ್ಯಾರ್ಥಿ ನಿಲಯದಲ್ಲಿ ಸಭೆ ಆಯೋಜಿಸಲಾಗಿದೆ. ಜಿಲ್ಲೆಯ ಎಲ್ಲಾ ತಾಲೂಕಿನ ಸಮುದಾಯದ ಸಂಘ–ಸಂಸ್ಥೆಗಳು ಹಾಗೂ ಸಮಾಜದ ಬಾಂಧವರು ಆಗಮಿಸಿ ಅಗತ್ಯ ಸಹಕಾರ ನೀಡಬೇಕೆಂದು ಕೋರಿದರು.

ಸಮುದಾಯವು ಮೀಸಲಾತಿ ಸೌಲಭ್ಯ ಪಡೆಯಲು ಈ ಅಧ್ಯಯನ ಮಹತ್ವದ್ದಾಗಿದೆ. ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಸರ್ಕಾರವು ಮೈಸೂರು ವಿವಿಯ ಸಹಾಯಕ ಪ್ರಾಧ್ಯಾಪಕ ಡಾ.ಡಿ.ಸಿ.ನಂಜುಂಡ ಅವರ ನೇತೃತ್ವದಲ್ಲಿ ಸಮಿತಿ ರಚಿಸಿದೆ ಎಂದು ತಿಳಿಸಿದರು.

ಹೆಚ್ಚಿನ ವಿವರಗಳಿಗೆ ಅಧ್ಯಯನ ಸಮಿತಿಯ ದೂ.ಸಂ. 63604 09568 ಅನ್ನು ಸಂಪರ್ಕಿಸಬಹುದು ಎಂದರು.

ಸಮುದಾಯದ ಮುಖಂಡರಾದ ಮಂಟೇಲಿಂಗಾಚಾರ್, ಜಯಶಂಕರ್, ಮಹೇಶ್, ನಂಜುಂಡಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

HCL Tech Bee ತರಬೇತಿ ಕಾರ್ಯಾಗಾರ

ಮೈಸೂರು,ಜು.26– ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ HCL Tech ಸಹಯೋಗದೊಂದಿಗೆ ಆರಂಭಿಕ ವೃತ್ತಿ ಜೀವನದ ಕಾರ್ಯಕ್ರಮವಾದ HCL Tech Bee ತರಬೇತಿಗೆ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ ಜು.28 ರಂದು ಬೆಳಗ್ಗೆ 10 ಗಂಟೆಗೆ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

2021–22ನೇ ಸಾಲಿನಲ್ಲಿ ಮತ್ತು 2022–23ನೇ ಸಾಲಿನಲ್ಲಿ 12ನೇ ತರಗತಿಯಲ್ಲಿ (ದ್ವಿತೀಯ ಪಿಯುಸಿ) ಪಾಸಾದ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ 12 ತಿಂಗಳು ತರಬೇತಿ ನೀಡಿ, ನಂತರದಲ್ಲಿ ಉನ್ನತ ಶಿಕ್ಷಣ ಜೊತೆಗೆ HCL Tech ನಲ್ಲಿ ಕೆಲಸದ ಅವಕಾಶ ನೀಡಲಾಗುತ್ತದೆ. ಅಭ್ಯರ್ಥಿಗಳು ಎಸ್ಸೆಸ್ಸೆಲ್ಸಿ ಅಂಕಪಟ್ಟಿ, ಆಧಾರ್ ಕಾರ್ಡ್, ದ್ವಿತೀಯ ಪಿಯುಸಿ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳೊಂದಿಗೆ ಕಾರ್ಯಾಗಾರಕ್ಕೆ ಹಾಜರಾಗಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ: 8722790 340, 9845454471, 7019307267, 8217478207, 6362143514 ಮತ್ತು 9019817433 ಸಂಪರ್ಕಿಸಬಹುದು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ದಲಿತ ಒಳ ಮೀಸಲಾತಿ ಪರವಾಗಿದೆ

ಆದಿಜಾಂಬವ ಮಹಾಸಭಾ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಡಾ.ಡಿ. ತಿಮ್ಮಯ್ಯ





ಮೈಸೂರು, ಜು.26(ಎಸ್‌ಪಿಎನ್)– ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದಲಿತ ಒಳ ಮೀಸಲಾತಿ ಪರವಾಗಿದೆ. ಇದರ ಬಗ್ಗೆ ದಲಿತರು ಆತಂಕಪಡುವ ಅಗತ್ಯವಿಲ್ಲ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಭರವಸೆ ನೀಡಿದರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ ಆದಿಜಾಂಬವ ಮಹಾಸಭಾ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಆದಿಜಾಂಬವ ಕುರಿತು, ರಾಮಾಯಣ ಮತ್ತು ಮಹಾಭಾರತದಲ್ಲಿ ಉಲ್ಲೇಖವಿದ್ದು, ಅನೇಕ ಉಪಕಥೆಗಳಿವೆ. ಸಾಕಷ್ಟು ಪುರಾವೆಗಳಿವೆ. ಆದಿಜಾಂಬವ ಸಮುದಾಯಕ್ಕೆ ಐತಿಹಾಸಿಕ ಹಿನ್ನೆಲೆಯಿದೆ ಎಂದರು.

ಪ್ರಸ್ತುತ ಪರಿಶಿಷ್ಟ ಜಾತಿಯಲ್ಲಿ 101 ಒಳ ಪಂಗಡಗಳಿವೆ. ಇದರಲ್ಲಿ ಎಡಗೈನ 46 ಒಳಪಂಗಡಗಳನ್ನು ಸೇರಿಸಲಾಗಿದೆ. ಈಗಿನ ಮೀಸಲಾತಿಯಡಿಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಸಾಕಷ್ಟು ಯೋಜನೆಗಳಿದ್ದು, ಈ ಅನುದಾನವನ್ನು ಬಳಸಿಕೊಳ್ಳಬೇಕು. ದೇವರಾಜ ಅರಸು ಕಾಲಾವಧಿಯಲ್ಲಿ ಅನೇಕ ಶೋಷಿತ ಸಮುದಾಯಗಳಿಗೆ ನೆಲೆ ಸಿಕ್ಕಿತು ಎಂದರೆ ತಪ್ಪಾಗಲಾರದು ಎಂದು ಬಣ್ಣಿಸಿದರು.

ಮಾದಿಗ ಸಮುದಾಯದಲ್ಲಿ ಅನೇಕ ಒಳಪಂಗಡಗಳಿವೆ. ಇದರಲ್ಲಿ ಸಣ್ಣಸಣ್ಣ ಒಳ ಪಂಗಡಗಳಿಗೆ ಇನ್ನೂ ಸರ್ಕಾರದ ಸವಲತ್ತುಗಳು ದೊರಕುತ್ತಿಲ್ಲ. ಸಮುದಾಯದ ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯ ದೊರೆಯುವಂತಾಗಬೇಕು ಎಂದರು.

1960ರ ದಶಕದಲ್ಲಿ ನಾನು ವೈದ್ಯಕೀಯ ವಿದ್ಯಾರ್ಥಿಯಾಗಿದ್ದಾಗ ನಮ್ಮ ಮನೆಯಲ್ಲಿ ಸಾಕಷ್ಟು ಕಷ್ಟ ಇತ್ತು. ನಂತರ ಎಂಬಿಬಿಎಸ್ ತೇರ್ಗಡೆಗೊಂಡ ನಂತರ ಸಮಾಜದಲ್ಲಿ ನನ್ನನ್ನು ಗುರುತಿಸುವ ಪರಿಯೇ ಬದಲಾಯಿತು. ಸರ್ಕಾರಿ ಸೇವೆಗೆ ಸೇರಿ, ಗ್ರಾಮೀಣ ಜನರಿಗೆ ಆರೋಗ್ಯ ಸೇವೆ ನೀಡಿ, ಆರೋಗ್ಯ ಕ್ಷೇತ್ರದಲ್ಲಿ ಜಾಗೃತಿ ಮೂಡಿಸಿದ್ದೇನೆ ಎಂದು ತಿಳಿಸಿದರು.

ನೀವು ಯಾವುದೇ ಕೆಲಸ ಮಾಡುತ್ತಿದ್ದರೂ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ನೀಡಿ, ಉನ್ನತ ಪ್ರಜೆಗಳನ್ನಾಗಿ ರೂಪಿಸುವುದು ನಮ್ಮ–ನಿಮ್ಮೆಲ್ಲರ ಹೊಣೆ. ನಾವು ಅವಕಾಶಕ್ಕಾಗಿ ಕಾದು ಕುಳಿತುಕೊಳ್ಳಬಾರದು. ಸಾಧನೆ ಮಾಡುವ ನಿಟ್ಟಿನಲ್ಲಿ ಮುಂದಿನ ಪೀಳಿಗೆಯನ್ನು ಬೆಳಸಬೇಕು ಎಂದು ಕಿವಿಮಾತು ಹೇಳಿದರು.

ಆದಿಜಾಂಬವ ಸಮುದಾಯಕ್ಕೆ ಸರ್ಕಾರಿ ಸವಲತ್ತುಗಳು ಸರಿಯಾಗಿ ಸಿಗುತ್ತಿಲ್ಲ ಎಂಬ ಆರೋಪವಿದೆ. ಕಾಂಗ್ರೆಸ್ ಸರ್ಕಾರದಲ್ಲಿ ಪ್ರತಿಯೊಬ್ಬರಿಗೂ ಸೌಲಭ್ಯ ದೊರೆಯುವಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ಕಾರ್ಯಕ್ರಮಕ್ಕಾಗಿ ಬೆಂಗಳೂರಿನ ವಿಧಾನಸೌಧದಲ್ಲಿ ಸಭೆಯೊಂದಕ್ಕೆ ಗೈರಾಗಿ ಇಲ್ಲಿಗೆ ಬಂದಿದ್ದೇನೆ. ಏಕೆಂದರೆ ಇಲ್ಲಿ ಅನೇಕ ಸ್ನೇಹಿತರು ಈ ಕಾರ್ಯಕ್ರಮಕ್ಕೆ ಬರಲೇಬೇಕು ಎಂದು ಒತ್ತಾಯ ಮಾಡಿದ್ದರು. ನಿಮ್ಮ ಸಂತೋಷದಲ್ಲಿ ನಾನು ಭಾಗಿಯಾಗಿದ್ದೇನೆ ಎಂದು ಹೇಳಿದರು.

ಸಮಾರಂಭದಲ್ಲಿ ಆದಿಜಾಂಬವ ಮಹಾಸಭಾ ಅಧ್ಯಕ್ಷ ಗಂಗಯ್ಯ (ರೈಲ್ವೆ), ಸಹಾಯಕ ಕಾರ್ಯಪಾಲಕ ಅಭಿಯಂತರ ಶ್ರೀನಿವಾಸ್, ಮೈಸೂರು ಮಹಾ ನಗರಪಾಲಿಕೆ ಮಾಜಿ ಸದಸ್ಯ ಟಿ.ರಾಮು, ಕಾನೂನು ಸಲಹೆಗಾರ ಲಕ್ಷ್ಮಣ, ಆದಿಜಾಂಬವ ಮಹಾಸಭಾ ಸಂಸ್ಥಾಪಕ ನಾರಾಯಣ್, ಬಿ.ಪಿ.ಮುತ್ತುರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಗುರುವಾರ 27 ಜುಲೈ 2023

ಬದುಕಿರುವ ವ್ಯಕ್ತಿ ಡೆತ್ ಸರ್ಟಿಫಿಕೇಟ್ ಮೂಲಕ 34.20 ಎಕರೆ ಭೂಮಿ ಕಬಳಿಕೆ ಯತ್ನ

ನಿವೃತ್ತ ಗ್ರಾಮ ಲೆಕ್ಕಿಗ ಸೇರಿ ಐವರ ಬಂಧನ

ಮಂಡ್ಯ, ಜು.26–ಜೀವಂತವಿರುವವರ ಹೆಸರಿನಲ್ಲಿ ನಕಲಿ ಡೆತ್ ಸರ್ಟಿಫಿಕೇಟ್ ತಯಾರಿಸಿ ವ್ಯಕ್ತಿಯೋರ್ವರು 34 ಎಕರೆ 20 ಗುಂಟೆ ಜಮೀನನ್ನು ಕಬಳಿಸಲು ಯತ್ನಿಸಿದ ನಿವೃತ್ತ ಗ್ರಾಮ ಲೆಕ್ಕಿಗ ಸೇರಿದಂತೆ ಐವರನ್ನು ಮಳವಳ್ಳಿ ಟೌನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುರಗನೂರು ಗ್ರಾಮದ ನಿವೃತ್ತ ಗ್ರಾಮ ಲೆಕ್ಕಿಗ ಟಿ.ಸಿ.ವೆಂಕಟೇಶ್, ಮೈಸೂರು ತಾಲೂಕು ಬುಗತಹಳ್ಳಿ ಗ್ರಾಮದ ಬಿ.ಎಂ.ದೇವರಾಜು, ಶ್ರೀನಿವಾಸ್, ಮಳವಳ್ಳಿ ತಾಲೂಕು ರಾವಣಿ ಗ್ರಾಮದ ಕೇಶವಮೂರ್ತಿ, ತಿ.ನರಸೀಪುರ ತಾಲೂಕು ತಲಕಾಡು ಗ್ರಾಮದ ಮುನಿರಾಜ್ ಬಂಧಿತರಾಗಿದ್ದು, ಇವರಿಂದ ನಕಲಿ ಸೀಲ್‌ಗಳು ಸೇರಿದಂತೆ ನಕಲಿ ದಾಖಲೆಗಳ ಸೃಷ್ಟಿಗಾಗಿ ಬಳಸುವ ಹಲವು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಪ್ರಕರಣದಲ್ಲಿ ಗ್ರಾಮ ಲೆಕ್ಕಿಗನೋರ್ವನ ಪ್ರಾಮಾಣಿಕತೆ ಹಾಗೂ ಸಮಯ ಪ್ರಜ್ಞೆಯೇ ವಂಚಕರು ಪೊಲೀಸರ ಬಲೆಗೆ ಸಿಕ್ಕಿ ಬೀಳಲು ಕಾರಣವಾಗಿದೆ. ಈಗ ನಕಲಿ ಸೀಲ್‌ಗಳು ಮತ್ತಿತರ ವಸ್ತುಗಳನ್ನು ವಶಪಡಿಸಿಕೊಂಡು ಐವರನ್ನು ಬಂಧಿಸಲಾಗಿದೆಯಾದರೂ, ನಕಲಿ ದಾಖಲೆ ಸೃಷ್ಟಿಸಿ ಅಮಾಯಕರ ಜಮೀನುಗಳನ್ನು ಕಬಳಿಸುವ ಜಾಲವೊಂದರ ಬಗ್ಗೆ ಪೊಲೀಸರಿಗೆ ನಿಖರ ಮಾಹಿತಿ ಲಭ್ಯವಾಗಿದ್ದು, ಮತ್ತಷ್ಟು ಮಂದಿ ಬಂಧನವಾಗುವ ಸಾಧ್ಯತೆಯಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿವರ: ಮಳವಳ್ಳಿ ತಾಲೂಕು ಮಲ್ಲಿಕ್ಯಾತನಹಳ್ಳಿ (ರೊಟ್ಟಿ ಕಟ್ಟೆ) ಗ್ರಾಮದ ಗಿರೀಶ್ ರಾಜ್ ಎಂಬುವರ ಡೆತ್ ಸರ್ಟಿಫಿಕೇಟ್‌ನೊಂದಿಗೆ ಅವರಿಗೆ ಸೇರಿದ ಬೆಳಕವಾಡಿ ಗ್ರಾಮದಲ್ಲಿರುವ ವಿವಿಧ ಸರ್ವೆ ನಂಬರ್‌ಗಳ ಒಟ್ಟು 34 ಎಕರೆ 20 ಗುಂಟೆ ಜಮೀನನ್ನು ಅವರ ಪುತ್ರಿ ಶ್ರೀಮತಿ ಮಾಯಮ್ಮ ಎಂಬುವರ ಹೆಸರಿಗೆ ಪೌತಿ ಖಾತೆ ಮಾಡಿಕೊಡಬೇಕೆಂದು ಕಳೆದ ಮೇ 25ರಂದು ಮಳವಳ್ಳಿ ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಲಾಗಿತ್ತು.

ಈ ಅರ್ಜಿಯನ್ನು ಪರಿಶೀಲಿಸಿ ವರದಿ ನೀಡುವಂತೆ ಮಳವಳ್ಳಿ ತಾಲೂಕು ಕಚೇರಿಯಿಂದ ಅರ್ಜಿಯನ್ನು ಕಿರಗಸೂರು ವೃತ್ತದ ಗ್ರಾಮ ಲೆಕ್ಕಿಗ ಪ್ರವೀಣ್ ಅವರಿಗೆ ಕಳುಹಿಸಲಾಗಿತ್ತು. ಈ ಗ್ರಾಮ ಲೆಕ್ಕಿಗರು ಕಚೇರಿಯಲ್ಲೇ ಕುಳಿತು ವರದಿ ತಯಾರಿಸಿ ಕಳುಹಿಸದೇ ಪ್ರಾಮಾಣಿಕತೆಯಿಂದ ಮಲ್ಲಿಕ್ಯಾತನಹಳ್ಳಿ ಗ್ರಾಮಕ್ಕೆ ತೆರಳಿ ಗಿರೀಶ್ ರಾಜ್ ಬಗ್ಗೆ ಗ್ರಾಮಸ್ಥರಲ್ಲಿ ವಿಚಾರಿಸಿದ್ದಾರೆ. ಗಿರೀಶ್ ರಾಜ್ ಸತ್ತಿಲ್ಲ, ಜೀವಂತವಿದ್ದಾರೆ ಎಂದು ಗ್ರಾಮಸ್ಥರು ತಿಳಿಸಲಾಗಿ ಗ್ರಾಮ ಲೆಕ್ಕಿಗ ಪ್ರವೀಣ್ ನೇರವಾಗಿ ಗಿರೀಶ್ ರಾಜ್ ಅವರನ್ನೇ ಸಂಪರ್ಕಿಸಿದ್ದಾರೆ.

ಈ ವೇಳೆ ಗಿರೀಶ್ ರಾಜ್, ಕೆಲವರು ತನ್ನ ಹಾಗೂ ಪತ್ನಿ ಸೌಭಾಗ್ಯ ಅವರ ಡೆತ್ ಸರ್ಟಿಫಿಕೇಟ್ ಅನ್ನು ತಿ.ನರಸೀಪುರ ತಾಲೂಕು ಕಚೇರಿಯಿಂದ ಪಡೆದಿದ್ದು, ತಮ್ಮ ಜಮೀನನ್ನು ಕಬಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅಳಲು ತೋಡಿಕೊಂಡಿದ್ದಾರೆ. ವಿಶೇಷವೆಂದರೆ ಗಿರೀಶ್ ರಾಜ್ ಈ ವಿಚಾರವನ್ನು ಗ್ರಾಮ ಲೆಕ್ಕಿಗರಿಗೆ ಲಿಖಿತವಾಗಿ ನೀಡಿಲ್ಲ.

ಆದರೂ ಗ್ರಾಮ ಲೆಕ್ಕಿಗ ಪ್ರವೀಣ್ ಅವರು ಪೌತಿ ಖಾತೆ ಬದಲಾವಣೆಗಾಗಿ ನಕಲಿ ದಾಖಲೆಗಳನ್ನು ನೀಡಲಾಗಿದೆ. ಜಮೀನು ಮಾಲೀಕ ಪ್ರಕಾಶ್ ರಾಜ್ ಜೀವಂತವಿದ್ದಾರೆ. ಅವರಿಗೆ ಮಾಯಮ್ಮ ಎಂಬ ಪುತ್ರಿ ಇಲ್ಲ. ಹೀಗಾಗಿ ಈ ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ ಎಂದು ತಹಶೀಲ್ದಾರ್‌ರಿಗೆ ವರದಿ ಸಲ್ಲಿಸಿದ್ದಾರೆ. ವರದಿಯನ್ನು ನೋಡಿದ ತಹಶೀಲ್ದಾರರು ನೀಡಿದ ಮೌಖಿಕ ಆದೇಶದ ಮೇರೆಗೆ ಗ್ರಾಮ ಲೆಕ್ಕಿಗ ಪ್ರವೀಣ್ ಪೌತಿ ಖಾತೆಗೆ ಅರ್ಜಿ ಸಲ್ಲಿಸಿದ್ದ ಮಾಯಮ್ಮ ಎಂಬಾಕೆಯ ವಿರುದ್ಧ ಜು.4ರಂದು ಮಳವಳ್ಳಿ ಟೌನ್ ಠಾಣೆಗೆ ದೂರು ಸಲ್ಲಿಸಿದ್ದಾರೆ. ಭಾರತೀಯ ದಂಡ ಸಂಹಿತೆ 420, 468, 471, 34ರಡಿ ಪ್ರಕರಣ ದಾಖಲಿಸಿಕೊಂಡ ಮಳವಳ್ಳಿ ಟೌನ್ ಠಾಣೆ ಇನ್ಸ್‌ಪೆಕ್ಟರ್ ರಾಜೇಶ್ ಅವರು ಡಿವೈಎಸ್‌ಪಿ ನವೀನ್ ಕುಮಾರ್ ಮಾರ್ಗದರ್ಶನದಲ್ಲಿ ಐವರನ್ನು ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಮಾಯಮ್ಮ ಎಂಬಾಕೆ 80 ವರ್ಷದ ವೃದ್ಧೆಯಾಗಿದ್ದು ಆಕೆಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಅರಿವಿಲ್ಲ. ಆಕೆಯ ಆಧಾರ್ ಕಾರ್ಡ್ ಪಡೆದಿದ್ದ ವಂಚಕರು ಬೆಂಗಳೂರಿನ ವಿಳಾಸದೊಂದಿಗೆ ಮಾಯಮ್ಮ ಪ್ರಕಾಶ್ ರಾಜ್ ಅವರ ಪುತ್ರಿ ಎಂಬಂತೆ ನಕಲಿ ದಾಖಲೆ ಸೃಷ್ಟಿಸುವುದರ ಜೊತೆಗೆ ಡೆತ್ ಸರ್ಟಿಫಿಕೇಟ್ ಅನ್ನೂ ಕೂಡ ನಕಲಿಯಾಗಿ ತಯಾರಿಸಿ ಆಕೆಯ ಹೆಸರಲ್ಲೇ ಪೌತಿ ಖಾತೆಗಾಗಿ ಅರ್ಜಿ ಸಲ್ಲಿಸಿದ್ದಾರೆ ಎಂಬುದು ವಿಚಾರಣೆಯಿಂದ ತಿಳಿದು ಬಂದಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ. ಇದೀಗ ನಕಲಿ ಡೆತ್ ಸರ್ಟಿಫಿಕೇಟ್‌ಗೆ ಸಂಬಂಧಪಟ್ಟ ಕೆಲವರು ಮಾತ್ರ ಬಂಧಿತರಾಗಿದ್ದು, ನಕಲಿ ಆಧಾರ್ ಕಾರ್ಡ್ ಸೃಷ್ಟಿಗೆ ಸಂಬಂಧಿಸಿದಂತೆ ಕೆಲವರನ್ನು ಬಂಧಿಸಬೇಕಾಗಿದೆ ಎಂದು ಮೂಲಗಳು ತಿಳಿಸಿವೆ.

ಮಾಜಿ ಸೈನಿಕರಿಂದ ಕಾರ್ಗಿಲ್ ವಿಜಯೋತ್ಸವ



ಕೆ.ಆರ್.ಪೇಟೆಯಲ್ಲಿ ನಡೆದ ಕಾರ್ಗಿಲ್ ವಿಜಯೋತ್ಸವದಲ್ಲಿ ಮಾಜಿ ಸೈನಿಕರನ್ನು ಸನ್ಮಾನಿಸಲಾಯಿತು.

ಕೆ.ಆರ್.ಪೇಟೆ, ಜು.26– ದೇಶ ಕಾಯುತ್ತಿರುವ ಯೋಧರು ಹಾಗೂ ಬೆವರು ಹರಿಸಿ ದುಡಿಯುತ್ತಿರುವ ರೈತರ ಕಾಯಕ ಎಲ್ಲರಿಗೂ ಮಾದರಿಯಾಗಿದೆ ಎಂದು ತಹಸೀಲ್ದಾರ್ ನಿಸರ್ಗಪ್ರಿಯ ಹೇಳಿದರು.

ಕೆ.ಆರ್.ಪೇಟೆ ಪಟ್ಟಣದ ಹೊರವಲಯದ ಹೇಮಗಿರಿ ರಸ್ತೆಯಲ್ಲಿರುವ ಮಾತೃಭೂಮಿ ವೃದ್ಧಾಶ್ರಮದಲ್ಲಿ ಮಾಜಿ ಯೋಧರು ಆಯೋಜಿಸಿದ್ದ ಕಾರ್ಗಿಲ್ ವಿಜಯೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ನಮ್ಮ ಭಾರತ ದೇಶದ ನೆಲವನ್ನು ವಶಪಡಿಸಿಕೊಂಡಿದ್ದ ಪಾಕಿಸ್ತಾನದ ಸೈನಿಕರನ್ನು ಭಾರತದ ವೀರ ಯೋಧರು ಹೊಡೆದೋಡಿಸಿ ನಮ್ಮ ನೆಲವನ್ನು ಮರಳಿ ಪಡೆದು ವಿಜಯವನ್ನು ಗಳಿಸಿದ ಈ ಶುಭದಿನವನ್ನು ಕಾರ್ಗಿಲ್ ವಿಜಯ ದಿವಸವನ್ನಾಗಿ ಆಚರಿಸಲಾಗುತ್ತಿದೆ. ಗಡಿಯಲ್ಲಿ ನಿಂತು ಚಳಿ, ಮಳೆ, ಬಿಸಿಲೆನ್ನದೇ ದಿನದ 24 ಗಂಟೆಗಳ ಕಾಲವೂ ಭಾರತ ದೇಶದ ಗಡಿಯನ್ನು ಸಂರಕ್ಷಣೆ ಮಾಡುವ ಕಾಯಕವನ್ನು ಬದ್ಧತೆಯಿಂದ ಮಾಡುತ್ತಿರುವ ನಮ್ಮ ಸೈನಿಕರ ನಿಸ್ವಾರ್ಥ ಸೇವೆ ಎಲ್ಲರಿಗೂ ಮಾದರಿಯಾಗಿದೆ ಎಂದರು.

ಕೆ.ಆರ್.ಪೇಟೆ ಪುರಸಭೆ ಅಧ್ಯಕ್ಷೆ ಮಹಾದೇವಿ ನಂಜುಂಡ ಅವರು ಮಾಜಿ ಸೈನಿಕರನ್ನು ಸನ್ಮಾನಿಸಿದರು. ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಜಗದೀಶ್, ಪಟ್ಟಣ ಠಾಣೆಯ ಇನ್ಸ್‌ಪೆಕ್ಟರ್ ಸುನಿಲ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕಿರಾಮು, ಟಿಎಪಿಸಿಎಂಎಸ್ ಮಾಜಿ ನಿರ್ದೇಶಕ ಲೋಕೇಶ್, ಕೆ.ಆರ್.ಪೇಟೆ ತಾಲೂಕು ನಯನಜ ಕ್ಷತ್ರಿಯ ಸಂಘದ ಅಧ್ಯಕ್ಷ ಕೆ.ಎಂ. ಶಿವಪ್ಪ, ಮಾತೃಭೂಮಿ ವೃದ್ಧಾಶ್ರಮದ ವ್ಯವಸ್ಥಾಪಕ ನಾಗಣ್ಣ, ಮಾಜಿ ಸೈನಿಕರಾದ ಕೆಆರ್. ಪೇಟೆ ಸುಕುಮಾರ್, ಪುರ ಲೋಕೇಶ್, ಕಿಕ್ಕೇರಿ ಬಿ.ಕೆ.ಲೋಕೇಶ್, ರಘು ಚಾರಿ, ವಳಗೆರೆಮೆಣಸ ಗಿರೀಶ್, ಪುರಸಭೆಯ ಮುಖ್ಯಾಧಿಕಾರಿ ಬಸವರಾಜು ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಾಗಮಂಗಲ ವರದಿ: ಇಲ್ಲಿನ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದಿಂದ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಯಿತು. ಬೆಳಗ್ಗೆ 11 ಗಂಟೆಗೆ ಮಾಜಿ ಸೈನಿಕರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭಾರತ ಮಾತೆಯ ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು. ದಾರಿಯುದ್ದಕ್ಕೂ ಭಾರತ ಮಾತೆಯ ಮತ್ತು ಹುತಾತ್ಮ ಸೈನಿಕರ ಪರ ಘೋಷಣೆಗಳನ್ನು ಕೂಗುತ್ತಿದ್ದರು. ನಂತರ ಮಿನಿ ವಿಧಾನಸೌಧದ ಮುಂದೆ ಯುದ್ಧದಲ್ಲಿ ಮಡಿದ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿ, ರಾಷ್ಟ್ರಗೀತೆ ಹಾಡಲಾಯಿತು. ಇದೇ ಸಮಯದಲ್ಲಿ 1971ರ ಯುದ್ಧದಲ್ಲಿ ಭಾಗವಹಿಸಿದ್ದ ಗಂಗಾಧರ್ ರವರ ಪತ್ನಿಯನ್ನು ಸನ್ಮಾನಿಸಲಾಯಿತು.

ಯೋಧ ಪ್ರಕಾಶ್ ಮಾತನಾಡಿ, 1999ರಲ್ಲಿ ನಡೆದ ಆ ಯುದ್ಧ ಅತಿ ಎತ್ತರದ, ಹತ್ತಲಾಗದ ಪ್ರದೇಶವನ್ನು ಅತಿಕ್ರಮಿಸಿಕೊಂಡಿದ್ದ ಪಾಕಿಗಳನ್ನು ಹೊಡೆದೋಡಿಸಲು ಸೈನಿಕರು ಪಟ್ಟ ಪರಿಶ್ರಮ ಅವಿಸ್ಮರಣೀಯ ಎಂದರು.

ವಿಜಯೋತ್ಸವದಲ್ಲಿ ಮಾಜಿ ಯೋಧರುಗಳಾದ ಮರೀಗೌಡ, ನಾರಾಯಣನ್ ಬಿ,ಚಂದ್ರಕುಮಾರ್, ವೆಂಕಟರಮಣನ್, ಕುಮಾರ್ ಗ್ರಾಮಾಂತರ ಠಾಣೆ ಸಬ್ ಇನ್ಸ್‌ಪೆಕ್ಟರ್ ರವಿಕುಮಾರ್, ಕಂದಾಯ ಇಲಾಖೆ ಮತ್ತು ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.


ನಾಗಮಂಗಲದಲ್ಲಿ ಮಾಜಿ ಸೈನಿಕರಿಂದ ಕಾರ್ಗಿಲ್ ವಿಜಯೋತ್ಸವ ಆಚರಿಸಲಾಯಿತು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಬುಧವಾರ	106.50 ಅಡಿ
ಒಳಹರಿವು	40917 ಕ್ಯುಸೆಕ್
ಹೊರಹರಿವು	5238 ಕ್ಯುಸೆಕ್

ಮಾದರಹಳ್ಳಿಯಲ್ಲಿ ಕಾಡಾನೆ ಹಿಂಡು ಪ್ರತ್ಯಕ್ಷ

ಭಾರತೀನಗರ, ಜು.26– ಕಳೆದ ಒಂದು ವಾರದಿಂದ ಮದ್ದೂರು ಹಾಗೂ ಮಳವಳ್ಳಿಯ ವಿವಿಧ ಕಡೆ ಪ್ರತ್ಯಕ್ಷವಾಗಿದ್ದ ಆನೆಗಳ ಹಿಂಡು ಇದೀಗ ಮಂಡ್ಯ ನಗರದಿಂದ ಕೇವಲ 10 ಕಿಲೋ ಮೀಟರ್ ದೂರದಲ್ಲಿರುವ ಮದ್ದೂರು ತಾಲೂಕಿನ ಮಾದರಹಳ್ಳಿ ಗ್ರಾಮದಲ್ಲಿ ಪ್ರತ್ಯಕ್ಷವಾಗಿದೆ. ಇದರಿಂದ ಜನ ಆತಂಕಗೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸತತ ಒಂದು ವಾರದಿಂದ ವಿವಿಧ ಗ್ರಾಮಗಳಲ್ಲಿ ಬೀಡುಬಿಟ್ಟಿರುವ ಆನೆಗಳ ಹಿಂಡು, ಮದ್ದೂರು ಹಾಗೂ ಮಳವಳ್ಳಿ ತಾಲೂಕಿನ ವಿವಿಧ ಗ್ರಾಮದಲ್ಲಿ ಬೆಳೆ ನಾಶ ಮಾಡಿತ್ತು. ಎಕರೆಗಟ್ಟಲೇ ಕಬ್ಬು ಸೇರಿ ವಿವಿಧ ಬೆಳೆ ನಾಶ ಮಾಡಿದ್ದ ಆನೆಗಳು ಇದೀಗ ಮದ್ದೂರು ತಾಲೂಕಿನ ಅಜ್ಜಹಳ್ಳಿ, ಯಲಾದಹಳ್ಳಿ, ಗುಳಘಟ್ಟ, ಮುಟ್ಟನಹಳ್ಳಿ ಹಾಗೂ ಮಾದರಹಳ್ಳಿ ಗ್ರಾಮದಲ್ಲಿ ಬೆಳೆ ನಾಶ ಮಾಡಿವೆ. ಒಂದು ಪುಟ್ಟ ಮರಿ ಆನೆ, ಸಲಗ ಸೇರಿ 9 ಆನೆಗಳ ಹಿಂಡು ಪ್ರತ್ಯಕ್ಷವಾಗಿದ್ದು, ಕಟಾವಿಗೆ ಬಂದಿದ್ದ ಕಬ್ಬು ಹಾಗೂ ತೆಂಗಿನ ಮರಗಳು ಆನೆ ದಾಳಿಗೆ ತುತ್ತಾಗಿವೆ.

ವಾರದಿಂದ ಆನೆಗಳನ್ನು ಕಾಡಿಗೆ ಓಡಿಸಲು ಅರಣ್ಯ ಇಲಾಖೆ ಸಿಬ್ಬಂದಿಗಳು ಹರಸಾಹಸ ಪಡುತ್ತಿದ್ದು, ಆನೆಗಳ ನೋಡಲು ವಿವಿಧ ಹಳ್ಳಿಗಳಿಂದ ಆಗಮಿಸುತ್ತಿದ್ದು, ಇದು ಸಹ ಕಾರ್ಯಾಚರಣೆಗೆ ಸಮಸ್ಯೆಯಾಗಿದೆ.



ಇದರ ಜೊತೆಗೆ ತಕ್ಷಣವೇ ಸರ್ಕಾರ ರೈತರ ಬೆಳೆ ಹಾನಿಗೆ ಪರಿಹಾರ ನೀಡಬೇಕು. ಆನೆಗಳನ್ನು ಕಾಡಿಗೆ ಓಡಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ರೈತರ ಬೆಳೆಗೆ ನೀರು ಹರಿಸಲು ಒತ್ತಾಯ

ಮಂಡ್ಯ, ಜು.26– ಕೆಆರ್‌ಎಸ್ ಒಳಹರಿವು ಹೆಚ್ಚಾಗಿ ಅಣೆಕಟ್ಟೆಯ ನೀರಿನ ಮಟ್ಟ 106 ಅಡಿಗೆ ತಲುಪಿದೆ. ಇದೇ ಪ್ರಮಾಣದಲ್ಲಿ ನೀರು ಹರಿದು ಬಂದರೆ ಇನ್ನು ಒಂದು ದಿನದಲ್ಲಿ ನೀರಿನ ಮಟ್ಟ 110 ಅಡಿಗೆ ತಲುಪಲಿದೆ. ಹಾಗಾಗಿ ರೈತರು ಬೆಳೆ ಬೆಳೆಯಲು ಕೂಡಲೇ ನೀರು ಹರಿಸುವುದನ್ನು ಮುಂದುವರೆಸಬೇಕೆಂದು ರೈತಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ಒತ್ತಾಯಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮಂಡ್ಯ ಜಿಲ್ಲೆಯ ಎಲ್ಲಾ ಶಾಸಕರು ಕೂಡಲೇ ನೀರಾವರಿ ಸಲಹೆ ಸಮಿತಿ ಸಭೆ ಕರೆದು ಹೈನು ಬೆಳೆಗೆ ನೀರು ಹರಿಸಲು ತೀರ್ಮಾನ ಕೈಗೊಳ್ಳಬೇಕು. ಅಲ್ಲದೇ ಸರ್ಕಾರದ ವತಿಯಿಂದ ಉತ್ತಮ ಬಿತ್ತನೆ ಬೀಜ ಹಾಗೂ ರಸಗೊಬ್ಬರವನ್ನು ರಿಯಾಯಿತಿ ದರದಲ್ಲಿ ಪೂರೈಕೆ ಮಾಡಬೇಕೆಂದು ಮಂಡ್ಯದಲ್ಲಿ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ಖಂಡಿಸಿ ಜು.31ರಂದು ಬೆಳಗ್ಗೆ 11 ಗಂಟೆಗೆ ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿ ಎದುರು ರೈತರ ಪ್ರತಿಭಟನಾ ಸಭೆ ನಡೆಸಲಾಗುವುದೆಂದು ಕೆಂಪೂಗೌಡ ತಿಳಿಸಿದರು.

ಟನ್ ಕಬ್ಬಿಗೆ 4500 ರೂ.ಗಳನ್ನು ನಿಗದಿಪಡಿಸಬೇಕು ಹಾಗೂ ರಂಗರಾಜನ್ ವರದಿಯಂತೆ ಉಪ ಉತ್ಪನ್ನಗಳ ಮೇಲಿನ ಲಾಭಾಂಶದಲ್ಲಿ ಕಬ್ಬು ಬೆಳೆಗಾರರಿಗೆ ಶೇ.70ರಷ್ಟು ಲಾಭಾಂಶ ನೀಡಬೇಕೆಂದು ಒತ್ತಾಯಿಸಲಾಗುವುದು ಎಂದರು. ಗೋಷ್ಠಿಯಲ್ಲಿ ರೈತ ಮುಖಂಡರಾದ ಲಿಂಗಾಪ್ಪಾಜಿ, ವಿಜಯ್ ಕುಮಾರ್, ರವಿ ಕುಮಾರ್, ರಘು, ಮಂಜು, ಪ್ರಕಾಶ್, ಬಾಲಕೃಷ್ಣ ಹಾಗೂ ರಾಣಿ ಉಪಸ್ಥಿತರಿದ್ದರು.

ಸರೋಜಮ್ಮ ನಿಧನ

ಭಾರತೀನಗರ, ಜು.26– ಮನ್‌ಮುಲ್ ಮಾಜಿ ನಿರ್ದೇಶಕ ಎ.ಸಿ.ಸತೀಶ್ ಅವರ ತಾಯಿ ಸರೋಜಮ್ಮ (70) ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮ ಅಣ್ಣೂರು ರುದ್ರಭೂಮಿಯಲ್ಲಿ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೃತರ ನಿಧನಕ್ಕೆ ವಿಧಾನಪರಿಷತ್ ಸದಸ್ಯ ಮಧು ಜಿ ಮಾದೇಗೌಡ, ಭಾರತೀ ಎಜುಕೇಷನ್ ಟ್ರಸ್ಟ್‌ನ ಸಿಇಓ ಆಶಯ್ ಮಧು, ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಮನ್‌ಮುಲ್ ಮಾಜಿ ಅಧ್ಯಕ್ಷ ಬಸವೇಗೌಡ ಸೇರಿದಂತೆ ಹಲವು ಅಂತಿಮ ದರ್ಶನ ಪಡೆದು, ಸಂತಾಪ ಸೂಚಿಸಿದ್ದಾರೆ.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದ ಆಶ್ರಮ ಶಾಲೆಯಲ್ಲಿ ಆರೋಗ್ಯ ತಪಾಸಣೆ



ಮೈಸೂರು,ಜು.26(ಎಂಟಿವೈ)– ಬುಡಕಟ್ಟು ಸಮುದಾಯ ಮಕ್ಕಳ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಕಾರ್ಯಕ್ರಮ ರೂಪಿಸಿದ್ದು, ಹುಣಸೂರು ತಾಲೂಕಿನ ನೆಲ್ಲೂರು ಪಾಲ ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಯಿತು.

ನವದೆಹಲಿಯ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ಸಹಯೋಗದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಆಶ್ರಮ ಶಾಲೆಯ ಮಕ್ಕಳಿಗೆ ಸಾಮಾನ್ಯ (ಜನರಲ್ ಚೆಕ್‌ಅಪ್) ತಪಾಸಣೆ, ದಂತ ಚಿಕಿತ್ಸೆ, ಕಿವಿ, ಮೂಗು, ಗಂಟಲು, ವಾಕ್ ಮತ್ತು ಶ್ರವಣ ಪರೀಕ್ಷೆ, ನೇತ್ರ ತಪಾಸಣೆ, ರಕ್ತ ಪರೀಕ್ಷೆ ಹಾಗೂ ಇನ್ನಿತರ ಪರೀಕ್ಷೆ ನಡೆಸಲಾಯಿತು. ಇದೇ ವೇಳೆ ಅಪೌಷ್ಟಿಕತೆಯಿಂದ ಬಳಲುತ್ತಿರುವ ಜೇನುಕುರುಬ, ಡೊಂಗ್ರಿ, ಗೆರೇಷಿಯಾ, ಹಕ್ಕಿಪಿಕ್ಕಿ, ಸೋಲಿಗ ಸೇರಿದಂತೆ ವಿವಿಧ ಬುಡಕಟ್ಟು ಸಮುದಾಯದ 200ಕ್ಕೂ ವಿದ್ಯಾರ್ಥಿಗಳಿಗೆ 30 ಜನರ ವೈದ್ಯರ ತಂಡ ಆರೋಗ್ಯ ತಪಾಸಣೆ ನಡೆಸಿ ಉಚಿತವಾಗಿ ಔಷಧಿಯನ್ನು ವಿತರಿಸಲಾಯಿತು. ಅಗತ್ಯ ಬಿದ್ದವರಿಗೆ ಹೆಚ್ಚಿನ ಚಿಕಿತ್ಸೆಯನ್ನೂ ನೀಡಲಾಗಿದೆ.

ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಎಲ್.ಶ್ರೀನಿವಾಸ್ ಮಾತನಾಡಿ, ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಈ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಗುತ್ತಿದೆ. ರಾಜ್ಯದಲ್ಲಿರುವ ಎಲ್ಲಾ ಆಶ್ರಮ ಶಾಲೆಗಳ ಮಕ್ಕಳಿಗೆ ಹಾಗೂ ಹಾಡಿ ಜನರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಕಾಯ್ದೆ, ಶಿಕ್ಷಣ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್, ತಾಲೂಕು ಕಲ್ಯಾಣಾಧಿಕಾರಿ ಹೆಚ್.ಸಿ. ಬಸವರಾಜು, ಎಂ. ನಾರಾಯಣಸ್ವಾಮಿ, ಮುಖ್ಯ ಶಿಕ್ಷಕ ಚೇತನ್‌ಕುಮಾರ್, ಸಮುದಾಯ ಆರೋಗ್ಯಾಧಿಕಾರಿ ಡಾ.ರವೀಶ್, ಬಿ.ಗಣಿ, ಜೆಎಸ್‌ಎಸ್ ಆಸ್ಪತ್ರೆಯ ಮಕ್ಕಳ ದಂತ ವೈದ್ಯರಾದ ಡಾ.ಇಂದಿರಾ, ಡಾ.ಸುಷ್ಮಾ, ಮಕ್ಕಳ ತಜ್ಞರಾದ ಡಾ.ಪ್ರಶಾಂತ್, ಡಾ.ಚೇತಕ್, ಡಾ.ಸುನಿತಾಸಿಂಗ್, ವಾಕ್ ಮತ್ತು ಶ್ರವಣ ಸಂಸ್ಥೆಯ ಡಾ.ಅರುಣ್‌ರಾಜ್, ಡಾ. ಮಹಾದೇವಪ್ಪ, ನಾಗರಾಜ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಎಸ್‌ಸಿಪಿ, ಟಿಎಸ್‌ಪಿ ಅನುದಾನ ಪರಿಶಿಷ್ಟ ಜಾತಿ, ಪಂಗಡದ ಏಳಿಗೆಗೆ ಮಾತ್ರ ಬಳಸಿ

ಅಧಿಕಾರಿಗಳಿಗೆ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ



ಬೆಂಗಳೂರು, ಜು.26(ಎಂಕೆ)– ಎಸ್‌ಸಿಪಿ/ಟಿಎಸ್‌ಪಿ(SCP/ TSP) ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸದೇ ಕೇವಲ ಪರಿಶಿಷ್ಟ ಜಾತಿ ಮತ್ತು ಪಂಗಡದ ಏಳಿಗೆಗೆ ಮಾತ್ರ ಬಳಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಎಸ್‌ಸಿಪಿ/ಟಿಎಸ್‌ಪಿ ಅನುದಾನ ಹಂಚಿಕೆ ಕುರಿತು ವಿಕಾಸಸೌಧದಲ್ಲಿ ಬುಧವಾರ ನೋಡಲ್ ಅಧಿಕಾರಿಗಳ ಸಭೆ ನಡೆಸಿದ ಸಚಿವರು, ಅನುದಾನ ಬಳಕೆ, ಪ್ರಗತಿ ಕುರಿತು ಚರ್ಚಿಸಿದರು. ಸಭೆಯ ಆರಂಭದಲ್ಲೇ 7ಡಿ ಅನ್ನು ರದ್ದುಪಡಿಸಿರುವ ಸಂಗತಿಯನ್ನು ಎಲ್ಲಾ ಅಧಿಕಾರಿಗಳೂ ಗಮನದಲ್ಲಿ ಇಟ್ಟುಕೊಳ್ಳಬೇಕು. ಇಲಾಖಾವಾರು ಎಸ್‌ಸಿಪಿ/ಟಿಎಸ್‌ಪಿ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸದೇ ಕೇವಲ ಪರಿಶಿಷ್ಟ ಜಾತಿ ಮತ್ತು ಪಂಗಡದ ಏಳಿಗೆಗೆ ಮಾತ್ರ ಬಳಸಬೇಕು ಎಂದು ತಿಳಿಸಿದರು.

ಜಲಜೀವನ್ ಮಿಷನ್‌ನಲ್ಲಿ ಸಾಮಾನ್ಯವಾಗಿ ಕೇಂದ್ರ ಸರ್ಕಾರದ ಶೇ.50 ರಷ್ಟು ಮತ್ತು ರಾಜ್ಯ ಸರ್ಕಾರದ ಶೇ.50 ರಷ್ಟು ಹಣ ಇರಲಿದೆ. ಈ ಪೈಕಿ ರಾಜ್ಯದ ಹಣದ ಪಾಲು ಹೆಚ್ಚಾಗಿದ್ದು, ಜನವರಿ ವೇಳೆಗೆ ಕೇಂದ್ರದಿಂದ ಅಗತ್ಯ ಅನುದಾನ ಪಡೆಯಬೇಕು. ಇಲ್ಲವಾದಲ್ಲಿ ಹೆಚ್ಚುವರಿಯಾಗಿ ನೀಡಲಾಗುತ್ತಿರುವ ಹಣವನ್ನು ಹಿಂಪಡೆಯಲಾಗುವುದು ಎಂದು ಎಂದರು.

ಮೂಲ ಸೌಕರ್ಯಗಳಾದ ರಸ್ತೆಗಳ ವಿಷಯದಲ್ಲಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಅದರ ಗುಣಮಟ್ಟದ ಅವಧಿ 50 ವರ್ಷ ಇರಬೇಕು. ಹಾಗಿದ್ದಾಗ ಮಾತ್ರ ಪದೇ ಪದೆ ರಸ್ತೆಗಳ ಅಭಿವೃದ್ಧಿಗೆ ಅನುದಾನವನ್ನು ಬಳಸುವುದು ತಪ್ಪುತ್ತದೆ ಮತ್ತು ಆ ಅನುದಾನವನ್ನು ಇತರೆ ಕೆಲಸಗಳಿಗೆ ಬಳಸಬಹುದು ಎಂದು ಅಭಿಪ್ರಾಯಪಟ್ಟರು.

ನರೇಗಾ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಕಡ್ಡಾಯವಾಗಿ 100 ದಿನಗಳ ಕೆಲಸವನ್ನು ನೀಡಬೇಕು. ಆಗ ಮಾತ್ರವೇ ಅವರ ಬದುಕಲ್ಲಿ ಒಂದಷ್ಟು ಧನಾತ್ಮಕ ಬದಲಾವಣೆ ತರಬಹುದು. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಗಮನ ಹರಿಸಬೇಕು ಎಂದರು.

ಇದೇ ವೇಳೆ ಉನ್ನತ ಶಿಕ್ಷಣ ಇಲಾಖೆಯಲ್ಲಿ ಎಸ್‌ಸಿಪಿ/ಟಿಎಸ್‌ಪಿ ಕಾಯ್ದೆಯಡಿ ಬಳಸದೇ ಇರುವ ಅನುದಾನದ ಬಳಕೆಗೆ ಸೂಕ್ತ ಪ್ರಾಶಸ್ತ್ಯ ನೀಡಬೇಕು ಮತ್ತು ಹಾಸ್ಟೆಲ್, ಕಾಲೇಜುಗಳ ಮೂಲಸೌಕರ್ಯದ ಅಭಿವೃದ್ಧಿಗೆ ಒತ್ತು ನೀಡಿ ಶಿಕ್ಷಣ ಕ್ಷೇತ್ರವನ್ನು ಬಲಪಡಿಸಬೇಕು. ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳ ಶಾಲಾ ನೋಂದಣಿ ಪ್ರಮಾಣವು ನೆರೆಯ ರಾಜ್ಯಗಳಿಗಿಂತ ಕಡಿಮೆ ಇದ್ದು, ನೋಂದಣಿಯ ಪ್ರಮಾಣವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ ರಲ್ಲದೆ ಆರ್‌ಟಿಇ ಶಿಕ್ಷಣ ಕಾಯ್ದೆ ಅಡಿಯಲ್ಲಿ ಈಗ ಇರುವ 1 ರಿಂದ 8 ನೇ ತರಗತಿ ಶಿಕ್ಷಣದ ಪ್ರಮಾಣವನ್ನು 9 ರಿಂದ 10 ನೇ ತರಗತಿಗೆ ಏರಿಸಲು ಕ್ರಮ ಕೈಗೊ ಳ್ಳುವ ಬಗ್ಗೆ ಚರ್ಚಿಸಿದರು.

ಕೃಷಿ, ಸಾರಿಗೆ, ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಇನ್ನೂ ಹಲವು ಇಲಾಖೆಗಳಲ್ಲಿ ಆಗುತ್ತಿರುವ ಪ್ರಗತಿಯ ಮಟ್ಟವನ್ನು ಪರಿಶೀಲಿಸಿದ ಸಚಿವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅನುದಾನದ ಹಂಚಿಕೆಯು ಸಮರ್ಪಕವಾಗಿ ಬಳಕೆಯಾಗಬೇಕು. ಇಲ್ಲದೇ ಹೋದಲ್ಲಿ ಆ ಅನುದಾನವನ್ನು ಹಿಂಪಡೆಯಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಸರ್ಪ ಸಂಸ್ಕಾರ, ಆಶ್ಲೇಷ ಬಲಿ ಪೂಜೆ

ಮೈಸೂರು, ಜು.26– ಮೈಸೂರಿನ ದೇವರಾಜ ಮೊಹಲ್ಲಾದ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜು.29ನೇ ಶನಿವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ ಮತ್ತು ಕಾಲಸರ್ಪಶಾಂತಿ ಹಾಗೂ ಜು.30ರ ಭಾನುವಾರ ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ ಅಂಗವಾಗಿ ಹೋಮ ಮತ್ತು ಆಶ್ಲೇಷ ಬಲಿ ಪೂಜೆ, ಕಾಲಸರ್ಪಶಾಂತಿ ಪೂಜೆ ಏರ್ಪಡಿಸಲಾಗಿದೆ. ಮಾಹಿತಿಗಾಗಿ ಮೈ ಕುಮಾರ್, ಜಾತಕ ವಿಮರ್ಶಕರು ಇವರನ್ನು ಮೊ.98451–83392, 93421–83392 ಸಂಪರ್ಕಿಸಬಹುದು.


ಸೌಜನ್ಯ ಹತ್ಯೆಯ ಸಂಬಂಧ ಮರುತನಿಖೆ ನಡೆಸಿ ನಿಜವಾದ ಅಪರಾಧಿಗಳಿಗೆ ಕಠಿಣ ಶಿಕ್ಷೆಗೆ ಒತ್ತಾಯಿಸಿ ಮೈಸೂರಿನ ಒಡನಾಡಿ ಸಂಸ್ಥೆ ಸಹಯೋಗದಲ್ಲಿ ಬುಧವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಸಾಮಾಜಿಕ ಹೋರಾಟಗಾರ ಮಹೇಶ್‌ಶೆಟ್ಟಿ ತಿಮ್ಮರೋಡಿ, ಸೌಜನ್ಯ ಪೋಷಕರಾದ ಚಂದಪ್ಪ ಗೌಡ, ಕುಸುಮಾವತಿ, ಸಹೋದರಿ ಸೌಹಾರ್ದ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಹಾಗೂ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರಿಗೂ ಮನವಿ ಮಾಡಿದ್ದರು.

ಡಿಜೆ ಹಳ್ಳಿ–ಕೆಜಿ ಹಳ್ಳಿ ಸೇರಿ ಹಿಂಸಾಚಾರ ಪ್ರಕರಣಗಳ ಹಿಂಪಡೆಯಲು ಪರಮೇಶ್ವರ್ ಸೂಚನೆ; ಬಿಜೆಪಿ ಕಿಡಿ

ಬೆಂಗಳೂರು: ನಗರದ ಡಿಜೆ ಹಳ್ಳಿ, ಕೆಜಿ ಹಳ್ಳಿ, ಶಿವಮೊಗ್ಗ ಮತ್ತು ಹುಬ್ಬಳ್ಳಿ ಸೇರಿದಂತೆ ಇತರೆಡೆ ನಡೆದ ಪ್ರತಿಭಟನೆ ಮತ್ತು ಗಲಭೆಗಳಿಗೆ ಸಂಬಂಧಿಸಿದಂತೆ ಪ್ರಕರಣಗಳಡಿ ಬಂಧಿಸಲಾಗಿರುವ ಅಮಾಯಕ ಯುವಕರು ಮತ್ತು ವಿದ್ಯಾರ್ಥಿಗಳ ಮೇಲಿನ ಸುಳ್ಳು ಪ್ರಕರಣಗಳನ್ನು ಹಿಂಪಡೆಯುವಂತೆ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಮನವಿಯನ್ನು ಪರಿಶೀಲಿಸುವಂತೆ ಗೃಹ ಸಚಿವ ಡಾ. ಜಿ.ಪರಮೇಶ್ವರ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಸಚಿವ ಪರಮೇಶ್ವರ ಅವರು ಜುಲೈ 19ರಂದು ಪ್ರಧಾನ ಕಾರ್ಯದರ್ಶಿ ಕಾರಾಗೃಹಗಳು, ನಾಗರಿಕ ರಕ್ಷಣೆ ಮತ್ತು ಸಹಾಯಕ ಸೇವೆಗಳು (ಪಿಸಿಎಎಸ್), ಗೃಹ ಇಲಾಖೆಗೆ ಬರೆದ ಪತ್ರದಲ್ಲಿ ಶಾಸಕ ಮತ್ತು ಮಾಜಿ ಸಚಿವ ತನ್ವೀರ್ ಸೇಠ್ ಅವರ ಮನವಿ ಪತ್ರವನ್ನು ಉಲ್ಲೇಖಿಸಿದ್ದಾರೆ.

ಬೆಂಗಳೂರಿನ ಡಿ.ಜೆ. ಹಳ್ಳಿ ಹಾಗೂ ಕೆ.ಜಿ. ಹಳ್ಳಿ, ಶಿವಮೊಗ್ಗ, ಹುಬ್ಬಳ್ಳಿ ಮತ್ತಿತರ ಕಡೆ ನಡೆದ ಪ್ರತಿಭಟನೆ, ಗಲಭೆಗಳಿಗೆ ಸಂಬಂಧಿಸಿದಂತೆ ಅಮಾಯಕ ಯುವಕರು ಹಾಗೂ ವಿದ್ಯಾರ್ಥಿಗಳನ್ನು ಸುಳ್ಳು ಪ್ರಕರಣಗಳಡಿ ಬಂಧಿಸಲಾಗಿದ್ದು, ಪರಿಶೀಲನೆ ನಡೆಸಿ ನಿಯಮಾನುಸಾರ ಪ್ರಕರಣಗಳನ್ನು ಹಿಂಪಡೆಯುವಂತೆ ಮನವಿ ಮಾಡಲಾಗಿದೆ. ಈ ಸಂಬಂಧ ಪರಿಶೀಲಿಸಿದ ನಂತರ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದು ಗೃಹ ಸಚಿವರ ಪತ್ರದಲ್ಲಿ ತಿಳಿಸಲಾಗಿದೆ.

ಈ ಕುರಿತು ಪ್ರತಿಪಕ್ಷ ಬಿಜೆಪಿ ಕಟುವಾಗಿ ಪ್ರತಿಕ್ರಿಯಿಸಿದ್ದು, ರಾಜ್ಯದ ಕಾಂಗ್ರೆಸ್ ಸರ್ಕಾರವು ಒಂದು ಸಮುದಾಯದ ಕೋಮು ಅಪರಾಧಿಗಳಿಗೆ ಕ್ಲೀನ್ ಚಿಟ್ ನೀಡುವ ಮೂಲಕ, ಜಿಹಾದಿಗಳು ಮತ್ತು ಪಿಎಫ್‌ಐ ಭಯೋತ್ಪಾದಕರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ ಎಂದು ಆರೋಪಿಸಿದೆ. ಒಂದು ಕೋಮಿನ ಕಮ್ಯುನಲ್ ಅಪರಾಧಿಗಳಿಗೆ ನಮ್ಮಲ್ಲಿ ಕ್ಲೀನ್ ಚಿಟ್ ನೀಡಲಾಗುವುದು ಎಂದು ಬೋರ್ಡ್ ಹಾಕಿಕೊಂಡು ಪರಮೇಶ್ವರ ಅವರು ಕಾರ್ಯನಿರ್ವಹಿಸುತ್ತಿರುವಂತಿದೆ. ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇರೊಂದಿದೆಯೇ. ಈ ಸರ್ಕಾರ ಜಿಹಾದಿಗಳ, ಪಿಎಫ್‌ಐ ಭಯೋತ್ಪಾದಕರ ತಾಳಕ್ಕೆ ಕುಣಿಯುತ್ತಿರುವುದನ್ನು ಈ ಪತ್ರ ರುಜುವಾತು ಮಾಡಿದೆ. ಜಿಹಾದಿ ಸರ್ಕಾರದ ಎಲ್ಲಾ ಬಗೆಯ ಹಿಂದೂ ವಿರೋಧಿ ನೀತಿ–ನಿಲುವುಗಳ ವಿರುದ್ಧ ಬಿಜೆಪಿ ಹೋರಾಟ ಮುಂದುವರೆಸಲಿದೆ ಎಂದು ರಾಜ್ಯ ಬಿಜೆಪಿ ಟ್ವೀಟ್ ಮಾಡಿದೆ.

> ಡಿಜೆ ಹಳ್ಳಿ, ಕೆಜಿ ಹಳ್ಳಿ ಪ್ರಕರಣ ಬಹಳ ಗಂಭೀರವಾಗಿದೆ. ಈ ಪ್ರಕರಣದಲ್ಲಿ ಪೊಲೀಸ್ ಠಾಣೆ, ಪೊಲೀಸ್ ವಾಹನಗಳು, ಕಾಂಗ್ರೆಸ್ ಶಾಸಕನ ಮನೆ ಸುಟ್ಟಿದ್ದಾರೆ. ಇದು ರಾಜ್ಯ ಸರ್ಕಾರದ ವಿರುದ್ಧದ ದಂಗೆಯಾಗಿದೆ. ರಾಜ್ಯದ ಮೇಲೆ ದಂಗೆ ಎದ್ದರೂ ಕೂಡ ಅವರ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆಯಲು ತೀರ್ಮಾನ ಮಾಡಿದ್ದಾರೆ ಎಂದರೆ ರಾಜ್ಯದ ವಿರುದ್ಧ ಏನೇ ಮಾಡಿದರೂ ರಕ್ಷಣೆ ದೊರೆಯುತ್ತದೆ ಎನ್ನುವುದು ಅಪರಾಧಿಗಳಿಗೆ ಧೈರ್ಯ ಬರುತ್ತದೆ.
>
> – ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ



6.05 ಲಕ್ಷ ಹಣವಿದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾದ ಖದೀಮರು

ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಘಟನೆ

ಮೈಸೂರು, ಜು.26(ಎಂಕೆ)– ಬ್ಯಾಂಕ್‌ಗೆ ಹಣ ಕಟ್ಟಲು ಬಂದಿದ್ದ ವ್ಯಕ್ತಿಯೊಬ್ಬರಿಂದ 6 ಲಕ್ಷದ 5 ಸಾವಿರ ರೂ. ದುಷ್ಕರ್ಮಿಗಳು ಕಸಿದುಕೊಂಡು ಪರಾರಿಯಾದ ಘಟನೆ ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಬುಧವಾರ ನಡೆದಿದೆ.

ಇಲ್ಲಿನ ನಿವಾಸಿ ತುಳಸಿದಾಸ್ ಎಂಬುವರು ಬೆಳಗ್ಗೆ 10.30ರ ಸುಮಾರಿಗೆ ಸಿಪೆಟ್ ಕಾಲೇಜು ಸಮೀಪದಲ್ಲಿರುವ ಎಸ್‌ಬಿಐ ಬ್ಯಾಂಕ್‌ಗೆ ಹಣ ಕಟ್ಟಲು ಬಂದಿದ್ದಾರೆ. ಈ ವೇಳೆ ಬೈಕ್‌ನಲ್ಲಿ ಬಂದ ಖದೀಮರಿಬ್ಬರು ಅವರ ಕೈಯಲ್ಲಿದ್ದ ಹಣದ ಬ್ಯಾಗ್ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿದ್ದಶೆಟ್ಟಿ ನಿಧನ

ಮೈಸೂರು, ಜು.26– ಮೈಸೂರಿನ ಕುವೆಂಪುನಗರ ನಿವಾಸಿ, ಪುರಸಭೆ ನಿವೃತ್ತ ಮುಖ್ಯಾಧಿಕಾರಿ ಸಿದ್ದಶೆಟ್ಟಿ (88) ಬುಧವಾರ ರಾತ್ರಿ ನಿಧನರಾದರು.



ಮೃತರು ಪತ್ನಿ ಗೌರಮ್ಮ ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಜು.27) ಮಧ್ಯಾಹ್ನ ಗದ್ದಿಗೆ ರಸ್ತೆಯಲ್ಲಿರುವ ಸಾಹುಕಾರ್ ಹುಂಡಿಯ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೂಲತಃ ಕೆ.ಆರ್.ನಗರದವರಾದ ಇವರು, ಮೈಸೂರಿನಲ್ಲಿ ವಾಸವಾಗಿದ್ದರು. ಹುಣಸೂರು, ಬನ್ನೂರು, ಗುಂಡ್ಲುಪೇಟೆ, ಮಳವಳ್ಳಿ ಮುಂತಾದ ಸ್ಥಳೀಯ ಸಂಸ್ಥೆಗಳಲ್ಲಿ ಮುಖ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

ಮೈಸೂರು ಮಿತ್ರ ಗುರುವಾರ 27 ಜುಲೈ 2023

ಬಿಳಿಗೆರೆ ಗ್ರಾಪಂ ಅಧ್ಯಕ್ಷರಾಗಿ ಪಿ.ಕುಮಾರ್, ಉಪಾಧ್ಯಕ್ಷರಾಗಿ ಕುಪ್ಪರವಳ್ಳಿ ವಸಂತ ಆಯ್ಕೆ



ಸುತ್ತೂರು, ಜು.26– ನಂಜನಗೂಡು ತಾಲೂಕು ವರುಣಾ ಕ್ಷೇತ್ರದ ಬಿಳಿಗೆರೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಕನಕನಗರ ಗ್ರಾಮದ ಪಿ ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಕುಪ್ಪರವಳ್ಳಿ ವಸಂತ ಅವಿರೋಧವಾಗಿ ಆಯ್ಕೆಯಾದರು.

ಚುನಾವಣೆ ಅಧಿಕಾರಿಯಾಗಿ ಅಶೋಕ್ ಕಾರ್ಯನಿರ್ವಹಿಸಿದರು. ಪಿಡಿಒ ಗಣೇಶ್, ಪುಟ್ಟರಾಜು, ಬಿಳಿಗೆರೆ ಬುಂಡಪ್ಪ, ಜಯಶೀಲ, ನಂಜುಂಡೇಗೌಡ, ಮಾರೇಗೌಡ, ಸಿದ್ದರಾಜು, ಮುನಿಯಪ್ಪ, ರತ್ನ, ಶೇಖರ್, ಚಂದ್ರಶೇಖರ್, ಕಲ್ಮಳ್ಳಿ ಲಿಂಗಣ್ಣ, ಪಂಚಾಯತಿ ಸದಸ್ಯರು ಹಾಜರಿದ್ದರು.

ಶೇಷಾದ್ರಿಪುರಂ ಕಾಲೇಜಿನಲ್ಲಿ 24ನೇ ಕಾರ್ಗಿಲ್ ವಿಜಯ ದಿನಾಚರಣೆ



ಮೈಸೂರು, ಜು. 26–ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನ ರಾಷ್ಟ್ರೀಯ ರಕ್ಷಣಾ ದಳ, ಆಂತರಿಕ ಗುಣಮಟ್ಟ ಭರವಸೆ ಕೋಶ, ರಾಷ್ಟ್ರೀಯ ಸೇವಾ ಯೋಜನೆ ಘಟಕದ ಸಂಯುಕ್ತಾಶ್ರಯದಲ್ಲಿ ಕಾಲೇಜಿನ ಸಭಾಂಗಣದಲ್ಲಿ 24ನೇ ಕಾರ್ಗಿಲ್ ವಿಜಯೋತ್ಸವದ ಸ್ಮರಣಾರ್ಥ ಕಾರ್ಗಿಲ್ ವಿಜಯ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪ್ರೊ.ಕೆ.ಸೌಮ್ಯ ಈರಪ್ಪ ಮತ್ತು ಕೇರ್ ಟೇಕರ್ ಅಧಿಕಾರಿ ಗುರುಮೂರ್ತಿ ಭಟ್, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಡಾ.ಆರ್.ರಾಘವೇಂದ್ರ ಕಾರ್ಗಿಲ್ ಯುದ್ಧದಲ್ಲಿ ತಮ್ಮ ಬಲಿದಾನವನ್ನು ನೀಡಿ ರಾಷ್ಟ್ರ ರಕ್ಷಣೆಯ ಕಾರ್ಯದಲ್ಲಿ ತೊಡಗಿ ದೇಶಕ್ಕೆ ಜಯ ತಂದುಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿ ಹುತಾತ್ಮರಾದ ವೀರಯೋಧರ ಚಿತ್ರಪಟಗಳಿಗೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸೌಮ್ಯ ಈರಪ್ಪ ಮಾತನಾಡಿ, ಸಾಮಾನ್ಯ ಮನುಷ್ಯ ಮರಣಿಸಿದಂದೇ ಸಾಯುತ್ತಾನೆ. ಆದರೆ ಪ್ರತಿ ಸೈನಿಕರು ಕಾಲವಾದ ನಂತರವೂ ಜೀವಿಸಿರುತ್ತಾರೆ. ಇದು ಹೆಮ್ಮೆಯ ವಿಚಾರ. ನಾವು ಅಂದು ನಡೆದ ಯುದ್ಧವನ್ನು ಒಂದು ಯುದ್ಧ ನಡೆಯಿತು ಅಷ್ಟೆ ಎಂದುಕೊಳ್ಳದೆ, ಇಂದಿನ ದಿನ ಆ ಸಂದರ್ಭದಲ್ಲಿ ಹುತಾತ್ಮರಾದ ಕ್ಯಾಪ್ಟನ್ ಭಾತ್ರ, ನಾಯಕ್ ಸುಬೇದಾರ್ ಯೋಗೇಂದ್ರ ಸಿಂಗ್ ಯಾದವ್ ಮುಂತಾದವರ ಶೌರ್ಯ ಮತ್ತು ಬಲಿದಾನವನ್ನು ತಿಳಿದುಕೊಳ್ಳಬೇಕು. ಇಂದು ವೀರನಾರಿಯರಾದ ಯೋಧರ ಪತ್ನಿಯರು ದೆಹಲಿಯಿಂದ ಕಾರ್ಗಿಲ್‌ವರೆಗೆ ಬೈಕ್ ರ್‍ಯಾಲಿ ನಡೆಸುವ ಮೂಲಕ ವಿಶಿಷ್ಟವಾಗಿ ಕಾರ್ಗಿಲ್ ವಿಜಯ ದಿನವನ್ನು ಆಚರಿಸಿ ಗೌರವ ಸಲ್ಲಿಸುತ್ತಿದ್ದಾರೆ. ಅಂತೆಯೇ ವಿಭಿನ್ನ ರೀತಿಯಲ್ಲಿ ಈ ದಿನವನ್ನು ಆಚರಿಸುವ ಮೂಲಕ ನಮ್ಮ ದೇಶಭಕ್ತಿಯನ್ನು ಮೆರೆಯಬೇಕು ಎಂದು ಹೇಳಿ 1999ರಲ್ಲಿ ನಡೆದ ಕಾರ್ಗಿಲ್ ಯುದ್ಧದ ಕೆಲವು ಘಟನೆಗಳನ್ನು ಸ್ಮರಿಸಿದರು.



ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜಿನ ಎನ್.ಸಿ.ಸಿ ಘಟಕ, ಎನ್.ಎಸ್.ಎಸ್., ರೆಡ್‌ಕ್ರಾಸ್ ಹಾಗೂ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕಗಳ ಸಹಯೋಗದಲ್ಲಿ ಕಾರ್ಗಿಲ್ ವಿಜಯ್ ದಿವಸ್ ಕಾರ್ಯಕ್ರಮವನ್ನು ಆಚರಿಸಲಾಯಿತು. ಡಾ.ಎಸ್.ಮರೀಗೌಡ, ಡಾ. ಪಿ.ಕೆ. ಗೋವರ್ಧನ್, ಪ್ರೊ. ಟಿ. ಸತೀಶ್, ಕಾಲೇಜಿನ ಎನ್.ಸಿ.ಸಿ ಘಟಕ, ಎನ್.ಎಸ್.ಎಸ್, ರೆಡ್‌ಕ್ರಾಸ್ ಹಾಗೂ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕಗಳ ಮುಖ್ಯಸ್ಥರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೈಸೂರು ಟೀಂನಿಂದ ಗಿಡ ನೆಡುವ ಕಾರ್ಯಕ್ರಮ



ಮೈಸೂರು, ಜು. 26– ಮೈಸೂರು ಟೀಂ ತಂಡದ ವತಿಯಿಂದ ಮೈಸೂರಿನ ಕೆಸಿ ಬಡಾವಣೆ, ವೀರ ಯೋಧ ಹುತಾತ್ಮ ಪ್ರಶಾಂತ್ ಉದ್ಯಾನವನದಲ್ಲಿ ಸುಮಾರು 30 ಗಿಡಗಳನ್ನು ನೆಡಲಾಯಿತು. ಇದರೊಂದಿಗೆ ತಂಡದಿಂದ ಇದೇ ಪಾರ್ಕಿನಲ್ಲಿ ಒಟ್ಟು 60 ಗಿಡಗಳನ್ನು ಹಾಗೂ ಒಟ್ಟಾರೆಯಾಗಿ 142 ಗಿಡಗಳನ್ನು ರಸ್ತೆ ಮತ್ತು ಪಾರ್ಕಿನಲ್ಲಿ ನೆಡಲಾಯಿತು. ಈ ಸಂದರ್ಭದಲ್ಲಿ ಕೆ.ಸಿ.ಬಡಾವಣೆಯ ವಿಶ್ವನಾಥ್, ಸಿದ್ದನಾಯಕ್, ಇಟ್ಟಿಗೆಗೂಡಿನ ಆಡಿಟರ್ ಬಾಬು, ಬಿಜೆಪಿ ಮುಖಂಡರಾದ ಹರೀಶ್, ಜೆಸಿ ನಗರದ ಸಂತೋಷ್, ತಂಡದ ಗೋಕುಲ್ ಗೋವರ್ಧನ್, ಯಶವಂತ್, ಅನಿಲ್ ಜೈನ್,ಕಿರಣ್ ಜೈ ರಾಮ್ ಗೌಡ, ಹಿರಿಯಣ್ಣ, ಆನಂದ್, ಹರೀಶ್ ಬಾಬು, ವಸಂತ್, ಸಂತೋಷ್ ನಾಗನೋರ್, ಯತೀಶ್, ನವೀನ್ ಶೆಟ್ಟಿ, ಮನೋಹರ್, ಮಂಜು ಫಾರ್ಮ, ರಮೇಶ್, ಅಮರ್ ಹಾಗೂ ಮಹಿಳಾ ಸದಸ್ಯರಾದ ಶ್ರೀಮತಿ ಸುಧಾ, ದೀಪ, ರಂಜನಾ, ಪುಟಾಣಿಗಳಾದ ಮಿನುಗು, ಆಯುಷ್, ಇಶಾನ್, ಶ್ರೀತ ಮತ್ತಿತರರು ಹಾಜರಿದ್ದರು.



ಮೈಸೂರಿನ ಹೂಟಗಳ್ಳಿಯ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಅಗ್ರಹಾರದಲ್ಲಿರುವ ಹೊಸಮಠದ ಶ್ರೀ ನಟರಾಜ ಭವನದಲ್ಲಿ ಏರ್ಪಡಿಸಿದ್ದ ರಾಜ್ಯ ಕನ್ನಡಾಂಬೆ ರತ್ನ ಪ್ರಶಸ್ತಿ ಪ್ರದಾನ ಮತ್ತು ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಾಹಿತಿ ಬನ್ನೂರು ರಾಜು ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶ್ರೀ ಅರ್ಜುನ್ ಅವಧೂತ ಮಹಾರಾಜ್ ಗುರೂಜಿ, ಕ್ರೆಡಿಟ್–ಐನ ಮ್ಯಾನೇಜಿಂಗ್ ಟ್ರಸ್ಟಿ ಡಾ.ಎಂ.ಪಿ.ವರ್ಷ, ಬಿಗ್ ಬಾಸ್ ಖ್ಯಾತಿಯ ಜಾದು ಕಲಾವಿದೆ ಸುಮಾ ರಾಜಕುಮಾರ್, ಚಲನಚಿತ್ರ ಸುಪ್ರೀತ್, ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರಸ್ವಾಮಿ, ಮುಖ್ಯ ಶಿಕ್ಷಕರಾದ ಎಂ.ಸಿ. ಉಮಾಶಂಕರ್, ಶಿಕ್ಷಕಿ ಸಂಗೀತ, ಮೈಸೂರು ಲಯನ್ ಗೋಲ್ಡನ್ ಸಿಟಿ ಅಧ್ಯಕ್ಷ ಸುರೇಶ್ ಗೋಲ್ಡ್, ಎಂ.ಸಿ.ಮಹಾದೇವ್, ಪತ್ರಕರ್ತ ಕಪ್ಪೂರವಳ್ಳಿ ಮಹದೇವ್, ಸಿ.ಎಂ. ರಾಮು, ಉತ್ತನಹಳ್ಳಿ ಮಹಾದೇವ, ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಗೋಪಾಲ್ ಸಿಂಗ್, ಬಸವನಾಯಕ, ಎ.ಸಂಗಪ್ಪ, ಎನ್. ಕೆ. ಕಾವೇರಿಯಮ್ಮ, ಉತ್ತನಹಳ್ಳಿ ಶಿವಣ್ಣ, ವೇದಿಕೆಯ ನಂಜುಂಡ, ಸಿ.ಪಿ.ಕುಮಾರ್, ರೂಪಾ, ಸಿಂಗ್ರಿಗೌಡ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದ ಎಲ್ಲೆಡೆ ವರುಣನ ಅಬ್ಬರ

ಜನರ ರಕ್ಷಣೆಗೆ ಅಗ್ನಿಶಾಮಕ ಸಿಬ್ಬಂದಿ ಸಜ್ಜು



ಮೈಸೂರಿನ ಬನ್ನಿಮಂಟಪದಲ್ಲಿರುವ ಅಗ್ನಿಶಾಮಕ ದಳ ಠಾಣೆಯಲ್ಲಿ ಸಿಬ್ಬಂದಿಗಳಿಗೆ ರಬ್ಬರ್ ಬೋಟ್ ಮತ್ತು ಓಬಿಎಂ(ಔಟ್ ಬೋರ್ಡ್ ಮೋಟಾರ್)ಗಳ ತರಬೇತಿ ನೀಡಲಾಯಿತು.

ಮೈಸೂರು, ಜು.26(ಜಿಎ)–ರಾಜ್ಯಾದ್ಯಂತ ಎಲ್ಲೆಡೆ ಮಳೆ ಅರ್ಭಟ ಆರಂಭವಾಗಿದ್ದು, ಜನರ ರಕ್ಷಣೆಗೆ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸರ್ವ ಸನ್ನದ್ಧರಾಗಿದ್ದಾರೆ.

ಈ ಬಾರಿ ಬೇಸಿಗೆ ಕಾಲ ಕಳೆದು ಮಳೆಗಾಲ ಆರಂಭವಾದರೂ ಮೊದಲು ಮಳೆ ಬಾರದೆ, ಅಣೆಕಟ್ಟೆಗಳಲ್ಲಿ ನೀರಿನ ಮಟ್ಟ ಇಳಿಕೆ ಕಂಡಿತು. ರಾಜ್ಯವೂ ಈ ವರ್ಷ ಬರದ ಛಾಯೆಗೆ ತುತ್ತಾಗಬಹುದು ಎಂಬ ಭೀತಿ ಎದುರಾಗಿತ್ತು. ಆದರೆ, ವರುಣನ ಕೃಪಾಕಟಾಕ್ಷದಿಂದ ಕಳೆದ ಒಂದು ವಾರದಿಂದ ಮೈಸೂರು, ಕೊಡಗು, ಮಂಡ್ಯ, ಚಾಮರಾಜನಗರ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುತ್ತಿದೆ.

ಭಾರಿ ಮಳೆಯ ಕಾರಣ ಹಲವು ಪ್ರದೇಶಗಳು ಜಲಾವೃತಗೊಂಡಿವೆ, ಪ್ರವಾಹ ಪರಿಸ್ಥಿತಿಯೂ ಎದುರಾಗಿದೆ. ಈ ಸ್ಥಳಗಳಲ್ಲಿ ಈಗಾಗಲೇ ರಾಜ್ಯ ಮತ್ತು ರಾಷ್ಟ್ರ ವಿಪತ್ತು ದಳ ಹೊರತುಪಡಿಸಿ, ರಾಜ್ಯದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸಂತ್ರಸ್ತರ ರಕ್ಷಣೆಯಲ್ಲಿ ತೊಡಗಿದ್ದಾರೆ.

ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಕೊಡಗಿನಲ್ಲಿಯೂ ಮಳೆಯ ಅರ್ಭಟ ಹೆಚ್ಚಾಗಿದ್ದು, ಇಲ್ಲಿ ಪ್ರವಾಹ ಸೇರಿದಂತೆ ಪ್ರಾಕೃತಿಕ ವಿಕೋಪ ಸಂಭವಿಸಿದರೆ, ಅಗ್ನಿಶಾಮಕ ದಳ ತುರ್ತಾಗಿ ಜನರ ರಕ್ಷಣೆ ಮಾಡಲು ಎಲ್ಲಾ ರೀತಿ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

ಬೋಟ್ ಬಳಕೆ: ಇತ್ತೀಚೆಗೆ ಹುಣಸೂರು, ಮೈಸೂರಿನ ಹೆಬ್ಬಾಳ, ಹಾಸನ, ಅರಸೀಕೆರೆ, ಕೆ.ಆರ್.ಪೇಟೆಗಳಿಗೆ ತಲಾ ಒಂದೊಂದು ರಬ್ಬರ್ ಬೋಟ್ ಮತ್ತು ಓಬಿಎಂ (ಔಟ್ ಬೋರ್ಡ್ ಮೋಟಾರ್)ಗಳನ್ನು ನೀಡಲಾಗಿದೆ. ಮೈಸೂರಿನ ಆರ್‌ಬಿಐ ಠಾಣೆ ಹೊರತುಪಡಿಸಿ, ಐದು ಜಿಲ್ಲೆಗಳ 31 ಠಾಣೆಗಳಲ್ಲಿ ಬೋಟ್ ಮತ್ತು ಓಬಿಎಂ (ಔಟ್ ಬೋರ್ಡ್ ಮೋಟಾರ್) ತರಬೇತಿ ನೀಡಲಾಗಿದ್ದು, ಅದರೊಟ್ಟಿಗೆ ಲೈಫ್ ಜಾಕೆಟ್ಸ್ ಸೇರಿದಂತೆ ರಕ್ಷಣಾ ಕಾರ್ಯಕ್ಕೆ ಅಗತ್ಯವಿರುವ ಎಲ್ಲಾ ಸಲಕರಣೆಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ.

660 ಸಿಬ್ಬಂದಿ: ಪ್ರವಾಹ ಸೇರಿದಂತೆ ಪ್ರಾಕೃತಿಕ ವಿಕೋಪ ಸಂಭವಿಸಿದರೆ, ಅಗ್ನಿಶಾಮಕ ದಳ ತುರ್ತಾಗಿ ಜನರ ರಕ್ಷಣೆ ಮಾಡಲು ಐದು ಜಿಲ್ಲೆಗಳಲ್ಲಿರುವ 31 ಅಗ್ನಿಶಾಮಕ ದಳ ಠಾಣೆಗಳಲ್ಲಿ 660 ಮಂದಿಗಳು ಲಭ್ಯವಿದ್ದಾರೆ.

> ಇಲ್ಲಿಯವರೆಗೂ ಮೈಸೂರು ಸೇರಿದಂತೆ ಐದು ಜಿಲ್ಲೆಗಳಲ್ಲಿ ಯಾವುದೇ ಪ್ರವಾಹ, ಪ್ರಾಕೃತಿಕ ವಿಕೋಪ ಸಂಭವಿಸಿಲ್ಲ. ಆದರೂ ಠಾಣೆಗಳಲ್ಲಿ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದು, ಯಾವುದೇ ತುರ್ತು ಸಂದರ್ಭ ಬಂದರು ನಮ್ಮ ಸಿಬ್ಬಂದಿಗಳು ಸರ್ವ ಸನ್ನದ್ಧರಾಗಿದ್ದಾರೆ. ವಿವಿಧ ತರಬೇತಿ ನೀಡಲಾಗಿದೆ.
>
> –ಪಿ.ಎಸ್.ಜಯರಾಮಯ್ಯ, ಮುಖ್ಯ ಅಗ್ನಿಶಾಮಕ ಅಧಿಕಾರಿ, ಮೈಸೂರು ಪ್ರಾಂತ್ಯ

ಆಪತ್ಬಾಂಧವ ಯೋಜನೆ : ಅನಾಹುತ ಸಂದರ್ಭದಲ್ಲಿ ಎನ್‌ಡಿಆರ್‌ಎಫ್ ತುಕಡಿಗೆ ಕಾಯುವ ಮುನ್ನ ಅಗ್ನಿಶಾಮಕ ದಳ ಸಿಬ್ಬಂದಿಗಳೇ ತುರ್ತಾಗಿ ಜನರ ರಕ್ಷಣೆಗೆ ಮುಂದಾಗಬೇಕು ಎಂಬ ಉದ್ದೇಶದಿಂದ ವಿಕೋಪ ನಿರ್ವಹಣೆ ಸಂದರ್ಭದಲ್ಲಿ ಸಾರ್ವಜನಿಕ ಸಹಭಾಗಿತ್ವವನ್ನೂ ಬಳಸಿಕೊಳ್ಳುವ ನಿಟ್ಟಿನಲ್ಲಿ 'ಆಪತ್ಬಾಂಧವ ಯೋಜನೆ' ಜಾರಿಗೆ ತರಲಾಗಿದೆ.

ಅಗ್ನಿಶಾಮಕ ದಳ ಈವರೆಗೆ ತನ್ನ ಸಿಬ್ಬಂದಿಗಳ ಜೊತೆಗೆ ಸಾವಿರಾರು ಸಾರ್ವಜನಿಕರಿಗೆ, ಸ್ವಯಂಸೇವಕರಿಗೆ ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ ಹೇಗೆ ಕೆಲಸ ಮಾಡಬೇಕು ಎಂದು ತರಬೇತಿ ನೀಡಿದೆ. ಮಡಿಕೇರಿಯಲ್ಲಿ ಈಗಾಗಲೇ 200 ಮಂದಿ ಸ್ವಯಂ ಸೇವಕರು ಈ ಯೋಜನೆಯಡಿ ತರಬೇತಿ ಪಡೆದುಕೊಂಡಿದ್ದಾರೆ.

ದೂರವಾಣಿ ಸಂಖ್ಯೆಗಳು : ಕಂಟ್ರೋಲ್ ರೂಂ: 101, ಬನ್ನಿಮಂಟಪ ಠಾಣೆ: 0821–2495101, ಹೆಬ್ಬಾಳ್ ಅಗ್ನಿಶಾಮಕ ಠಾಣೆ: 0821–2512101, ಸರಸ್ವತಿಪುರಂ ಠಾಣೆ– 0821–2540970

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ: ಇಂದಿನಿಂದ ಪ್ರಚಾರೋಪನ್ಯಾಸ ಮಾಲೆ

ಮೈಸೂರು, ಜು. 26–ನಗರದ ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವು ಜುಲೈ 27ರಿಂದ ಅಕ್ಟೋಬರ್ 26ರವರೆಗೆ ರಾಜ್ಯದ ವಿವಿಧೆಡೆ ಪ್ರಚಾರೋಪನ್ಯಾಸ ಮಾಲೆಯನ್ನು ಏರ್ಪಡಿಸಿದೆ.

27ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಚಾರೋಪನ್ಯಾಸ ಮಾಲೆಯ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ. ನಂತರ ಡಾ.ಅಂಬಳಿಕೆ ಹಿರಿಯಣ್ಣ 'ಜಾನಪದ ಸಂಗ್ರಹ ಅಧ್ಯಯನ: ಪ್ರಾರಂಭಿಕ ಪ್ರಯತ್ನಗಳು' ಕುರಿತು ಉಪನ್ಯಾಸ ನೀಡುವರು.

ಆಗಸ್ಟ್ 2ರಂದು ಬೆಳಗ್ಗೆ 11 ಗಂಟೆಗೆ ಚಾಮರಾಜನಗರದ ವಿಶ್ವವಿದ್ಯಾಲಯದಲ್ಲಿ ಡಾ.ಎಂ.ಜಿ.ಮಂಜುನಾಥ್ ಅವರು 'ಕನ್ನಡ ಶಾಸನಗಳ ಅಧ್ಯಯನ: ಪ್ರಾರಂಭಿಕ ಪ್ರಯತ್ನಗಳು' ಕುರಿತು ಮಾತನಾಡುವರು.

ಆಗಸ್ಟ್ 8ರಂದು ಬೆಳಗ್ಗೆ 11 ಗಂಟೆಗೆ ಹಾಸನದ ಹಾಸನ ವಿಶ್ವವಿದ್ಯಾಲಯದಲ್ಲಿ ಡಾ.ಎಫ್.ಟಿ.ಹಳ್ಳಿಕೇರಿ ಅವರು 'ಕನ್ನಡ ಹಸ್ತಪ್ರತಿ ಅಧ್ಯಯನ' ಕುರಿತು ಉಪನ್ಯಾಸ ನೀಡುವರು.

ಆಗಸ್ಟ್ 18ರಂದು ಬೆಳಗ್ಗೆ 11 ಗಂಟೆಗೆ ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ಡಾ.ತಾಳ್ತಜೆ ವಸಂತಕುಮಾರ್ ಅವರು 'ಪ್ರಾಚೀನ ಕನ್ನಡ ಸಾಹಿತ್ಯ ಅಧ್ಯಯನ' ಕುರಿತು, ಸೆಪ್ಟೆಂಬರ್ 4ರಂದು ಬೆಳಗ್ಗೆ 11 ಗಂಟೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರೊ.ಎನ್.ಎಸ್. ರಂಗರಾಜು 'ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನ' ಕುರಿತು ಮಾತನಾಡುವರು.

ಸೆಪ್ಟೆಂಬರ್ 7ರಂದು ಬೆಳಗ್ಗೆ 11 ಗಂಟೆಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಡಾ.ಎಸ್.ಕಾರ್ತಿಕ್ ಅವರು 'ಕನ್ನಡ ನಿಘಂಟು ರಚನೆ' ಕುರಿತು, ಸೆಪ್ಟೆಂಬರ್ 29ರಂದು ಬೆಳಗ್ಗೆ 11 ಗಂಟೆಗೆ ಮಂಗಳೂರು ವಿಶ್ವವಿದ್ಯಾಲಯದ ಕೊಣಾಜೆಯಲ್ಲಿ ಡಾ.ಎ.ವಿ.ನಾವಡ 'ಕನ್ನಡ ಸಾಹಿತ್ಯ ಚರಿತ್ರೆ' ಕುರಿತು ಉಪನ್ಯಾಸ ನೀಡುವರು.

ಅಕ್ಟೋಬರ್ 10ರಂದು ಬೆಳಗ್ಗೆ 11 ಗಂಟೆಗೆ ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಡಾ.ಎ.ಮುರಿಗೆಪ್ಪ 'ಕನ್ನಡ ಭಾಷಾ ವಿಜ್ಞಾನ ಅಧ್ಯಯನ' ಕುರಿತು ಮಾತನಾಡುವರು.

ಅಕ್ಟೋಬರ್ 16ರಂದು ಬೆಳಗ್ಗೆ 11 ಗಂಟೆಗೆ ಮಡಿಕೇರಿಯ ಕೊಡಗು ವಿಶ್ವವಿದ್ಯಾಲಯದಲ್ಲಿ ಡಾ.ಆರ್.ವಿ.ಯಸ್ ಸುಂದರಂ 'ಕವಿರಾಜಮಾರ್ಗ: ಹೊಸ ಓದು' ಕುರಿತು ಮಾತನಾಡುವರು. ಅಕ್ಟೋಬರ್ 26ರಂದು ಬೆಳಗ್ಗೆ 11 ಗಂಟೆಗೆ ಉಪನ್ಯಾಸ ಮಾಲೆಯ ಕೊನೆಯ ಕಂತು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಡಾ.ಪಾದೇಕಲ್ಲು ವಿಷ್ಣುಭಟ್ 'ಕನ್ನಡ ಲಕ್ಷಣ ಗ್ರಂಥಗಳ ಅಧ್ಯಯನ' ಕುರಿತು ಮಾತನಾಡುವರು. ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಮನು ಬಳಿಗಾರ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಭಾರತೀಯ ಭಾಷಾ ಸಂಸ್ಥಾನದ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.



ಇತ್ತೀಚೆಗೆ ಮೈಸೂರಿನ ಒಂಟಿಕೊಪ್ಪಲ್ ಕ್ಲಬ್‌ಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಲಯನ್ಸ್ ಮಾಜಿ ರಾಜ್ಯಪಾಲರಾದ ಕೆ.ದೇವೇಗೌಡ ಅವರನ್ನು ಲಯನ್ ಜೆ ಲೋಕೇಶ್, ಲಯನ್ ವಿರೂಪಾಕ್ಷ, ಲಯನ್ ಪಿ.ರಮೇಶ್, ಲಯನ್ ಗಿರೀಶ್, ಲಯನ್ ಪ್ರತಿಮಾ ರಮೇಶ್, ವೆಂಕಟೇಶ್, ಲಯನ್ ಕಾಂತರಾಜು, ಲಯನ್ ಸಿ.ಡಿ.ಕೃಷ್ಣ ಲಯನ್ ಸಿದ್ದೇಗೌಡ, ಲಯನ್ ಬಸವೇಗೌಡ, ಲಯನ್ ನಾರಾಯಣಸ್ವಾಮಿ, ಲಯನ್ ಜವರೇಶ್ ಇತರರು ಅಭಿನಂದಿಸಿದರು.

ಕಾನೂನು ಪದವಿಯಲ್ಲಿ ಪಿ.ವಿ.ನಿತೀಶ್ 6ನೇ ರ್‍ಯಾಂಕ್



ಮೈಸೂರು, ಜು. 26– ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ ನಡೆಸಿದ ಕಾನೂನು ಪದವಿ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಬರೆದು ವಿದ್ಯಾವರ್ಧಕ ಕಾನೂನು ಕಾಲೇಜಿನ ಪಿ.ವಿ. ನಿತೀಶ್ ಅವರು ಕರ್ನಾಟಕಕ್ಕೆ 6ನೇ ರ್‍ಯಾಂಕ್ ಗಳಿಸಿದ್ದಾರೆ. ಇವರು ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲೂಕು, ಅಬ್ಬೂರುಕಟ್ಟೆ ಗ್ರಾಮದ ರೈತಾಪಿ ಕುಟುಂಬದ ಪಿ.ಡಿ.ವಿಜಯ್ ಹಾಗೂ ಎಂ.ಎಸ್. ಶೋಭಾ ದಂಪತಿ ಪುತ್ರ. ಮೈಸೂರಿನ ನ್ಯಾಯಾಲಯದ ಹಿರಿಯ ವಕೀಲರಾದ ಎಸ್.ಲೋಕೇಶ್ ಅವರ ಬಳಿ ಈಗ ತರಬೇತಿ ಪಡೆಯುತ್ತಿದ್ದಾರೆ.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯಿಂದ ವಿವಿಧ ತರಬೇತಿ

ಮೈಸೂರು, ಜು. 26– ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಸಚಿವಾಲಯದ ಪ್ರಾಯೋಜಿತ ಸಂಸ್ಥೆಯಾದ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯು ಮೈಸೂರಿನ ಉದಯಗಿರಿಯ ಕಚೇರಿಯಲ್ಲಿ ಯುವಕ, ಯುವತಿಯರಿಗಾಗಿ ಸ್ವಉದ್ಯೋಗ ಮಾಡಲು ಸಹಕಾರಿಯಾಗುವ ಮೂರೂವರೆ ತಿಂಗಳ ಅವಧಿಯ ಹೊಲಿಗೆ ತರಬೇತಿ, ಎಂಬ್ರಾಯಿಡರಿ, ಜೂಟ್ ಕ್ರಾಫ್ಟ್ ಪ್ರಾಡಕ್ಟ್, ಬ್ಯೂಟಿಷಿಯನ್, ಎಲೆಕ್ಟ್ರಿಕಲ್, ದ್ವಿಚಕ್ರ ವಾಹನ ರಿಪೇರಿ, ಪ್ಲಂಬಿಂಗ್ ಹಾಗೂ 5 ತಿಂಗಳ ಅವಧಿಯ ಕಂಪ್ಯೂಟರ್ ತರಬೇತಿಗಳನ್ನು ಆ. 1 ರಿಂದ ಪ್ರಾರಂಭಿಸಲಾಗುತ್ತಿದೆ. 18 ರಿಂದ 45 ವರ್ಷ ವಯೋಮಾನದ ಪಿಯುಸಿಗಿಂತ ಕಡಿಮೆ ವಿದ್ಯಾರ್ಹತೆಯುಳ್ಳವರು ದಾಖಲಾಗಬಹುದು. ಹೆಚ್ಚಿನ ಮಾಹಿತಿಗೆ ಮೊ. 9902593302, 9448283827 ಸಂಪರ್ಕಿಸಬಹುದು.

ವಚನಗಳು ಮಾತಿನ ಜ್ಯೋತಿರ್ಲಿಂಗಗಳು



ಮೈಸೂರು, ಜು.26–ವಚನಗಳು ಮಾತಿನ ಜ್ಯೋತಿರ್ಲಿಂಗಗಳು ಎಂದು ಹೆಸರಾಂತ ಸಾಹಿತಿ ಅಕ್ಕ ಎಂ.ಎ. ನೀಲಾಂಬಿಕಾ ಹೇಳಿದರು.

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಸುತ್ತೂರು ಜಗದ್ಗುರು ರಾಜೇಂದ್ರ ಶ್ರೀಗಳ ದತ್ತಿ ಅಂಗವಾಗಿ ಮೈಸೂರು ಕುಂಬಾರಕೊಪ್ಪಲು ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ 70ನೇ ಶಾಲೆಗಳೆಡೆಗೆ ವಚನಗಳ ನಡಿಗೆ ಕಾರ್ಯ ಕ್ರಮದಡಿಯಲ್ಲಿ ನಡೆದ ವಚನಗಾಯನ, ಬ್ಯಾಗ್ ವಿತರಣೆ ಮತ್ತು ರಸಪ್ರಶ್ನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶರಣರ ನುಡಿಗಳು ಕೇವಲ ವಾಗಾಡಂಬರವಲ್ಲದ, ನಡೆನುಡಿಗಳೊಂದಾದ, ಭಾವ ಶುದ್ಧಿಯ ಸೂಚಕ ಗಳು. ಪ್ರತಿಯೊಂದು ವಚನವೂ ಕೂಡ ಒಂದಕ್ಕಿಂತ ಹೆಚ್ಚಿನ ಮೌಲ್ಯವನ್ನು ಬಿಂಬಿಸುತ್ತವೆ ಎಂದು ತಿಳಿಸಿ ಕೆಲವು ವಚನಗಳನ್ನು ಉದಾಹರಿಸಿ ಆ ವಚನಗಳಿಗೆ ಹೊಂದುವ ಕಥೆಗಳನ್ನು ಹೇಳುವುದರ ಮೂಲಕ ವಿದ್ಯಾರ್ಥಿಗಳನ್ನು ಕಥಾಲೋಕಕ್ಕೆ ಕೊಂಡೊಯ್ದರು ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಮಾತನಾಡಿ, ವಿದ್ಯಾರ್ಥಿಗಳು ಏಕಾಗ್ರತೆ ರೂಢಿಸಿಕೊಳ್ಳಲು ವಚನಗಳು ಸಹಕಾರಿಯಾಗಿವೆ. ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ ವಚನವನ್ನು ನಾವು ಗುರಿ ಸಾಧಿಸುವವರೆಗೂ ನಮ್ಮ ದಾರಿ ಕವಲೊಡೆಯದಂತೆ ನಿಶ್ಚಲ ಮನಸ್ಸನ್ನು ಹೊಂದಲು ಅನ್ವಯ ಮಾಡಿಕೊಳ್ಳಬೇಕು ಎಂದು ತಿಳಿಸಿ, ಕುಂಬಾರಕೊಪ್ಪಲು ಶಾಲೆ ಮೈಸೂರು ಜಿಲ್ಲೆಯಲ್ಲಿಯೇ 650ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಏಕಮಾತ್ರ ಶಾಲೆಯಾಗಿರುವುದು ಹೆಮ್ಮೆಯ ವಿಷಯ ಎಂದರು.

ಶಾಲೆಯ ಮುಖ್ಯಶಿಕ್ಷಕ ಲೋಹಿತೇಶ್ ಮಾತನಾಡಿ, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ವಚನಗಳು ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯಾರ್ಥಿಗಳು ಸಂಸ್ಕಾರವನ್ನು ಮೈಗೂಡಿಸಿಕೊಂಡು ಉತ್ತಮ ವಿದ್ಯಾರ್ಥಿಗಳಾಗಿ ರೂಪುಗೊಳ್ಳಲು ಶಾಲೆಗಳೆಡೆಗೆ ವಚನಗಳ ನಡಿಗೆ ಕಾರ್ಯಕ್ರಮ ಸಹಕಾರಿಯಾಗಿದೆ ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ, ಉಪಾಧ್ಯಕ್ಷ ಶಿವಪುರ ಉಮಾಪತಿ, ಸಿದ್ಧೇಶ್ವರಿ, ಜಲಜಾಕ್ಷಿ, ಶಿಕ್ಷಕರುಗಳಾದ ಗಿರೀಶ್, ಪುಷ್ಪಾವತಿ ಮತ್ತು ಕವಿತ ಉಪಸ್ಥಿತರಿದ್ದರು.

ಶಿಸ್ತು, ಸಂಯಮ ರೂಢಿಸಿಕೊಂಡರೆ ಉತ್ತಮ ಪ್ರಜೆಯಾಗಲು ಸಾಧ್ಯ

ವಿದ್ಯಾರ್ಥಿಗಳಿಗೆ ಎಂಎಲ್ಸಿ ಸಿ.ಎನ್.ಮಂಜೇಗೌಡ ಕಿವಿಮಾತು



ಮೈಸೂರು, ಜು. 26– ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಜೀವನದಲ್ಲಿ ಶಿಸ್ತು, ಸಂಯಮ, ಛಲ, ಪ್ರಾಮಾಣಿಕತೆಯನ್ನು ಬೆಳೆಸಿಕೊಂಡರೆ ಒಳ್ಳೆಯ ಪ್ರಜೆಯಾಗಲು ಸಾಧ್ಯ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ತಿಳಿಸಿದರು

ಮೈಸೂರಿನ ಚಾಮುಂಡಿಪುರಂನಲ್ಲಿರುವ ಬಾಲ ಬೋಧಿನಿ ಶಾಲೆಯಲ್ಲಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ಮಕ್ಕಳಿಗೆ ಉಚಿತ ರಕ್ತ ಗುಂಪು ಪರೀಕ್ಷೆ ಹಾಗೂ ಆರೋಗ್ಯ ಮತ್ತು ಸ್ವಚ್ಛತೆಯ ಜಾಗೃತಿ ಮೂಡಿಸಲಾಯಿತು.

ಇದೇ ಸಂದರ್ಭದಲ್ಲಿ 35 ಮಕ್ಕಳ ರಕ್ತದ ಗುಂಪು ಪರೀಕ್ಷೆ ಹಾಗೂ ಕ್ರೀಡಾ ಸಮವಸ್ತ್ರ ವಿತರಿಸಿ ಮಾತನಾಡಿದ ಅವರು, ಶಿಕ್ಷಕರು ಮಕ್ಕಳ ಮನಸ್ಸು ಅರಿತು ಬೋಧನೆ ಮಾಡಬೇಕು. ವಿದ್ಯಾರ್ಥಿಗಳು ಓದುವ ಸಮಯ ನಿಗದಿಪಡಿಸಿಕೊಳ್ಳಬೇಕು. ಓದಿದ್ದನ್ನು ಮನನ ಮಾಡಿಕೊಳ್ಳಬೇಕು. ಹೆಚ್ಚು ಬರೆಯುವುದರಿಂದ ಜ್ಞಾಪಕ ಶಕ್ತಿ ವೃದ್ಧಿಯಾಗುತ್ತದೆ. ಆಸಕ್ತಿಯಿಂದ ಓದಿದಾಗ ಒಳ್ಳೆ ಅಂಕ ಗಳಿಸಬಹುದು ಎಂದು ಕಿವಿಮಾತು ಹೇಳಿದರು.

ವೈದ್ಯರಾದ ಸಂದೀಪ್ ಮಾತನಾಡಿ, ಮಕ್ಕಳ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ಅವಶ್ಯ. ಪೋಷಕರು ಮಕ್ಕಳ ಕೈ ಮತ್ತು ಉಗುರುಗಳನ್ನು ಸ್ವಚ್ಛವಾಗಿಡಬೇಕು. ಕುಡಿಯಲು ಶುದ್ಧ ನೀರು ಉಪಯೋಗಿಸಬೇಕು. ನೈರ್ಮಲ್ಯ ಕಾಪಾಡಲು ಪ್ರತಿ ಮನೆಯಲ್ಲಿ ಶೌಚಾಲಯ ಬಳಕೆ ಮಾಡಬೇಕು. ಹಣ್ಣು, ತರಕಾರಿಗಳನ್ನು ಶುದ್ಧ ನೀರಿನಿಂದ ತೊಳೆದು ಬಳಕೆ ಮಾಡುವುದು ಸೂಕ್ತ. ಊಟದ ಮೊದಲು ಮತ್ತು ಶೌಚಾಲಯ ಬಳಸಿದ ನಂತರ ಕೈಗಳನ್ನು ಕಡ್ಡಾಯವಾಗಿ ಸ್ವಚ್ಛಗೊಳಿಸಬೇಕು. ಕಾಯಿಲೆ ಬಾರದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಆಗ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ಓದಿನ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳ ಕಡೆಗೂ ಗಮನಹರಿಸಬೇಕು, ಮಾತೃಭಾಷೆಯೊಂದಿಗೆ ಇಂಗ್ಲಿಷ್ ಚೆನ್ನಾಗಿ ಕಲಿಯಬೇಕು, ಇಂಗ್ಲಿಷ್ ಕಲಿತವರು ಯಾವುದೇ ದೇಶದಲ್ಲಾದರೂ ಜೀವನ ಸಾಗಿಸಬಹುದು ಎಂದು ಹೇಳಿದರು.

ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಬೈರತಿ ಲಿಂಗರಾಜು, ಅಜಯ್ ಶಾಸ್ತ್ರಿ, ಅಪೂರ್ವ ಸುರೇಶ್, ಉದ್ಯಮಿ ಜೈರಾಮ್, ದೂರ ರಾಜಣ್ಣ, ಶ್ರೀಕಾಂತ್ ಕಶ್ಯಪ್, ಆನಂದ್ ದಯಾನಂದ, ಸುಚೇಂದ್ರ, ಹಾಗೂ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಹಾಜರಿದ್ದರು.



ತಗ್ಗಿದ ಮಳೆ; ಇಳಿದ ಪ್ರವಾಹ


ಹಲವಾರು ಕಡೆ ಮನೆಗಳಿಗೆ ಹಾನಿ, ಮುರಿದು ಬಿದ್ದ ವಿದ್ಯುತ್ ಕಂಬಗಳು, ಮರಗಳು

ಮತ್ತೆ ಜಿಲ್ಲೆಯಲ್ಲಿ ಮಳೆ ಜೋರಾಗುವ ಸೂಚನೆ, ಆರೆಂಜ್ ಅಲರ್ಟ್ ಘೋಷಣೆ

ಮಡಿಕೇರಿ, ಜು.26– ಕೊಡಗಿನಾದ್ಯಂತ ಮಳೆ ಅಬ್ಬರ ಕಡಿಮೆಯಾಗಿದ್ದರೂ, ಮತ್ತೆ ಮಳೆಯಾಗುವ ಮುನ್ಸೂಚನೆ ಇರುವ ಹಿನ್ನೆಲೆಯಲ್ಲಿ ಆರೆಂಜ್ ಅಲರ್ಟ್ ಜಾರಿಯಲ್ಲಿದೆ.

ಬೆಟ್ಟ ಸೇತುವೆಯಲ್ಲಿ ನೀರಿನ ಮಟ್ಟ ಕಡಿಮೆಯಾಗಿದ್ದು, ಮೂರ್ನಾಡು–ವಿರಾಜಪೇಟೆ ಸಂಪರ್ಕ ಕಡಿತವಾಗುವ ಆತಂಕ ದೂರವಾಗಿದೆ. ಭಾಗಮಂಡಲ, ತಲಕಾವೇರಿ ವ್ಯಾಪ್ತಿಯಲ್ಲಿ ಮಳೆ ಕಡಿಮೆಯಾಗಿದ್ದು, ನಿಧಾನವಾಗಿ ತ್ರಿವೇಣಿ ಸಂಗಮದಲ್ಲಿ ಪ್ರವಾಹ ಇಳಿಕೆ ಕಾಣುತ್ತಿದೆ. ಮಡಿಕೇರಿ ತಾಲೂಕಿನ ಕಾವೇರಿ ನದಿ ಪಾತ್ರದ ಕೆಲವು ಕಡೆಗಳಲ್ಲಿ ಪ್ರವಾಹದಿಂದ ರಸ್ತೆ ಸಂಪರ್ಕ ಕಡಿತವಾಗಿರುವ ಬಗ್ಗೆ ವರದಿಯಾಗಿದೆ.

ತಗ್ಗಿದ ಕಾವೇರಿ ನದಿ ಪ್ರವಾಹ: ಮಡಿಕೇರಿ ತಾಲೂಕಿನ ಕೊಟ್ಟಮುಡಿ ಬಳಿ ಕಾವೇರಿ ಪ್ರವಾಹ ಎದುರಾಗಿದ್ದು, ನಾಪೋಕ್ಲು–ಮಡಿಕೇರಿ ಸಂಪರ್ಕ ಕಡಿತವಾಗಿದೆ. ನಾಪೋಕ್ಲು ಸಮೀಪದ ಹೊದವಾಡ ಗ್ರಾಮದಲ್ಲೂ ಪ್ರವಾಹ ತಲೆದೋರಿದ್ದು, ಹೊದವಾಡ ಗ್ರಾಮದ ಮುಖ್ಯರಸ್ತೆ ಹಾಗೂ ಮೂರ್ನಾಡು–ನಾಪೋಕ್ಲು ಸಂಪರ್ಕವೂ ಕಡಿತಗೊಂಡಿದೆ. ಹೊದ್ದೂರು ಬಳಿ ಅಪಾರ ಪ್ರಮಾಣದ ಗದ್ದೆಗಳೂ ಜಲಾವೃತಗೊಂಡಿದ್ದು, ಸಮುದ್ರದಂತೆ ಕಂಡು ಬರುತ್ತಿದೆ. ಕೊಟ್ಟಮುಡಿ ಬಳಿ ಕಾವೇರಿ ನದಿ ತೀರದ ಕಾಫಿ ತೋಟಗಳು ಮುಳುಗಡೆಯಾಗಿವೆ. ಬಾಳೆ, ಅಡಕೆ ತೋಟಗಳು ನೀರಿನಿಂದ ಮುಳುಗಿದ್ದು, ಕೃಷಿ ತೋಟಗಳು ಕೊಳೆಯುವ ಆತಂಕ ಎದುರಾಗಿದೆ. ಇನ್ನು ತಗ್ಗು ಪ್ರದೇಶಗಳಲ್ಲಿರುವ ಮನೆಗಳಿಗೆ ನೀರು ನುಗ್ಗಿದ್ದು, ಮನೆಯ ಗೋಡೆಗಳು ನೀರಿನಾಂಶದಿಂದ ಕುಸಿತವಾಗುವ ಆತಂಕ ಕಾಡುತ್ತಿದೆ.






ಮನೆಗಳು ಸಂಪೂರ್ಣ ನಾಶ: ವಿರಾಜಪೇಟೆ ತಾಲೂಕಿನ ಚೆನ್ನಯ್ಯನ ಕೋಟೆ ವ್ಯಾಪ್ತಿಯಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಆದಿವಾಸಿಗಳಿಬ್ಬರ 2 ಮನೆಗಳು ಸಂಪೂರ್ಣ ಕುಸಿದು ಬಿದ್ದ ಘಟನೆ ನಡೆದಿದೆ. ಅಲ್ಲಿನ ಚಿಕ್ಕ ರೇಷ್ಮೆ ಹಾಗೂ ಕೋಟೆ ಮಚ್ಚೆ ಹಾಡಿಯಲ್ಲಿ ಈ ಮನೆ ಹಾನಿ ಪ್ರಕರಣ ನಡೆದಿದ್ದು ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಚಿಕ್ಕರೇಷ್ಮೆ ಹಾಡಿಯ ರಾಜಪ್ಪ ಎಂಬುವರ ಮನೆಯಲ್ಲಿ ಮಕ್ಕಳೊಂದಿಗೆ ಇದ್ದ ಸಂದರ್ಭ ಗೋಡೆ ಸಹಿತ ಚಾವಣಿ ಕುಸಿದು ಸಂಪೂರ್ಣ ಮನೆಗೆ ಹಾನಿಯಾಗಿದೆ.

ಕೊಟೆಮಚ್ಚಿ ನಿವಾಸಿ ವಿಠಲ ಎ.ಜೆ ಎಂಬವರ ವಾಸದ ಮನೆ ಕೂಡ ಕುಸಿದು ಬಿದ್ದು ಸಂಪೂರ್ಣ ನಾಶವಾಗಿದೆ. ಘಟನಾ ಸ್ಥಳಕ್ಕೆ ಚೆನ್ನಯ್ಯನಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಅರುಣ್‌ಕುಮಾರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರಕಾಶ್, ಕಂದಾಯ ಪರಿವೀಕ್ಷಕ ಅನಿಲ್ ಕುಮಾರ್ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಹಾನಿಯನ್ನು ಪರಿಶೀಲಿಸಿದ್ದಾರೆ. ಆದಿವಾಸಿ ಜನಾಂಗದ 2 ಮನೆಗಳು ಸಂಪೂರ್ಣ ನಾಶವಾಗಿದ್ದು ಕೂಡಲೇ ಪರಿಹಾರ ನೀಡುವುದರ ಮೂಲಕ ಮನೆ ನಿರ್ಮಿಸಿ ಕೊಡಬೇಕೆಂದು ಆದಿವಾಸಿ ಮುಖಂಡ ಸಿದ್ದಪ್ಪ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಮರ ಬಿದ್ದು ಹಾನಿ: ವಿರಾಜಪೇಟೆ ತಾಲೂಕಿನ ಕೆದಮಳ್ಳೂರು ವ್ಯಾಪ್ತಿಯಲ್ಲಿ ಭಾರೀ ಮರವೊಂದು ವಿದ್ಯುತ್ ತಂತಿಗಳ ಮೇಲೆ ಮುರಿದು ಬಿದ್ದಿದೆ ಪರಿಣಾಮವಾಗಿ 11 ಕೆ.ವಿ. ಸಾಮರ್ಥ್ಯದ 14 ವಿದ್ಯುತ್ ಕಂಬಗಳು ಮುರಿದಿದ್ದು, ತಂತಿಗಳಿಗೆ ಹಾನಿಯಾಗಿದೆ ಮಳೆಯ ನಡುವೆಯೇ ದುರಸ್ತಿ ಕಾರ್ಯ ನಡೆಸಲಾಗುತ್ತಿದ್ದು, ಕೆದಮಳ್ಳೂರು ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಕಂಡು ಬಂದಿದೆ.

ಮಳೆ ಮಾಹಿತಿ: ಜಿಲ್ಲೆಗೆ ಕಳೆದ 24 ಗಂಟೆಗಳ ಅವಧಿಯಲ್ಲಿ 48.50 ಮಿ.ಮೀ ಮಳೆಯಾಗಿದೆ. ಈ ಪೈಕಿ ಮಡಿಕೇರಿ ತಾಲೂಕಿನ ಸಂಪಾಜೆ ವ್ಯಾಪ್ತಿಗೆ 147 ಮಿ.ಮೀ, ಮಡಿಕೇರಿ ಕಸಬಾ 58, ವಿರಾಜಪೇಟೆ ಕಸಬಾ 38.8, ಸೋಮವಾರಪೇಟೆ ಕಸಬಾ 47 ಹಾಗೂ ಶಾಂತಳ್ಳಿ ವ್ಯಾಪ್ತಿಯಲ್ಲಿ 106.9 ಮಿ.ಮೀ ಮಳೆಯಾಗಿದೆ.

ಹಾರಂಗಿ ವಿವರ: ಹಾರಂಗಿ ಜಲಾಶಯ 2859 ಗರಿಷ್ಠ ನೀರಿನ ಸಂಗ್ರಹ ಮಟ್ಟ ಹೊಂದಿದ್ದು, ಈ ಪೈಕಿ ಜಲಾಶಯದಲ್ಲಿ 2853.51 ಅಡಿಗಳಷ್ಟು ನೀರಿನ ಸಂಗ್ರಹ ಇದೆ. ಜಲಾಶಯಕ್ಕೆ 17,426 ಕ್ಯುಸೆಕ್ ನೀರಿನ ಒಳಹರಿವಿದ್ದು, 13 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.



ಕಣ್ಮನ ಸೆಳೆಯುತ್ತಿದೆ ಇರ್ಪು ಜಲಪಾತ

ಗೋಣಿಕೊಪ್ಪ, ಜು.26– ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮುಂಗಾರು ಮಳೆಯ ಅಬ್ಬರದಿಂದ ದಕ್ಷಿಣ ಕೊಡಗಿನ ಇರ್ಪು ಜಲಪಾತ ಎತ್ತರದಿಂದ ಧುಮ್ಮಿಕ್ಕುವ ನೀರು ಕಣ್ಮನ ಸೆಳೆಯುತ್ತಿದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ಪ್ರಮುಖ ಜಲಪಾತವಾಗಿದೆ. ಪ್ರವಾಸಿಗರಿಗೆ ತುಂಬಾ ಆಕರ್ಷಣೀಯ ಸ್ಥಳವಾಗಿದೆ. ಸುಮಾರು 60 ಅಡಿ ಎತ್ತರದಿಂದ ಕಲ್ಲುಬಂಡೆಗಳ ನಡುವೆ ಧುಮ್ಮಿಕುತ್ತದೆ. ಇದರಿಂದ ಮಂಜಿನಂತೆ ಬರುವ ನೀರಿನೋಕುಳಿ ಪ್ರವಾಸಿಗರಿಗೆ ಖುಷಿ ಕೊಡುತ್ತದೆ. ಇಲ್ಲಿ ವೈಯೊಡ್ಡಿ ನಿಲ್ಲಲು ಕಬ್ಬಿಣದ ರ್‍ಯಾಂಪ್ ಮಾಡಲಾಗಿದೆ. ಧಾರ್ಮಿಕ ಕ್ಷೇತ್ರವಾಗಿದ್ದರೂ ಕೂಡ ಜಲಧಾರೆ ನಾನಾ ಭಾಗದಿಂದ ಪ್ರವಾಸಿಗರನ್ನು ಸೆಳೆಯುತ್ತಿದೆ.

ಮರ ಬಿದ್ದು ಮನೆಗೆ ಹಾನಿ




ಗೋಣಿಕೊಪ್ಪ, ಜು.26– ಅವ್ವತ್ತಿ ಹೋಬಳಿ ಕೊಳ್ತೋಡು–ಬೈಗೋಡು ಗ್ರಾಮದ ಬೆಳೆಗಾರ ಮುಕ್ಕಾಟೀರ ರನ್ನ ಚಿಣ್ಣಪ್ಪ ಅವರ ಮನೆ ಮೇಲೆ ಮರ ಬಿದ್ದು ಹಾನಿಯಾಗಿದೆ. ಬುಧವಾರ ರಾತ್ರಿ ಮನೆಯ ಸಮೀಪವಿದ್ದ ಮರ ಬೇರು ಸಮೇತ ಬಿದ್ದ ಕಾರಣ, ಮನೆ ಭಾಗಶಃ ಹಾನಿಗೊಂಡಿದೆ. ಜನರಿಗೆ ತೊಂದರೆಯಾಗಿಲ್ಲ. ಸ್ಥಳಕ್ಕೆ ಶಾಸಕ ಅಜ್ಜಿಕುಟ್ಟೀರ ಎಸ್ ಪೊನ್ನಣ್ಣ ಭೇಟಿ ನೀಡಿ, ಸಾಂತ್ವನ ಹೇಳಿ ಪರಿಹಾರ ನೀಡುವ ಬಗ್ಗೆ ಭರವಸೆ ನೀಡಿದರು.

ಕಾಡಾನೆ ದಾಳಿಯಿಂದ ಸಾವನ್ನಪ್ಪಿದವನ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ

ಮಡಿಕೇರಿ, ಜು.26– ಕಾಡಾನೆ ದಾಳಿಗೆ ಸಿಲುಕಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದ ಕಾರ್ಮಿಕ ಬಾಬಿ ಕುಟುಂಬಕ್ಕೆ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ 10 ಲಕ್ಷ ರೂ.ಗಳ ಪರಿಹಾರ ಚೆಕ್ ಹಸ್ತಾಂತರಿಸಿದರು. ಮೇ 16ರಂದು ಪಾಲಿಬೆಟ್ಟದ ಮಸ್ಕಲ್ ಕಾಫಿ ತೋಟದಲ್ಲಿ ಕಾಡಾನೆ ದಾಳಿಯಿಂದ ಕಾರ್ಮಿಕ ಗಂಭೀರ ಗಾಯಗೊಂಡು ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ದಾಖಲಾಗಿದ್ದ ಬಾಬಿ ಮೇ 18ರಂದು ಮೃತಪಟ್ಟಿದ್ದರು. ಈ ವೇಳೆ 5 ಲಕ್ಷ ರೂ. ನಗದನ್ನು ಅರಣ್ಯ ಇಲಾಖಾಧಿಕಾರಿಗಳು ವಿತರಿಸಿದ್ದರು.

ಮೃತ ಬಾಬಿ ಪತ್ನಿ ಭಾರತಿ ಅವರಿಗೆ 10 ಲಕ್ಷ ರೂ.ಚೆಕ್ ಅನ್ನು ಹಸ್ತಾಂತರಿಸಿದ ಪೊನ್ನಣ್ಣ ಸಾಂತ್ವನ ಹೇಳಿದರು. ಈ ವೇಳೆ ಮಾಹಿತಿ ನೀಡಿದ ಶಾಸಕರು ಆನೆ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರ ಕಲ್ಪಿಸಲು ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ ಎಂದು ಹೇಳಿದರು. ಈ ಸಂದರ್ಭ ವಿರಾಜಪೇಟೆಯ ಅರಣ್ಯ ವಲಯ ಅಧಿಕಾರಿಗಳು ಹಾಜರಿದ್ದರು.

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2,859 ಅಡಿ
ಬುಧವಾರ	2853.51 ಅಡಿ
ಒಳ ಹರಿವು	17426 ಕ್ಯುಸೆಕ್
ಹೊರ ಹರಿವು	13000 ಕ್ಯುಸೆಕ್

ವಿ.ಪೇಟೆ ಬಳಿ ಗಾಂಜಾ ಮಾರುತ್ತಿದ್ದ 11 ಮಂದಿ ಬಂಧನ

ವಿರಾಜಪೇಟೆ, ಜು.26– ವಿರಾಜಪೇಟೆ ಪಟ್ಟಣ ಮತ್ತು ತಾಲೂಕಿನಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಪ್ರತ್ಯೇಕ 2 ಪ್ರಕರಣಗಳಲ್ಲಿ ಒಟ್ಟು 11 ಆರೋಪಿಗಳನ್ನು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳ ಬಳಿಯಿದ್ದ 2 ಕೆ.ಜಿ 269 ಗ್ರಾಂ. ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ.

ಮೊದಲ ಪ್ರಕರಣದಲ್ಲಿ ಕದನೂರು–ನಾಪೋಕ್ಲು ರಸ್ತೆ ಜಂಕ್ಷನ್ ಬಳಿ ಕೆಲವರು ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವುದಾಗಿ ವಿರಾಜಪೇಟೆ ಗ್ರಾಮಾಂತರ ಪೊಲೀಸರಿಗೆ ಮಾಹಿತಿ ಲಭಿಸಿತು. ಅದರ ಆಧಾರದಲ್ಲಿ ದಾಳಿ ನಡೆಸಿದ ಸಂದರ್ಭ ಅರೆಕಾಡು ಗ್ರಾಮದ ರಶೀದ್(23), ಒಂಟಿಯಂಗಡಿಯ ಹೆಚ್.ಆರ್.ಸುದೀಶ್(23), ಮೈಸೂರು ಕೆಪಿಸಿ ಕಾಲೋನಿಯ ಇಮ್ರಾನ್ ಖಾನ್(35), ಮುತ್ತಾರ್ಮುಡಿಯ ಎಂ.ಪ್ರಕಾಶ್(24), ಚೇರಂಬಾಣೆಯ ಹೆಚ್.ಎಂ. ಶಾಂತಕುಮಾರ್(27), ಕಡಗದಾಳುವಿನ ಎಸ್.ಎಂ.ಸಜೀರ್(37), ಎಂ.ಇ.ನಿಯಾಜ್(35) ಮತ್ತು ಮೈಸೂರು ಶಾಂತಿ ನಗರದ ಇಮ್ರಾನ್ ಖಾನ್(46) ಎಂಬವರನ್ನು ಬಂಧಿಸಿ, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ.



ಮತ್ತೆ ಮೂವರ ಬಂಧನ: ಎರಡನೇ ಪ್ರಕರಣದಲ್ಲಿ ವಿರಾಜಪೇಟೆಯ ಚಿಕ್ಕಪೇಟೆ ರಸ್ತೆ ಬಳಿ ಗಾಂಜಾ ಮಾರಾಟ ಮಾಡುತ್ತಿದ್ದ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ವಿರಾಜಪೇಟೆ ನಗರ ಠಾಣೆ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಸಿದ್ದಾಪುರ ಗೂಡುಗದ್ದೆ ನಿವಾಸಿಗಳಾದ ಎನ್.ಪಿ. ಧನುಷ್ (19), ಕಣ್ಣಂಗಾಲದ ಎನ್.ಸಿ. ಭರತ್(21), ಹೆಚ್.ಆರ್. ಲಿಖಿತ್(24) ಬಂಧಿತ ಆರೋಪಿಗಳಾಗಿದ್ದು, 1 ಕೆ.ಜಿ 26 ಗ್ರಾಂ. ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ.

ಮಡಿಕೇರಿ ಉಪವಿಭಾಗದ ಡಿವೈಎಸ್‌ಪಿ ಎಂ.ಜಗದೀಶ್, ವಿರಾಜಪೇಟೆ ವೃತ್ತ ನಿರೀಕ್ಷಕ ಬಿ.ಎಸ್.ಶಿವರುದ್ರಪ್ಪ, ವಿರಾಜಪೇಟೆ ನಗರ ಪೊಲೀಸ್ ಠಾಣಾಧಿಕಾರಿ ಸಿ.ವಿ. ಶ್ರೀಧರ್, ಪಿಎಸ್‌ಐ ಸಿ.ಸಿ.ಮಂಜುನಾಥ್ ಹಾಗೂ ಸಿಬ್ಬಂದಿಗಳು ಮತ್ತು ಡಿಸಿಆರ್‌ಬಿ ತಂಡ ಕಾರ್ಯಾಚರಣೆ ನಡೆಸಿದೆ.

ಮಳೆಹಾನಿ ಬಗ್ಗೆ ಮಾಹಿತಿ ಪಡೆದ ಮುಖ್ಯಮಂತ್ರಿ

ಮಡಿಕೇರಿ, ಜು.26– ರಾಜ್ಯದ ಹವಾಮಾನ ಮತ್ತು ಮಳೆ ಬೆಳೆ ಸಂಬಂಧಿತ ಸ್ಥಿತಿಗತಿಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಡಿಯೋ ಸಂವಾದ ಮೂಲಕ ಮಾಹಿತಿ ಪಡೆದರು.

ವಿಡಿಯೋ ಸಂವಾದದಲ್ಲಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸ ರಾಜು, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ನಂಜುಂಡೇಗೌಡ, ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಳ್ಳಾಲ್, ಜಿ.ಪಂ. ಯೋಜನಾ ನಿರ್ದೇಶಕ ಜಗದೀಶ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಬನಾ ಎಂ.ಶೇಖ್, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಎಚ್.ಆರ್. ನಾಯಕ್, ಹಾರಂಗಿ ಜಲಾಶಯ ಎಂಜಿನಿಯರ್ ಪುಟ್ಟಸ್ವಾಮಿ, ಲೋಕೋಪಯೋಗಿ ಇಲಾಖೆ ಎಂಜಿನಿಯರ್ ಸಿದ್ದೇಗೌಡ, ಸೆಸ್ಕ್ ಎಂಜಿನಿಯರ್ ಅನಿತಾ ಬಾಯಿ, ಪಿಎಲ್‌ಇಡಿ ಎಂಜಿನಿಯರ್ ಸುರೇಶ್‌ಕುಮಾರ್, ಇತರರು ಇದ್ದರು.

ಚಾಮರಾಜನಗರದಲ್ಲಿ ಕಾರ್ಗಿಲ್ ವಿಜಯೋತ್ಸವ

12 ಮಂದಿ ನಿವೃತ್ತ ಯೋಧರಿಗೆ ಗೌರವ ಸನ್ಮಾನ



ಚಾಮರಾಜನಗರ, ಜು.26– ಕಾರ್ಗಿಲ್ ವಿಜಯ ದಿವಸವನ್ನು ಡಾ. ಮೋಹನ್ ಎನ್.ಎಸ್.ಸ್ನೇಹ ಬಳಗ ಮತ್ತು ಪ್ರಲಕ್ಷ ಚಾರಿಟಬಲ್ ಟ್ರಸ್ಟ್ ವತಿಯಿಂದ ಜಿಲ್ಲೆಯ ನಿವೃತ್ತ ಯೋಧರನ್ನು ಗೌರವಿಸುವ ಮೂಲಕ ವಿಶಿಷ್ಟವಾಗಿ ಆಚರಣೆ ಮಾಡಲಾಯಿತು.

ನಗರದ ಬಿ. ರಾಚಯ್ಯ ಜೋಡಿ ರಸ್ತೆ ಶ್ರೀನಿವಾಸ ಬಿಲ್ಡಿಂಗ್‌ನಲ್ಲಿರುವ ನೂತನವಾಗಿ ಆರಂಭವಾದ ಡಾ.ಮೋಹನ್ ಎನ್.ಎಸ್.ಸ್ನೇಹ ಬಳಗ ಮತ್ತು ಪ್ರಲಕ್ಷ ಚಾರಿಟಬಲ್ ಟ್ರಸ್ಟ್ ಕಚೇರಿಯಲ್ಲಿ ಕಾರ್ಗಿಲ್ ಯುದ್ಧ ಹಾಗೂ ಸೇನೆಯಲ್ಲಿ ಸುಧೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ 12 ನಿವೃತ್ತ ಸೈನಿಕರಿಗೆ ಮೈಸೂರು ಪೇಟ ತೊಡಿಸಿ, ಶಾಲುಹೊದಿಸಿ, ಫಲ ತಾಂಬೂಲ ನೀಡಿ ಅಭಿನಂದಿಸಲಾಯಿತು.

ಭಾರತಾಂಬೆ ಭಾವಚಿತ್ರಕ್ಕೆ ಪುಷ್ಪಾನಮನ ಸಲ್ಲಿಸಿದ ಮುಡಿಗುಂಡ ಮಠಾಧ್ಯಕ್ಷರಾದ ಶ್ರೀಕಂಠ ಸ್ವಾಮೀಜಿ ಮಾತನಾಡಿ, ದೇಶದ ಅಭಿವೃದ್ಧಿ ಮತ್ತು ಭದ್ರತೆಯಲ್ಲಿ ಸೈನಿಕರ ಸೇವೆ ಅನನ್ಯವಾಗಿದೆ. ಕಾರ್ಗಿಲ್ ವಿಜಯ ನಮ್ಮ ದೇಶವೇ ವಿಜಯೊತ್ಸವ ಆಚರಣೆ ಮಾಡುವ ದಿವಸವಾಗಿದೆ. ವೀರಯೋಧರು ನಮ್ಮ ನೆಲಕ್ಕೆ ನುಗ್ಗಿದ್ದ ಪಾಕಿಸ್ತಾನದ ಸೈನಿಕರು ಹಾಗೂ ಭಯೋತ್ಪಾದರಕನ್ನು ಹೊಡೆದುರುಳಿಸಿ, ದೇಶದೊಳಗೆ ಬರದಂತೆ ತಡೆದು ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದರು ಎಂದು ಸ್ಮರಿಸಿಕೊಂಡರು.

ಈ ಕಾರ್ಯಕ್ರಮವು ಪರಮಾತ್ಮ ಮೆಚ್ಚುವಂತಹ ಕಾರ್ಯಕ್ರಮವಾಗಿದೆ. ವೀರ ಯೋಧರ ಸ್ಮರಿಸುವ ಕಾರ್ಯಕ್ರಮವನ್ನು ಡಾ. ಮೋಹನ್ ಅವರು ಮಾಡುವ ಮೂಲಕ ದೇಶ ಕಾಯುವ ಯೋಧರಿಗೆ ಪ್ರೇರಣೆ ನೀಡಿದ್ದಾರೆ. ಯೋಧರನ್ನು ಸನ್ಮಾನಿಸುವುದು ಭಾರತಾಂಬೆಯನ್ನು ಗೌರವಿಸಿದಂತೆ. ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರಂತೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಂರುವ ಡಾ. ಮೋಹನ್ ಅವರು ವೈದಕೀಯ ಸೇವೆ ಜೊತೆಗೆ ಸಮಾಜ ಸೇವೆಯನ್ನು ಮಾಡಿಕೊಂಡು ಬರಬೇಕಾಗಿದೆ. ಅವರ ಸೇವೆ ನಿಜವಾಗಿ ಅನಿವಾರ್ಯವಾಗಿದ್ದು, ಸಮಾಜಕ್ಕೆ ಅವರ ಹೆಚ್ಚಿನ ಸೇವೆ ತಲುಪಲಿ ಎಂದರು.

ಪ್ರಲಕ್ಷ ಟ್ರಸ್ಟ್‌ನ ಡಾ. ಮೋಹನ್ ಮಾತನಾಡಿ, ಕಾರ್ಗಿಲ್ ಯುದ್ದದಲ್ಲಿ ಭಾಗವಹಿಸಿದ ಎಲ್ಲಾ ಯೋಧರು ಹಾಗೂ ಜಿಲ್ಲೆಯ ನಿವೃತ್ತ ಯೋಧರಿಗೆ ಸನ್ಮಾನಿಸುವ ಮೂಲಕ ಟ್ರಸ್ಟ್‌ನಿಂದ ಸಾರ್ಥಕ ಸೇವೆ ನೀಡಲಾಗುತ್ತಿದೆ. ಎಲ್ಲರಿಗೂ ಆರೋಗ್ಯ ಸೇವೆ ತಲುಪಬೇಕು. ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಜೊತೆಗೆ ಕಟ್ಟಕಡೆಯ ವ್ಯಕ್ತಿಯು ಸಹ ಕೇಂದ್ರ ಸರ್ಕಾರ ಯೋಜನೆಗಳು ಹಾಗೂ ಸಮಾಜಕ್ಕೆ ಸೇವೆ ತಲುಪಿಸುವ ಉದ್ದೇಶ ನಮ್ಮದಾಗಿದೆ. ನಾನು ವೈದ್ಯನಾಗಿ ಸೇವೆ ಸಲ್ಲಿಸುತ್ತಿದ್ದು, ನನ್ನ ಸ್ನೇಹಿತರು ಹಾಗೂ ಅಭಿಮಾನಿಗಳು ನನ್ನ ಹೆಸರಿನಲ್ಲಿ ಬಳಗವನ್ನು ಸ್ಥಾಪನೆ ಮಾಡಿಕೊಂಡು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ ಎಂದರು.

ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು, ಇದರಲ್ಲಿ ಭಾಗವಹಿಸುವ ಮೂಲಕ ಅವರ ಸೇವೆಯನ್ನು ಹುರಿದುಂಬಿಸುವ ಕೆಲಸ ಮಾಡುತ್ತಿದ್ದೇನೆ. ರಾಜಕೀಯ ಪ್ರವೇಶ ಮಾಡುವ ಕುರಿತು ಚಿಂತನೆ ಮಾಡಿಲ್ಲ. ಮುಂದಿನ ದಿನಗಳಲ್ಲಿ ಪಕ್ಷದ ಹಾಗೂ ಸಂಘದ ಪ್ರಮುಖರು ಅವಕಾಶ ನೀಡಿದರೆ, ಖಂಡಿತ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೇವೆ. ಇನ್ನು ಹೆಚ್ಚಿನ ಸೇವೆ ಮಾಡಬೇಕೆಂಬ ಹಂಬಲ ನನ್ನದಾಗಿದೆ ಎಂದು ಮೋಹನ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಸ್ನೇಹ ಬಳಗದ ಅಧ್ಯಕ್ಷ ಕುರುಬಹುಂಡಿ ಲೋಕೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಆರ್‌ಎಸ್‌ಎಸ್‌ನ ದಕ್ಷಿಣ ಪ್ರಾಂತ್ಯ ಕಾರ್ಯಕಾರಿಣಿ ಸದಸ್ಯ ಮಾ. ವೆಂಕಟರಾಮು, ಕೇಂದ್ರ ಬರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರು, ಮಲ್ಲೇಶ್, ಮುಖಂಡರಾದ ಹಿರಿಬೇಗೂರು ಸೋಮಶೇಖರ್, ಕಾಡಹಳ್ಳಿ ಕುಮಾರ್, ಮಾಜಿ ನಗರಸಭಾ ಸದಸ್ಯ ಸುಂದರರಾಜು, ಕೃಷ್ಣಪ್ಪ, ಕುಂಬ್ರಹಳ್ಳಿ ಸುಬ್ಬಣ್ಣ, ಹಾಪ್‌ಕಾಮ್ ನಿರ್ದೇಶಕಿ ಶೃತಿ ಕುಮಾರಸ್ವಾಮಿ, ಮೈಸೂರು ರಂಗಪ್ಪ, ಕಳಪೆ ಪ್ರಕಾಶ್, ಪವನ್‌ನಾಯಕ, ತಲಕಾಡು ಶೃತಿ, ಬಸವರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಚ್.ಎಂ. ಬಸವಣ್ಣ, ಜಯರಾಂಶೆಟ್ಟಿ, ಪಣ್ಯದಹುಂಡಿ ರಾಜು, ನಾಗೇಂದ್ರ, ಅವಿನಾಶ್ ಮೊದಲಾದವರು ಇದ್ದರು.

ಚಾ.ನಗರ: ಉಚಿತ ಕ್ಯಾನ್ಸರ್, ದಂತರೋಗ ತಪಾಸಣಾ ಶಿಬಿರ

ಚಾಮರಾಜನಗರ, ಜು.26– ಡಾ. ಬಾಬು ಸೋಷಿಯಲ್ ವೆಲ್‌ಫೇರ್ ಮತ್ತು ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಬೃಹತ್ ಉಚಿತ ಕ್ಯಾನ್ಸರ್ ಮತ್ತು ದಂತರೋಗ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು.

ಶಿಬಿರದಲ್ಲಿ 250ಕ್ಕೂ ಹೆಚ್ಚು ಮಂದಿ ದಂತ ಹಾಗೂ ಕ್ಯಾನ್ಸರ್ ರೋಗದ ಪರೀಕ್ಷೆ ಮಾಡಿಸಿಕೊಂಡರು. ಮೈಸೂರಿನ ತಜ್ಞ ವೈದ್ಯರ ತಂಡ ವಿವಿಧ ಮಾದರಿ ಪರೀಕ್ಷೆಗಳನ್ನು ಉಚಿತವಾಗಿ ಮಾಡಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು. ಇದಕ್ಕೂ ಮುನ್ನ ನಡೆದ ಕಾರ್ಯಕ್ರಮವನ್ನು ಡಿಎಚ್‌ಓ ಡಾ. ವಿಶ್ವೇಶ್ವರಯ್ಯ ಅವರು ಉದ್ಘಾಟಿಸಿ ಮಾತನಾಡಿ, ವೈದ್ಯಕೀಯ ವೃತ್ತಿಯ ಜೊತೆಗೆ ಡಾ.ಬಾಬು ಅವರು ಟ್ರಸ್ಟ್ ರಚನೆ ಮಾಡಿಕೊಂಡು ಅನೇಕ ವರ್ಷಗಳಿಂದ ಬಡವರಿಗೆ ಸೇವೆ ಮಾಡುತ್ತಾ ಬಂದಿದ್ದಾರೆ. ಅವರಿಗೆ ಭಗವಂತ ಇನ್ನು ಹೆಚ್ಚಿನ ಆರೋಗ್ಯ ಸೇವೆ ಮಾಡುವ ಶಕ್ತಿಯನ್ನು ನೀಡಲಿ ಎಂದು ಆಶಿಸಿದರು.

ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ. ಎ.ಆರ್. ಬಾಬು ಪ್ರಾಸ್ತವಿಕವಾಗಿ ಮಾತನಾಡಿ, ಅನೇಕ ವರ್ಷಗಳಿಂದ ನಮ್ಮ ಟ್ರಸ್ಟ್ ವತಿಯಿಂದ ಶೈಕ್ಷಣಿಕ, ಆರೋಗ್ಯ ಸೇವೆಯನ್ನು ನೀಡುತ್ತಾ ಬಂದಿದ್ದೇವೆ. ಇಂದಿನ ಶಿಬಿರದಲ್ಲಿ ಗರ್ಭಕೋಶ ಕ್ಯಾನ್ಸರ್, ಗಂಟಲು ಕ್ಯಾನ್ಸರ್, ಸ್ತನಕ್ಯಾನ್ಸರ್, ಚರ್ಮದ ಕ್ಯಾನ್ಸರ್, ಅಸ್ಥಿ ಮಜ್ಜೆ ಕ್ಯಾನ್ಸರ್ ರೋಗದ ಪರೀಕ್ಷೆ ಹಾಗೂ ವಿವಿಧ ಬಗೆಯ ಹಲ್ಲಿನ ರೋಗ ಸಮಸ್ಯೆಗಳ ಬಗ್ಗೆ ಮೈಸೂರಿನ ತಜ್ಞ ವೈದ್ಯರ ತಂಡ ಪರಿಶೀಲಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಆಸ್ಪತ್ರೆಯ ಅಧೀಕ್ಷಕ ಡಾ. ಗೋವಿಂದಶೆಟ್ಟಿ, ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು), ಬಿಜೆಪಿ ಗ್ರಾಮಾಂತರ ಮಂಡಲದ ಅಧ್ಯಕ್ಷ ಬಸಪ್ಪಣ್ಣ ಉದ್ಯಮಿ ಎ. ಜಯಸಿಂಹ, ದಂತ ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ಸುನೀತಾ ಹಾಜರಿದ್ದರು.



ಮಣಿಪುರದಲ್ಲಿ ಮಹಿಳೆಯರ ಬೆತ್ತಲೆ ಮೆರವಣಿಗೆ ಖಂಡಿಸಿ ಪ್ರತಿಭಟನೆ

ಮಣಿಪುರ ಸರ್ಕಾರ ವಜಾಗೊಳಿಸಲು ಕೆ.ಸಿದ್ದರಾಜು ದೊಡ್ಡಿಂದುವಾಡಿ ಆಗ್ರಹ



ಚಾಮರಾಜನಗರ, ಜು.26– ಮಣಿಪುರ ರಾಜ್ಯದಲ್ಲಿ ಕುಕಿ ಬುಡಕಟ್ಟು ಜನಾಂಗದ ಮಹಿಳೆಯರ ಮೇಲೆ ನಡೆದಿರುವ ಅಮಾನವೀಯ ದೌರ್ಜನ್ಯ, ಅತ್ಯಾಚಾರವನ್ನು ಖಂಡಿಸಿ ಹಾಗೂ ಸೌಜನ್ಯ ಅತ್ಯಾಚಾರ ಮತ್ತು ಕಗ್ಗೊಲೆ ಪ್ರಕರಣವನ್ನು ಮರು ತನಿಖೆ ಮಾಡುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿ ಭವನದ ಮುಂಭಾಗದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಜಿಲ್ಲಾ ಸಮಿತಿ ಮೈಸೂರು ವಿಭಾಗೀಯ ಪ್ರಧಾನ ಸಂಚಾಲಕ ಕೆ.ಸಿದ್ದರಾಜು ದೊಡ್ಡಿಂದುವಾಡಿ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಮಣಿಪುರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅವರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಜಿಲ್ಲಾ ಸಮಿತಿ ಮೈಸೂರು ವಿಭಾಗೀಯ ಪ್ರಧಾನ ಸಂಚಾಲಕ ಕೆ.ಸಿದ್ದರಾಜು ದೊಡ್ಡಿಂದುವಾಡಿ ಮಾತನಾಡಿ, ಮಣಿಪುರ ರಾಜ್ಯದಲ್ಲಿ ಕುಕಿ ಸಮುದಾಯಕ್ಕೆ ಸೇರಿದ ಮೂವರು ಮಹಿಳೆಯರನ್ನು ಮೈತೆ ಜನಾಂಗದ ನೂರಾರು ಪುರುಷರು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿ ಒಬ್ಬ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಅದನ್ನು ತಡೆಯಲು ಬಂದ ಆಕೆಯ ಅಣ್ಣ ಮತ್ತು ತಂದೆಯನ್ನು ಭೀಕರವಾಗಿ ಕೊಂದು ಹಾಕಿರುವ ಘಟನೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದೇಶವು ತಲೆತಗ್ಗಿಸುವಂಥ ವಿಚಾರವಾಗಿದೆ ಎಂದರು.

ಮೇ 4 ರಂದು ಮಹಿಳೆಯರ ಬೆತ್ತಲೆ ಮೆರವಣಿಗೆ, ಅತ್ಯಾಚಾರ ಪ್ರಕರಣ ನಡೆದಿದ್ದರೂ ಕೂಡ ಮಣಿಪುರ ಸರ್ಕಾರ ಎಫ್‌ಐಆರ್ ದಾಖಲಿಸುವಲ್ಲಿ ಒಂದು ತಿಂಗಳ ಕಾಲ ವಿಳಂಬ ಮಾಡಿದೆ. ಮಣಿಪುರದಲ್ಲಿ ಹಿಂಸಾಚಾರ, ಅತ್ಯಾಚಾರ ಪ್ರಕರಣಗಳು ಎಗ್ಗಿಲ್ಲದೆ ನಡೆಯುತ್ತಿದ್ದರೂ ಕೂಡ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಿಂಸಾಚಾರವನ್ನು ಕೊನೆಗೊಳಿಸಲು ಗಂಭೀರ ಪ್ರಯತ್ನ ಮಾಡುತ್ತಿಲ್ಲ. ಹೀಗಾಗಿ ಮಣಿಪುರ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡ ಸಿ.ಎಂ.ಕೃಷ್ಣಮೂರ್ತಿ, ಸಮಿತಿ ಜಿಲ್ಲಾ ಪ್ರಧಾನ ಸಂಚಾಲಕ ಕೆ.ವೀರ, ಜಿಲ್ಲಾ ಸಂಘಟನಾ ಸಂಚಾಲಕ ಇಂಡಯ್ಯ, ಹನೂರು ತಾಲೂಕು ಸಂಚಾಲಕ ಮಾದೇಶ್, ಸಂಘಟನಾ ಸಂಚಾಲಕ ಮುರುಗೇಶ್, ಶಿವಸ್ವಾಮಿ, ರವಿಕುಮಾರ್, ಕುಮಾರ್, ನಾರಾಯಣ್ ಮಹಿಳಾ ಸಂಘಟನಾ ಸಂಚಾಲಕರಾದ ಭಾಗ್ಯಮ್ಮ, ಶಿವಮ್ಮ ಇತರರು ಭಾಗವಹಿಸಿದ್ದರು.

ದೇಶ ರಕ್ಷಿಸುವ ಸೈನಿಕರನ್ನು ಎಲ್ಲರೂ ಗೌರವಿಸಿ: ಸಿಐ ಶ್ರೀಕಾಂತ್

ಚಾಮರಾಜನಗರ, ಜು.26– ದೇಶ ಕಾಯುವ ಸೈನಿಕರನ್ನು ಗೌರವಿಸಿ, ಪ್ರೀತಿಸಬೇಕು ಎಂದು ವೃತ್ತ ನಿರೀಕ್ಷಕ ಶ್ರೀಕಾಂತ್ ತಿಳಿಸಿದರು.

ನಗರದ ಜೈಹಿಂದ್ ಕಟ್ಟೆಯಲ್ಲಿ ಜೈಹಿಂದ್ ಪ್ರತಿಷ್ಠಾನ ಹಾಗೂ ಋಗ್ವೇದಿ ಯೂತ್ ಕ್ಲಬ್‌ನಿಂದ ನಡೆದ ಕಾರ್ಗಿಲ್ ವಿಜಯ ದಿವಸ್ ಹಾಗೂ ಯೋಧರಿಗೆ ನಮಿಸೋಣ ಬನ್ನಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನೆರೆಯ ಪಾಕಿಸ್ತಾನ ದೇಶದ ಸೈನಿಕರು ಭಾರತದ ಕಾರ್ಗಿಲ್ ಹಾಗೂ ಇತರ ಪ್ರದೇಶಗಳ ಮೇಲೆ ದಾಳಿ ಮಾಡಿದಾಗ ಸಂಕಷ್ಟ ವಾತಾವರಣದಲ್ಲೂ ಭಾರತೀಯರು ಸೈನಿಕರು ಸ್ಫೂರ್ತಿ, ದೇಶ ನಿಷ್ಠೆಯಿಂದ ಹೋರಾಡಿದ 1999ರ ಘಟನೆಯನ್ನು ಭಾರತೀಯರು ಹೆಮ್ಮೆಯಿಂದ ವಿಜಯ ದಿವಸವನ್ನೂ ಆಚರಿಸುತ್ತಿರುವುದು ದೇಶಭಕ್ತಿಯ ಪ್ರತೀಕ ಎಂದರು.

ನಂತರ ಜೈಹಿಂದ್ ಪ್ರತಿಷ್ಠಾನದ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮಾತನಾಡಿ, ದೇಶದ ಗಡಿ ಕಾಯುವ ಸೈನಿಕರನ್ನು ದೇಶ, ಸರ್ಕಾರ ಹಾಗೂ ಸಾರ್ವಜನಿಕರು ಸದಾಕಾಲ ಜೊತೆಗೆ ಇರಬೇಕು. ಕಾರ್ಗಿಲ್ ಪ್ರದೇಶದ ಒಂದೊಂದು ಪರ್ವತವು ಬಹಳ ದುರ್ಗಮವಾದ ಪ್ರದೇಶವಾಗಿತ್ತು. ಭಾರತೀಯ ಸೈನಿಕರು ತಮ್ಮ ಶಕ್ತಿ, ಯುಕ್ತಿ, ಪರಾಕ್ರಮ, ಸಾರ್ವಜನಿಕ ಬೆಂಬಲ, ಸರ್ಕಾರದ ದೃಢ ಸಂಕಲ್ಪದಿಂದ ಯುದ್ಧದಲ್ಲಿ ಗೆಲುವು ತಂದಿತು ಎಂದರು.

ಇದೇ ವೇಳೆ ಜೈಹಿಂದ್ ಘೋಷಣೆಯ ಮೂಲಕ ಹುತಾತ್ಮ ಯೋಧರಿಗೆ ಗೌರವಾರ್ಪಣೆ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ನಗರಸಭೆ ಮಾಜಿ ಅಧ್ಯಕ್ಷ ಸುರೇಶ್ ನಾಯ್ಕ, ದ.ರಾ. ಬೇಂದ್ರೆ ಕನ್ನಡ ಯುವಕ ಸಂಘದ ಅಧ್ಯಕ್ಷ ಚಂದ್ರಶೇಖರ್, ವಿಜಯಲಕ್ಷ್ಮೀ, ಓಂ ಶಾಂತಿ ನ್ಯೂಸ್ ಆರಾಧ್ಯ, ರವಿ, ಸುರೇಶ್‌ಗೌಡ, ರಾಧಾಕೃಷ್ಣ, ಶಿವಸ್ವಾಮಿ, ಸುರೇಶ್, ಮಹದೇವ ಇದ್ದರು.



ಮೈಸೂರು ಮಿತ್ರ ಗುರುವಾರ 27 ಜುಲೈ 2023

ಅನುದಾನ ಬಿಡುಗಡೆ ವೀರಶೈವ–ಲಿಂಗಾಯತ ಮಹಾಸಭಾ ಆಗ್ರಹ

ಮೈಸೂರು, ಜು.26– ವೀರಶೈವ–ಲಿಂಗಾಯತ ಮಠಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಗಳಿಗೆ ಪತ್ರದ ಮೂಲಕ ಅಖಿಲ ಭಾರತೀಯ ವೀರಶೈವ ಮಹಾಸಭಾ ಮನವಿ ಸಲ್ಲಿಸಿದೆ. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ವೀರಶೈವ–ಲಿಂಗಾಯತ ಮಠಗಳಿಗೆ ಈ ಹಿಂದೆ ನೀಡಿದ ಅನುದಾನದಲ್ಲಿ ಅರ್ಧ ಮಾತ್ರ ಬಿಡುಗಡೆ ಮಾಡಲಾಗಿದೆ. ಉಳಿದ ಅರ್ಧ ಅನುದಾನವನ್ನು ನೀಡದ ಕಾರಣ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಆದ್ದರಿಂದ ಆದಷ್ಟು ಬೇಗ ಉಳಿದ ಅನುದಾನವನ್ನು ಬಿಡುಗಡೆ ಮಾಡಿ ಅಭಿವೃದ್ಧಿ ಕಾರ್ಯಗಳು ಸಂಪೂರ್ಣಗೊಳ್ಳಲು ಸಹಕರಿಸಿ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಸರ್ಕಾರದ ಒಪ್ಪಿಗೆಗೆ ಕಾಯಬೇಡಿ...

ಬರದ ಛಾಯೆಯಲ್ಲಿದ್ದ ನಮಗೆ ಮಳೆಯಿಂದ ನಿಟ್ಟುಸಿರು ಬಿಟ್ಟಿದ್ದೇವೆ. ಭಾರೀ ಮಳೆಯಾದರೂ ಅನಾಹುತ ಹೆಚ್ಚಾಗಿ ಸಂಭವಿಸಿಲ್ಲ. ಹಿಂದಿನ ಕಹಿ ಅನುಭವ ನೆನಪಿನಲ್ಲಿಟ್ಟುಕೊಂಡು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು.

ಸಿಎಂ ಖುದ್ದು ಭೇಟಿ: ನಿಮ್ಮ ಬಳಿ ಸಾಕಷ್ಟು ಹಣವಿದೆ. ಹೆಚ್ಚಿನ ಅನುದಾನ ಬೇಕಿದ್ದಲ್ಲಿ ಸರ್ಕಾರ ತಕ್ಷಣವೇ ಬಿಡುಗಡೆ ಮಾಡಲು ಸಿದ್ಧವಿದೆ. ಮಳೆ ಮತ್ತು ನೆರೆ ಪರಿಸ್ಥಿತಿ ಹೇಗೆ ನಿಭಾಯಿಸಿದ್ದೀರಿ ಎಂಬುದನ್ನು ನಾನೇ ಖುದ್ದಾಗಿ ಪರಿಶೀಲನೆ ಮಾಡುತ್ತೇನೆ. ಜುಲೈ 31ರಿಂದ ನೆರೆಪೀಡಿತ ಜಿಲ್ಲೆಗಳಿಗೆ ಭೇಟಿ ನೀಡಲಾಗುವುದು. ಈಗಾಗಲೇ ಕಂದಾಯ ಸಚಿವರು ಕೊಡಗು ಜಿಲ್ಲಾ ಪ್ರವಾಸದಲ್ಲಿದ್ದು, ಪರಿಹಾರ ಕಾರ್ಯಕ್ಕೆ ನಿರ್ದೇಶನ ನೀಡಿದ್ದಾರೆ. ಅತಿವೃಷ್ಟಿ ಉಂಟಾದ ಸಂದರ್ಭದಲ್ಲಿ ರಕ್ಷಣೆಗೆ ಸ್ಥಳೀಯ ಅಗ್ನಿಶಾಮಕ ಸಿಬ್ಬಂದಿ ಬಳಕೆ ಮಾಡಿಕೊಳ್ಳುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ. ಮಳೆಯಿಂದಾಗಿ ಕೈ ಮೀರಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಹಾಗೆಂದು ಸುಮ್ಮನೆ ಕೂರಬೇಡಿ. ಎಚ್ಚರವಿರಿ. ಕಾವೇರಿ, ಕೃಷ್ಣಾ ನದಿ ಪಾತ್ರದಲ್ಲಿ ಕೆಲವು ಜಲಾಶಯಗಳು ಭರ್ತಿಯಾಗಿದ್ದರೆ, ಇನ್ನೂ ಕೆಲವು ಜಲಾಶಯಗಳಿಗೆ ಹೆಚ್ಚಿನ ಪ್ರಮಾಣದ ನೀರು ಹರಿದು ಬರುತ್ತಿದೆ.

ಹಾಳಾದ ರಸ್ತೆ ಕೂಡಲೇ ಸುಧಾರಿಸಿ: ಅಣೆಕಟ್ಟು ಭರ್ತಿಯಾದ ನಂತರ ನೀರು ನದಿಗೆ ಬಿಡುವ ಮುನ್ನ ನದಿಪಾತ್ರದ ಜನರಿಗೆ ಮುನ್ಸೂಚನೆ ನೀಡಿ, ಅಗತ್ಯಬಿದ್ದರೆ ತಗ್ಗು ಪ್ರದೇಶಗಳ ಜನರ ಸ್ಥಳಾಂತರಕ್ಕೂ ಕ್ರಮ ಕೈಗೊಳ್ಳಿ ಎಂಬ ನಿರ್ದೇಶನ ನೀಡಿದ್ದಾರೆ. ಮಳೆ ನಿಂತ ಕೂಡಲೇ, ನೆರೆಯಿಂದ ಹಾಳಾದ ರಸ್ತೆಗಳನ್ನು ತಕ್ಷಣ ಸರಿಪಡಿಸಿ. ಮನೆ ಕಳೆದುಕೊಂಡವರನ್ನು ಗುರುತಿಸಿ ಪರಿಹಾರ ವ್ಯವಸ್ಥೆ ಮಾಡಿ. ಒಂದು ವೇಳೆ ಸಾವು–ನೋವು ಉಂಟಾದಲ್ಲಿ ವಿಕೋಪ ಪರಿಹಾರ ನಿಧಿಯ ಹಣ ಬಳಕೆ ಮಾಡಿ ಪರಿಹಾರ ನೀಡಿ ಎಂದು ಹೇಳಿದ್ದಾರೆ.

ಅಧಿಕಾರಿಗಳಿಗೆ ಸಿಎಂ ಸೂಚನೆ

ಬಿತ್ತನೆ ಚುರುಕಾಗಿ ನಡೆಯುತ್ತಿದೆ. ಮಳೆಯಿಂದಾಗಿ ಕೈ ಮೀರಿ ಹೋಗುವ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಕೆಆರ್‌ಎಸ್, ಕಬಿನಿ, ಹಾರಂಗಿ, ಹೇಮಾವತಿ, ಆಲಮಟ್ಟಿ ಸೇರಿದಂತೆ ಎಲ್ಲಾ ಜಲಾಶಯಗಳಿಗೆ ನೀರು ಬರುತ್ತಿರುವುದು ರೈತರಿಗೆ ಹಾಗೂ ಸರ್ಕಾರಕ್ಕೆ ಸಂತೋಷ ತಂದಿದೆ. ಪ್ರವಾಹದ ಮುನ್ನೆಚ್ಚರಿಕೆ ಬಂದ ಕೂಡಲೇ ರೈತರ ಸ್ಥಳಾಂತರಕ್ಕೆ ಕ್ರಮ ವಹಿಸಿ. ಹಿಂದಿನ ಸರ್ಕಾರದ ವತಿಯಿಂದ ಪರ್ಯಾಯವಾಗಿ ಕಟ್ಟಲಾಗಿರುವ ಮನೆಗಳಿಗೆ ಯಾರೂ ವಾಸ ಮಾಡಲು ಕೂಡ ಯೋಗ್ಯವಿಲ್ಲ ಎನ್ನುವ ದೂರುಗಳು ಜನರಿಂದ ವ್ಯಾಪಕವಾಗಿ ಬರುತ್ತಿವೆ, ಅಗತ್ಯ ಮುಂಜಾಗ್ರತಾ ಕ್ರಮಗಳ ಕಡೆಗೆ ಹೆಚ್ಚು ಒತ್ತು ನೀಡಲು ಸೂಚಿಸಲಾಗಿದೆ ಎಂದರು. ಅನಾಹುತಗಳನ್ನು ತಪ್ಪಿಸಲು ಹೆಚ್ಚಿನ ಗಮನ ನೀಡಬೇಕು. ಜಿಲ್ಲಾಧಿಕಾರಿಗಳು ಪದೇ ಪದೇ ಪ್ರವಾಹವಾಗುವ ಸ್ಥಳಗಳಲ್ಲಿ ಜನರಿಗೆ ಮನವರಿಕೆ ಮಾಡಿ ಸ್ಥಳಾಂತರ ಮಾಡಿ, ಜೀವಹಾನಿ ತಪ್ಪಿಸಬೇಕು. ನೆರೆ ಬಂದು ನೀರು ಹೆಚ್ಚಾದರೆ ಅದರ ಬಳಿ ಜನರು ಹೋಗದಂತೆ ಜಿಲ್ಲಾಡಳಿತ ಕ್ರಮ ವಹಿಸಿ ಜನರಿಗೆ ಈ ಬಗ್ಗೆ ಎಚ್ಚರಿಕೆ ನೀಡುವುದು ಹಾಗೂ ಅರಿವು ಮೂಡಿಸುವ ಕೆಲಸ ಮಾಡಿ ಪ್ರಾಣಹಾನಿಯನ್ನು ತಪ್ಪಿಸಬೇಕು ಎಂದರು.

ಭೂ ಕುಸಿತ ಆಗಬಹುದಾದ ಸ್ಥಳಗಳ ಬಗ್ಗೆ ಒಂದು ಹಂತಕ್ಕೆ ಅಧಿಕಾರಿಗಳಿಗೆ ಮೊದಲೇ ಮಾಹಿತಿ ಇರುತ್ತದೆ. ಪೊಲೀಸ್, ಕಂದಾಯ, ನೀರಾವರಿ, ಗ್ರಾಮೀಣಾಭಿವೃದ್ಧಿ ಇಲಾಖೆಗಳ ಮಧ್ಯೆ ಸಮನ್ವಯವಿದ್ದರೆ ಸಾಕಷ್ಟು ಜೀವಹಾನಿ ತಪ್ಪಿಸಬಹುದು. ಮಣ್ಣು ಕುಸಿಯಬಹುದಾದ ಸ್ಥಳಗಳ ಬಗ್ಗೆ ಇಲಾಖೆಗಳಿಗೆ ಮಾಹಿತಿ ಇರುತ್ತದೆ. ಕಾಳಜಿಯಿಂದ ವರ್ತಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ರಾಜ್ಯದಲ್ಲಿ ಜೂನ್ ತಿಂಗಳಲ್ಲಿ ಭಿಪರ್ ಜಾಯ್ ಚಂಡಮಾರುತದ ಕಾರಣದಿಂದಾಗಿ ಶೇ. 56 ರಷ್ಟು ಮಳೆ ಕೊರತೆ ಕಂಡು ಬಂತು. ಆದರೆ ಜುಲೈ ತಿಂಗಳಿನಲ್ಲಿ ಇಲ್ಲಿಯವರೆಗೆ ವಾಡಿಕೆ ಮಳೆ 228 ಮಿ.ಮೀ. ನಷ್ಟಿದೆ. ಆದರೆ ರಾಜ್ಯದಲ್ಲಿ 313 ಮಿ.ಮೀ. ಮಳೆ ಆಗಿದೆ. ಇದು ವಾಡಿಕೆ ಮಳೆಗಿಂತ ಶೇ. 37 ರಷ್ಟು ಹೆಚ್ಚಾಗಿದೆ. ಜುಲೈ ತಿಂಗಳಿನಲ್ಲಿ ವ್ಯಾಪಕವಾಗಿ ಮಳೆಯಾಗುತ್ತಿರುವುದರಿಂದ ಜೂನ್ ಅಂತ್ಯಕ್ಕೆ ಇದ್ದ ಮಳೆ ಕೊರತೆಯು ಕಡಿಮೆಯಾಗಿದೆ. ಮಳೆ ಕೊರತೆ ಕಂಡು ಬಂದ ತಾಲೂಕುಗಳ ಸಂಖ್ಯೆ ಇಳಿಕೆಯಾಗಿದೆ. ಪ್ರಸ್ತುತ ಜೂನ್ 1 ರಿಂದ ಈವರೆಗೆ ನಾಲ್ಕು ಜಿಲ್ಲೆಗಳಲ್ಲಿ ಅಧಿಕ ಮಳೆಯಾಗಿದ್ದು, 21 ಜಿಲ್ಲೆಗಳಲ್ಲಿ ವಾಡಿಕೆ ಮಳೆಯಾಗಿದೆ. 6 ಜಿಲ್ಲೆಗಳಲ್ಲಿ ಮಳೆ ಕೊರತೆಯಾಗಿದೆ. ಬಹುತೇಕ ಎಲ್ಲಾ ಜಲಾಶಯಗಳಲ್ಲಿ ಕಳೆದ ಒಂದು ವಾರದಲ್ಲಿ ಒಟ್ಟು ಸಂಚಿತ ಒಳಹರಿವು 227 ಟಿಎಂಸಿಯಷ್ಟಾಗಿದೆ.

ಅನಾಹುತದಿಂದ 38 ಮಂದಿ ಸಾವು

ಗ್ರಾಮೀಣ ರಸ್ತೆಗಳು 1277 ಕಿ.ಮೀ. ಒಟ್ಟು 2109 ಕಿ.ಮೀ. ರಸ್ತೆ ಹಾನಿಯಾಗಿದೆ. 189 ಸೇತುವೆಗಳು, 889 ಶಾಲಾ ಕೊಠಡಿಗಳು, 8 ಪ್ರಾಥಮಿಕ ಕೇಂದ್ರಗಳು, 269 ಅಂಗನವಾಡಿ ಕೇಂದ್ರಗಳು ಹಾನಿಯಾಗಿರುವುದು ವರದಿಯಾಗಿದೆ. 11,995 ವಿದ್ಯುತ್ ಕಂಬಗಳು, 894 ಟ್ರಾನ್ಸ್‌ಫಾರ್ಮರ್‌ಗಳು ಹಾನಿಯಾಗಿದ್ದು, 215 ಕಿ.ಮೀ. ಉದ್ದದ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಪ್ರಸ್ತುತ ಎರಡು ಪರಿಹಾರ ಶಿಬಿರಗಳಲ್ಲಿ 50 ಜನರಿಗೆ ಆಶ್ರಯ ನೀಡಲಾಗಿದೆ. ರಾಜ್ಯದಲ್ಲಿ 156 ಲಕ್ಷ ಟನ್ ಮೇವು ದಾಸ್ತಾನು ಇದ್ದು, ಮುಂದಿನ 29 ವಾರಗಳಲ್ಲಿ ಸಾಕಾಗುವಷ್ಟಿದೆ. ಹಿಂದಿನ ವರ್ಷಗಳ ಅನುಭವ ಮತ್ತು ಅನಾಹುತಗಳಿಂದ ಬಹಳಷ್ಟು ಸಾವಿನ, ಆಸ್ತಿಪಾಸ್ತಿ ಪ್ರಕರಣಗಳನ್ನು ತಡೆಯಲು ಸಾಧ್ಯವಿದೆ. ಕೃಷಿ, ಗ್ರಾಮೀಣಾಭಿವೃದ್ಧಿ, ಜಿಲ್ಲಾಡಳಿತ, ಪೊಲೀಸ್ ಹಾಗೂ ಇನ್ನಿತರೆ ಇಲಾಖೆಗಳ ನಡುವಿನ ಸಮನ್ವಯತೆಯಿಂದ ಸಾವು, ಮಳೆ ಅಪಘಾತ ಪ್ರಕರಣಗಳನ್ನು ತಡೆಯಲು ಸಾಧ್ಯವಿದೆ. ಈ ದಿಕ್ಕಿನಲ್ಲಿ ಸೂಕ್ತ ಕ್ರಮ ವಹಿಸಿ ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದರು. ಜಿಲ್ಲೆಯ ಎಲ್ಲಾ ಆಗುಹೋಗುಗಳ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರು ನಿಗಾ ವಹಿಸಿ. ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಜಿಲ್ಲಾ ಕೇಂದ್ರಗಳಲ್ಲಿಯೇ ಉಳಿಯಬೇಕು ಎಂದು ಸೂಚಿಸಲಾಗಿರುವುದಾಗಿ ತಿಳಿಸಿದರು.

ತುರ್ತು ನೆರವಿಗೆ 1033ಕ್ಕೆ ಕರೆ ಮಾಡಿ

ಸ್ಥಳಕ್ಕೆ ಬಂದು, ಸಂತ್ರಸ್ತರಿಗೆ ನೆರವಾಗಲಿದ್ದಾರೆ. ಅಪಘಾತ ವಲಯಗಳಲ್ಲಿ ಈ ಟೋಲ್ ಫ್ರೀ ನಂಬರ್ ಫಲಕ ಅಳವಡಿಸಿ, ರಸ್ತೆ ಮಧ್ಯೆ ವಿಭಜಕಗಳಲ್ಲಿಯೂ ಈ ನಂಬರ್ ಸ್ಪಷ್ಟವಾಗಿ ಕಾಣುವಂತೆ ಪ್ರದರ್ಶಿಸುವ ವ್ಯವಸ್ಥೆ ಮಾಡಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಈ 1033 ಟೋಲ್ ಫ್ರೀ ಸಹಾಯವಾಣಿ ನಂಬರ್ ಅನ್ನು 2018ರಲ್ಲಿ ಆರಂಭಿಸಿತ್ತು. ದೇಶದ ಇನ್ನಿತರ ಹೆದ್ದಾರಿಗಳಲ್ಲಿಯೂ ಈ ವ್ಯವಸ್ಥೆ ಜಾರಿಗೆ ತಂದು ಅಪಘಾತ, ತುರ್ತು ಸಂದರ್ಭಗಳಲ್ಲಿ 24 ಗಂಟೆ ವೈದ್ಯಕೀಯ ಸೇವೆಯೂ ಸೇರಿ ಎಲ್ಲಾ ನೆರವು ಒದಗಿಸಲು ಪರಿಚಯಿಸಲಾಗಿತ್ತು. ಇದೀಗ ಈ ಸೌಲಭ್ಯವನ್ನು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಗೂ ವಿಸ್ತರಿಸಲಾಗಿದೆ.

ಟೋಲ್ ಶುಲ್ಕ ಪಾವತಿಸಿ ಎಕ್ಸ್‌ಪ್ರೆಸ್ ವೇ ಬಳಸುವ ವಾಹನ ಸವಾರರಿಗೆ ರಕ್ಷಣಾ ಸೌಲಭ್ಯವನ್ನು ಉಚಿತವಾಗಿ ಒದಗಿಸಲೆಂದು ಪ್ರಾಧಿಕಾರವು ಸ್ಥಾಪಿಸಿರುವ ಈ ತುರ್ತು ಸಹಾಯವಾಣಿ ಸಂಖ್ಯೆ ಮೂಲಕ ಆ ರಸ್ತೆಯ ಸಮಸ್ಯೆಗಳು, ಮೂಲ ಸೌಲಭ್ಯದ ಕೊರತೆ ಬಗ್ಗೆಯೂ ದೂರು ಸಲ್ಲಿಸಬಹುದಾಗಿದೆ. ಮೊಬೈಲ್ ಅಥವಾ ಯಾವುದೇ ಸ್ಥಿರ ದೂರವಾಣಿ ಮೂಲಕ ಈ ಸಂಖ್ಯೆಗೆ ಕರೆ ಮಾಡಿ ರಾಷ್ಟ್ರೀಯ ಹೆದ್ದಾರಿ ಸಿಬ್ಬಂದಿಯಿಂದ ನೆರವು ಕೇಳಬಹುದು. ಕಾಲ್ ಸೆಂಟರ್ ಸಿಬ್ಬಂದಿ ಕರೆ ಸ್ವೀಕರಿಸಿ ಸಮಸ್ಯೆ ದಾಖಲಿಸಿಕೊಂಡು ತಕ್ಷಣವೇ ಸಂಬಂಧಪಟ್ಟ ಪರಿಹಾರ ಕಾರ್ಯಾಚರಣೆ ತಂಡಕ್ಕೆ ಮಾಹಿತಿ ನೀಡುವ ವ್ಯವಸ್ಥೆಯನ್ನು ಕಲ್ಪಿಸಿದೆ. ಆ ವ್ಯಾಪ್ತಿಯ ಪೊಲೀಸ್ ಠಾಣೆ, ಮೆಡಿಕಲ್ ಟೀಂ, ತುರ್ತು ವೈದ್ಯಕೀಯ ಸೇವಾ ತಂಡ, ಹೈವೇ ನಿರ್ವಹಣಾ ತಂಡಕ್ಕೂ ಕಾಲ್ ಸೆಂಟರ್ ಸಿಬ್ಬಂದಿ ಏಕ ಕಾಲದಲ್ಲಿ ಅಪಘಾತ ಸ್ಥಳದ ಮಾಹಿತಿ ನೀಡಿ, ಅತೀ ಬೇಗ ಧಾವಿಸಲು ಕ್ರಮ ವಹಿಸುತ್ತಾರೆ. ಈಗಾಗಲೇ ಈ ಟೋಲ್ ಫ್ರೀ ಸಹಾಯವಾಣಿ ಸಂಖ್ಯೆಯಿಂದ ಹಲವು ಗಾಯಾಳುಗಳನ್ನು ರಕ್ಷಿಸಿದಂತಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಹಕ್ಕು ಪ್ರತಿಪಾದಿಸಿದ ಮೋದಿ

ತೋರಿಸಿದರು. ಹಲವಾರು ಪ್ರಕರಣಗಳು ದಾಖಲಾಗಿವೆ. ಇನ್ನು ಕೆಲವೇ ದಿನಗಳು ಹೋಗಲಿ, ಅದೇ ವ್ಯಕ್ತಿಗಳು ತಮ್ಮ ಉಪನ್ಯಾಸಗಳಲ್ಲಿ, ಕಾರ್ಯಕ್ರಮಗಳಲ್ಲಿ ಇದೇ ವೇದಿಕೆಗೆ ಬರುತ್ತಾರೆ ಎಂದು ಅವರು ಹೇಳಿದರು. ಕೆಲವರಿಗೆ ಕೆಟ್ಟ ಕಾಮೆಂಟ್‌ಗಳನ್ನು ಮಾಡಿ ಒಳ್ಳೆಯ ಕೆಲಸಗಳನ್ನು ನಿಲ್ಲಿಸುವ ಪ್ರವೃತ್ತಿ ಇರುತ್ತದೆ. 'ಕರ್ತವ್ಯ ಪಥ' ನಿರ್ಮಾಣವಾಗುತ್ತಿದ್ದಾಗ ಪತ್ರಿಕೆಗಳ ಮುಖಪುಟದಲ್ಲಿ ಬ್ರೇಕಿಂಗ್ ನ್ಯೂಸ್ ಆಗಿ ಹಲವು ವಿಷಯಗಳು ರಾರಾಜಿಸುತ್ತಿದ್ದವು. ಕೋರ್ಟುಗಳಲ್ಲಿ ಕೂಡ ಇದರ ನಿರ್ಮಾಣದ ಪ್ರಶ್ನೆ ಮಾಡಿದ್ದರು. ಆದರೆ ನಿರ್ಮಾಣ ಪೂರ್ತಿಯಾದಾಗ ಇದು ಜನ ಚೆನ್ನಾಗಿದೆ ಎಂದಿದ್ದರು. ಈ ಟೀಕೆಗಳು, ಭಾರತ ಮಂಟಪವನ್ನು ಒಪ್ಪಿಕೊಳ್ಳುತ್ತಾರೆ ಎನ್ನುವ ಖಾತ್ರಿ ನನಗೆ ಇದೆ. ಅವರು ಸೆಮಿನಾರ್‌ನಲ್ಲಿ ಉಪನ್ಯಾಸ ನೀಡಲು ಇಲ್ಲಿಗೆ ಬರುವ ಸಾಧ್ಯತೆಯೂ ಇದೆ ಎಂದು ಪ್ರಧಾನಿ ಹೇಳಿದರು. ಕಳೆದ 5 ವರ್ಷಗಳಲ್ಲಿ 13.5 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ. ಭಾರತದಲ್ಲಿ ಕಡು ಬಡತನ ಕೊನೆಗೊಳ್ಳುವ ಹಂತದಲ್ಲಿದೆ ಎಂದು ಅಂತಾರಾಷ್ಟ್ರೀಯ ಸಂಸ್ಥೆಗಳೇ ಹೇಳುತ್ತಿವೆ. ಕಳೆದ 9 ವರ್ಷಗಳಲ್ಲಿ ಕೈಗೊಂಡ ನಿರ್ಧಾರಗಳು ಮತ್ತು ನೀತಿಗಳು ದೇಶವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುತ್ತಿವೆ ಎಂಬುದನ್ನು ಇದು ತೋರಿಸುತ್ತದೆ ಎಂದರು.

ಮೈಸೂರು ಜಿಲ್ಲಾ ವ್ಯಾಪ್ತಿ ಸಂಚಾರ ವ್ಯವಸ್ಥೆ ಪರಿಶೀಲಿಸಿದ ಎಡಿಜಿಪಿ ಅಲೋಕ್‌ಕುಮಾರ್

ರಿಂಗ್ ರೋಡ್, ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ತಪ್ಪಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ





ಮೈಸೂರು, ಜು.26(ಆರ್‌ಕೆ)– ಮೈಸೂರು ನಗರ, ರಿಂಗ್ ರೋಡ್ ಮತ್ತು ಜಿಲ್ಲಾ ವ್ಯಾಪ್ತಿಯ ಎಕ್ಸ್‌ಪ್ರೆಸ್ ವೇನಲ್ಲಿ ಸಂಚಾರ ನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ ಅಪಘಾತಗಳನ್ನು ತಪ್ಪಿಸುವಂತೆ ಸಂಚಾರ ಮತ್ತು ರಸ್ತೆ ಸುರಕ್ಷತೆ ಎಡಿಜಿಪಿ ಅಲೋಕ್‌ಕುಮಾರ್ ತಮ್ಮ ಇಲಾಖಾ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮಂಗಳವಾರವಷ್ಟೇ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ವಲಯಗಳನ್ನು ಪರಿಶೀಲಿಸಿದ ಅವರು, ಬುಧವಾರ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಮತ್ತು ಎಸ್ಪಿ ಕಚೇರಿ ಸಭಾಂಗಣದಲ್ಲಿ ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರು.

ಬೆಳಗ್ಗೆ ನಜರ್‌ಬಾದ್‌ನ ಎಸ್ಪಿ ಕಚೇರಿ ಸಭಾಂಗಣದಲ್ಲಿ ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ನಂದಿನಿ, ಆರ್‌ಟಿಓ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಡಿವೈಎಸ್ಪಿ, ಇನ್ಸ್‌ಪೆಕ್ಟರ್‌ಗಳೊಂದಿಗೆ ಸಭೆ ನಡೆಸಿದ ಅಲೋಕ್ ಕುಮಾರ್, ಜಿಲ್ಲಾ ರಸ್ತೆಗಳು, ತಾಲೂಕು ಕೇಂದ್ರಗಳ ಪ್ರಮುಖ ರಸ್ತೆಗಳು, ವ್ಯಾಪ್ತಿಯ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ಅತೀ ವೇಗ ಹಾಗೂ ನಿರ್ಲಕ್ಷ್ಯ ಚಾಲನೆ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಿ ಆ ಮೂಲಕ ಅಪಘಾತಗಳಿಗೆ ಕಡಿವಾಣ ಹಾಕಬೇಕೆಂದು ತಾಕೀತು ಮಾಡಿದರು.

ಮಧ್ಯಾಹ್ನ ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪ್ರತೀ ದಿನ ಮೋಟಾರ್ ವಾಹನ ಕಾಯ್ದೆಗಳಡಿ ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಸೂಲಿ ಮಾಡುವ ಮೂಲಕ ಜನರು ಕಡ್ಡಾಯವಾಗಿ ಸಂಚಾರ ನಿಯಮ ಪಾಲನೆಯಾಗುವಂತೆ ಕ್ರಮ ಕೈಗೊಳ್ಳಲು ಸಲಹೆ ನೀಡಿದರು.

ನಗರದ ಹೊರ ವರ್ತುಲ ರಸ್ತೆ ವ್ಯಾಪ್ತಿಯ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಗಳಲ್ಲಿ ಸಂಚಾರ ಪೊಲೀಸರು ಗಸ್ತು ಮಾಡಬೇಕು. ಅಪಘಾತ, ದರೋಡೆ, ಸುಲಿಗೆಯಂತಹ ಪ್ರಕರಣಗಳನ್ನು ನಿಯಂತ್ರಿಸಿ ಸಾರ್ವಜನಿಕರನ್ನು ರಕ್ಷಿಸಬೇಕಾದುದು ಪೊಲೀಸರ ಆದ್ಯ ಕರ್ತವ್ಯ ಎಂದು ಎಡಿಜಿಪಿ ಅಲೋಕ್ ಕುಮಾರ್ ಇದೇ ಸಂದರ್ಭ ಸಲಹೆ ನೀಡಿದರು.

ದಸರಾ ಸಮೀಪಿಸುತ್ತಿದೆ. ದೇಶ–ವಿದೇಶಗಳಿಂದ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಅವರಿಗೆ ಸಹಾಯ ಮಾಡಿ ಸಂಚಾರ ಸುಗಮಗೊಳಿಸಬೇಕು. ಬದಲಾಗಿ ಅವರಿಗೆ ತೊಂದರೆ ನೀಡಿ ಹಣ ಪೀಕುವುದು, ತಪ್ಪು ಮಾಹಿತಿ ನೀಡಿ ಅನಗತ್ಯ ತೊಂದರೆ ಕೊಡುವವರ ಬಗ್ಗೆ ಎಚ್ಚರಿಕೆಯಿಂದಿರುವಂತೆಯೂ ಅಧೀನ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಂಗಳವಾರ ರಾತ್ರಿ ಒಬ್ಬರೇ ವಾಹನದಲ್ಲಿ ಮೈಸೂರು ನಗರದಾದ್ಯಂತ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸಂಚಾರ ಸುರಕ್ಷತಾ ವ್ಯವಸ್ಥೆ, ಸಿಸಿ ಕ್ಯಾಮರಾ, ಸಿಗ್ನಲ್ ಲೈಟ್‌ಗಳ ಕಾರ್ಯ, ಸಂಚಾರ ಪೊಲೀಸರು ಕರ್ತವ್ಯ ನಿರ್ವಹಿಸುವ ವಿಧಾನವನ್ನು ಖುದ್ದು ಪರಿಶೀಲಿಸಿದ ಅಲೋಕ್ ಕುಮಾರ್, ಬೆಳಗ್ಗೆ ಪೊಲೀಸ್ ಅಧಿಕಾರಿಗಳೊಂದಿಗೆ ನಗರ ಪ್ರದಕ್ಷಿಣೆ ನಡೆಸಿ ಲೋಪ–ದೋಷಗಳನ್ನು ಸರಿಪಡಿಸುವಂತೆಯೂ ಸಲಹೆ ನೀಡಿದರು. ನಗರ ಪೊಲೀಸ್ ಆಯುಕ್ತ ಬಿ. ರಮೇಶ್, ಡಿಸಿಪಿಗಳಾದ ಮುತ್ತುರಾಜ್, ಎಸ್.ಜಾಹ್ನವಿ, ಎ.ಮಾರುತಿ, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಎಲ್ಲಾ ಸಂಚಾರ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪ್ರಯಾಣಿಕರ ಸುರಕ್ಷತೆಗಾಗಿ ಇನ್ನೂ ಸುಧಾರಣೆಯಾಗಬೇಕು

ಮೈಸೂರು, ಜು. 26(ಆರ್‌ಕೆ)– ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಮೈಸೂರು–ಬೆಂಗಳೂರು ದಶಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಇನ್ನೂ ಹಲವು ಸುಧಾರಿತ ಕ್ರಮಗಳಾಗಬೇಕಿದೆ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತೆ ಎಡಿಜಿಪಿ ಅಲೋಕ್‌ಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಇಂದು ಸಂಚಾರ ಪೊಲೀಸ್ ಅಧಿಕಾರಿಗಳೊಂದಿಗೆ ಸಂಚಾರ ಸುರಕ್ಷತೆ ಸಂಬಂಧ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಕ್ಸ್‌ಪ್ರೆಸ್‌ವೇಯಲ್ಲಿ ತಾವು ಎರಡು ಬಾರಿ ಖುದ್ದು ಭೇಟಿ ನೀಡಿ ಪರಿಶೀಲಿಸಿದ್ದು, 135 ಕಿ.ಮೀ. ಉದ್ದದ ಈ ರಸ್ತೆಯಲ್ಲಿ ಸುಮಾರು 25 ಅಪಘಾತ ವಲಯಗಳಿರುವುದನ್ನು ಗುರ್ತಿಸಿದ್ದೇವೆ ಎಂದರು.

ಅಪಘಾತ ವಲಯಗಳಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳಾಗಬೇಕಿದೆ, ಇನ್ನೂ ಸುಧಾರಣಾ ಕಾಮಗಾರಿಗಳಾಗಬೇಕು. ಹಲವು ಸಮಸ್ಯೆ, ಲೋಪ–ದೋಷಗಳನ್ನು ಸರಿಪಡಿಸುವಂತೆ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಎಕ್ಸ್‌ಪ್ರೆಸ್‌ವೇ ನಿರ್ಮಾಣ ಮಾಡುವಾಗಲೇ ನಿರ್ಮಾಣ ಮಾಡುವಾಗಲೇ ಈ ಎಲ್ಲಾ ಅಂಶಗಳನ್ನು ಪರಿಗಣಿಸಬೇಕಾಗಿತ್ತು ಎಂದು ಅವರು ತಿಳಿಸಿದರು. ಬಾಕಿ ಇರುವ ಕಾಮಗಾರಿಗಳನ್ನು ಅನುದಾನ ತಂದು ಮಾಡಿಸುವುದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜವಾಬ್ದಾರಿಯಾಗಿದೆ. ನಾವು ಈಗಾಗಲೇ ಸಮಸ್ಯೆಗಳೇನು? ಅಪಘಾತಗಳನ್ನು ತಪ್ಪಿಸಲು ಯಾವ ಕಾಮಗಾರಿ ಮಾಡಬೇಕೆಂಬುದನ್ನು ಅಧಿಕಾರಿಗಳೊಂದಿಗೆ ಪರಿಶೀಲಿಸಿ ತೋರಿಸಿದ್ದೇವೆ ಎಂದು ಅಲೋಕ್‌ಕುಮಾರ್ ನುಡಿದರು. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಯಲ್ಲಿ ಕಬ್ಬಿಣದ ಬ್ಯಾರಿಕೇಡ್, ಗ್ರಿಲ್‌ಗಳ ಕಳ್ಳತನವಾಗಿರುವ ಬಗ್ಗೆ ನಮಗೆ ದೂರು ನೀಡಿಲ್ಲ, ಅದರಿಂದಾಗಿ ದನ–ಕರುಗಳು ರಸ್ತೆಗೆ ಬಂದು ಅಪಘಾತಗಳಾಗುತ್ತಿವೆ ಎಂದು ಮೌಖಿಕವಾಗಿ ಹೇಳುತ್ತಾರಷ್ಟೆ ಅದೇ ರೀತಿ ದರೋಡೆ, ಸುಲಿಗೆ ಬಗ್ಗೆಯೂ ದೂರು ನೀಡಿದಲ್ಲಿ ಪೊಲೀಸರು ಅಗತ್ಯ ಕ್ರಮ ಜರುಗಿಸುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಎಡಿಜಿಪಿಯವರು ಪ್ರತಿಕ್ರಿಯಿಸಿದರು. ಆಗಸ್ಟ್ 1ರಿಂದ ಎಕ್ಸ್‌ಪ್ರೆಸ್‌ವೇಯಲ್ಲಿ ದ್ವಿಚಕ್ರ ವಾಹನ, ಆಟೋ, ಎತ್ತಿನಗಾಡಿ ಸಂಚಾರ ನಿರ್ಬಂಧಿಸಿ ಪ್ರಾಧಿಕಾರವು ಆದೇಶ ಹೊರಡಿಸಿದೆ. ನಿಯಮ ಉಲ್ಲಂಘಿಸಿದಲ್ಲಿ ಸಿಸಿ ಕ್ಯಾಮರಾ ದೃಶ್ಯ ಆಧರಿಸಿ ನೋಟಿಸ್ ಜಾರಿಗೊಳಿಸಿ ದಂಡ ವಸೂಲು ಮಾಡುವುದಲ್ಲದೆ, ಹೆದ್ದಾರಿ ಪಟ್ರೋಲಿಂಗ್ ತಂಡ, ಟೋಲ್ ಪ್ಲಾಜಾ ಬಳಿಯ ಸಿಬ್ಬಂದಿಗಳೂ ಪ್ರಕರಣ ದಾಖಲಿಸುವರು ಎಂದು ಅವರು ತಿಳಿಸಿದರು.

ಜನನ–ಮರಣಗಳ ನೋಂದಣಿ ಕಾಯ್ದೆ ತಿದ್ದುಪಡಿ ಮಸೂದೆ ಮಂಡನೆ

ನವದೆಹಲಿ: ಜನನ ಮತ್ತು ಮರಣಗಳ ನೋಂದಣಿ ಕಾಯ್ದೆ–1969ಕ್ಕೆ ತಿದ್ದುಪಡಿ ತರುವ ಉದ್ದೇಶದ ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಬುಧವಾರ ಮಂಡಿಸಿದೆ.ಮ

ಈ ಕಾಯ್ದೆ ಜಾರಿಗೆ ಬಂದು 54 ವರ್ಷಗಳ ನಂತರ ಇದೇ ಮೊದಲ ಬಾರಿಗೆ ತಿದ್ದುಪಡಿ ಮಾಡುತ್ತಿರುವುದು ಗಮನಾರ್ಹ. ಶಾಲಾ–ಕಾಲೇಜುಗಳಲ್ಲಿ ಪ್ರವೇಶ, ಚಾಲನಾ ಪರವಾನಗಿ ಪಡೆಯಲು ಹಾಗೂ ಸರ್ಕಾರಿ ನೌಕರಿಗೆ ನಡೆಯುವ ನೇಮಕಾತಿ ಸಂದರ್ಭಗಳಲ್ಲಿ ಜನನ ಪ್ರಮಾಣಪತ್ರವನ್ನು ಒಂದೇ ದಾಖಲೆಯಂತೆ ಬಳಸಲು ಉದ್ದೇಶಿತ ತಿದ್ದುಪಡಿಗಳು ಅವಕಾಶ ಕಲ್ಪಿಸುತ್ತವೆ.

ಮತದಾರರ ಪಟ್ಟಿ ಸಿದ್ಧಪಡಿಸಲು, ಆಧಾರ್ ಸಂಖ್ಯೆ ನೀಡುವಾಗ ಹಾಗೂ ವಿವಾಹ ನೋಂದಣಿ ಸಂದರ್ಭದಲ್ಲಿಯೂ ಜನನ ಪ್ರಮಾಣಪತ್ರವನ್ನು ಬಳಸಲು ಈ ಉದ್ದೇಶಿತ ತಿದ್ದುಪಡಿಗಳಿಂದ ಸಾಧ್ಯವಾಗಲಿದೆ. ಈ ಉದ್ದೇಶಗಳಿಗೆ ಜನನ ಪ್ರಮಾಣಪತ್ರ ಬಳಸಬೇಕು ಎಂಬ ಸರ್ಕಾರದ ಯೋಜನೆಗೆ ಈ ಹಿಂದೆ ಭಾರಿ ವಿರೋಧ ವ್ಯಕ್ತವಾಗಿತ್ತು. ಖಾಸಗಿತನದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದ ಹಲವರು ಈ ನಡೆಯು ರಾಜ್ಯಗಳ ಹಕ್ಕುಗಳನ್ನು ಕಸಿಯಲಿದೆ ಎಂದು ದೂರಿದ್ದರು. ಜನರಿಗೆ ಸಂಬಂಧಿಸಿದ ಮಾಹಿತಿಯನ್ನು ಸರ್ಕಾರವು ಅನಿಯಂತ್ರಿತವಾಗಿ ಪಡೆಯುವುದು ಸಾಧ್ಯವಾಗಲಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿದ್ದರು.

ಮಸೂದೆ ಮಂಡಿಸಿ ಮಾತನಾಡಿದ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್, 'ಸಾಮಾಜಿಕ ಬದಲಾವಣೆ ಮತ್ತು ತಂತ್ರಜ್ಞಾನದಲ್ಲಿನ ಪ್ರಗತಿಗೆ ತಕ್ಕಂತೆ ಈ ಕಾಯ್ದೆಗೆ ತಿದ್ದುಪಡಿ ತರುವ ಅಗತ್ಯವಿದೆ' ಎಂದು ಹೇಳಿದರು. ತಿದ್ದುಪಡಿ ಮೂಲಕ ಕಾಯ್ದೆಯನ್ನು ಮತ್ತಷ್ಟು ನಾಗರಿಕಸ್ನೇಹಿಯಾಗಿಸುವ ಉದ್ದೇಶ ಹೊಂದಲಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರಗಳು, ಸಾರ್ವಜನಿಕರು ಹಾಗೂ ಇತರ ಭಾಗೀದಾರರೊಂದಿಗೆ ವ್ಯಾಪಕ ಸಮಾಲೋಚನೆ ನಡೆಸಲಾಗಿದೆ ಎಂದು ಸಚಿವ ರಾಯ್ ಸದನಕ್ಕೆ ವಿವರಿಸಿದರು.

ಮಸೂದೆಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸಂಸದ ಮನೀಷ್ ತಿವಾರಿ, 'ಈ ಮಸೂದೆಯು ವ್ಯಕ್ತಿಯ ಖಾಸಗಿತನ ಹಕ್ಕು, ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರ ವಿಂಗಡಣೆಯ ಉಲ್ಲಂಘನೆಯಾಗಲಿದೆ' ಎಂದು ಹೇಳಿದರು.

ತಿದ್ದುಪಡಿ ಮಸೂದೆಯಲ್ಲಿನ ಪ್ರಮುಖ ಅಂಶಗಳು

- ಜನನ ಪ್ರಮಾಣಪತ್ರವನ್ನು ಜನಿಸಿದ ದಿನಾಂಕ, ಸ್ಥಳದ ಪುರಾವೆಯ ದಾಖಲೆಯಂತೆ ಬಳಸಬಹುದು
- ಜನಸಂಖ್ಯಾ ರಿಜಿಸ್ಟ್ರಾರ್, ಮತದಾರರ ಪಟ್ಟಿ, ಆಧಾರ್ ಸಂಖ್ಯೆ, ಪಡಿತರ ಚೀಟಿ, ಪಾಸ್‌ಪೋರ್ಟ್, ಆಸ್ತಿ ನೋಂದಣಿ ಹಾಗೂ ಕೇಂದ್ರ ಸರ್ಕಾರದಿಂದ ಅಧಿಸೂಚಿತ ಇತರ ಡೇಟಾಬೇಸ್‌ಗಳನ್ನು ನಿರ್ವಹಿಸುವ ಪ್ರಾಧಿಕಾರಗಳಿಗೆ ಜನನ ಮತ್ತು ಮರಣಗಳ ಡೇಟಾಬೇಸ್ ಒದಗಿಸುವುದು
- ದತ್ತು ಪಡೆದ ಮಗು, ಅನಾಥ, ಪರಿತ್ಯಕ್ತ, ಬಾಡಿಗೆ ತಾಯ್ತನದಿಂದ ಪಡೆದ ಮಗು, ಒಬ್ಬರೇ ಪಾಲಕರಿರುವ ಅಥವಾ ಅವಿವಾಹಿತ ತಾಯಿಯ ಮಗುವಿನ ನೋಂದಣಿಗೆ ತಿದ್ದುಪಡಿ ನೆರವಾಗಲಿದೆ
- ವಿಪತ್ತು–ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡ ಸಂದರ್ಭದಲ್ಲಿ ಮರಣಗಳ ನೋಂದಣಿ ಹಾಗೂ ಮರಣ ಪ್ರಮಾಣಪತ್ರ ವಿತರಣೆ ಪ್ರಕ್ರಿಯೆಗೆ ವೇಗ ನೀಡುವುದಕ್ಕಾಗಿ ವಿಶೇಷ ಸಬ್‌ರಿಜಿಸ್ಟ್ರಾರ್‌ಗಳ ನೇಮಕಕ್ಕೆ ಅವಕಾಶ
- ಜನನ ನೋಂದಣಿ ಸಂದರ್ಭದಲ್ಲಿ ಪಾಲಕರ ಅಥವಾ ಮಾಹಿತಿ ನೀಡುವವರ ಆಧಾರ್ ಸಂಖ್ಯೆಯನ್ನು ಸಂಗ್ರಹಿಸಲು ಅವಕಾಶ
- ರಿಜಿಸ್ಟ್ರಾರ್ ಅಥವಾ ಜಿಲ್ಲಾ ರಿಜಿಸ್ಟ್ರಾರ್‌ಗಳು ತೆಗೆದುಕೊಂಡ ಕ್ರಮ ಇಲ್ಲವೇ ಹೊರಡಿಸಿದ ಆದೇಶದಿಂದ ತೊಂದರೆಗೆ ಒಳಗಾಗುವ ಸಾರ್ವಜನಿಕರ ಅಹವಾಲುಗಳಿಗೆ ಪರಿಹಾರ ಒದಗಿಸಲು ಮತ್ತು ದಂಡದ ಮೊತ್ತವನ್ನು ಹೆಚ್ಚಿಸಲು ಅವಕಾಶ ಕಲ್ಪಿಸುತ್ತದೆ

ಮೈಸೂರಲ್ಲಿ ಮಕ್ಕಳೊಂದಿಗೆ ಭಿಕ್ಷಾಟನೆ ಮಾಡುತ್ತಿದ್ದ ಮಹಿಳೆಯರ ರಕ್ಷಣೆ

ಮೈಸೂರು,ಜು.26(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಹಸುಗೂಸುಗಳು ಸೇರಿದಂತೆ ಮಕ್ಕಳೊಂದಿಗೆ ಭಿಕ್ಷಾಟನೆಯಲ್ಲಿ ನಿರತರಾಗಿರುವ ಮಹಿಳೆಯರ ರಕ್ಷಣಾ ಕಾರ್ಯ ಆರಂಭಿಸಲಾಗಿದ್ದು, ಬುಧವಾರ ವಿವಿಧೆಡೆ ಇಬ್ಬರನ್ನು ವಶಕ್ಕೆ ಪಡೆದು ಆಪ್ತ ಸಮಾಲೋಚನೆಗೆ ಕಳುಹಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ಸಹಾಯವಾಣಿ, ಮಕ್ಕಳ ರಕ್ಷಣಾ ಘಟಕ ಹಾಗೂ ಇನ್ನಿತರ ಸಂಸ್ಥೆಗಳ ನೆರವಿನೊಂದಿಗೆ ಬುಧವಾರ ಮೈಸೂರಿನ ವಿವಿಧೆಡೆ ಭಿಕ್ಷಾಟನೆಯಲ್ಲಿ ತೊಡಗಿದ್ದ ಮಹಿಳೆಯರ ಪತ್ತೆ ಕಾರ್ಯಾಚರಣೆ ನಡೆಸಲಾಯಿತು. ಕೆ.ಆರ್.ವೃತ್ತದಲ್ಲಿ ಮಗುವಿನೊಂದಿಗೆ ಭಿಕ್ಷೆ ಬೇಡುತ್ತಿದ್ದ ಮಹಿಳೆಯನ್ನು ತೀವ್ರ ವಿರೋಧದ ನಡುವೆ ಮಹಿಳಾ ಮತ್ತು ಮಕ್ಕಳ ರಕ್ಷಣಾ ತಂಡ ವಾಹನಕ್ಕೆ ಹತ್ತಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಹೋಟೆಲ್‌ವೊಂದರ ಬಳಿ ಮಕ್ಕಳೊಂದಿಗೆ ಭಿಕ್ಷೆ ಬೇಡುತ್ತಿದ್ದ ಮೂವರು ಮಹಿಳೆಯರನ್ನು ಪತ್ತೆ ಹಚ್ಚಿದರು. ಮೂವರ ಪೈಕಿ ಇಬ್ಬರು ಸ್ಥಳದಿಂದ ಓಡಿ ಹೋದರೆ, ಒಬ್ಬರನ್ನು ಮಾತ್ರ ವಶಕ್ಕೆ ಪಡೆಯಲಾಯಿತು.

ಮಹಿಳೆಯರಿಗೆ ಆಪ್ತ ಸಮಾಲೋಚನೆ ನಡೆಸಿ, ಮಕ್ಕಳ ಭವಿಷ್ಯ ಬಲಿ ಕೊಡದಂತೆ ತಿಳಿ ಹೇಳಲಾಯಿತು. ಭಿಕ್ಷಾಟನೆ ಹೊರತುಪಡಿಸಿ ಯಾವುದಾದರೂ ಕೆಲಸ ಮಾಡುವಂತೆ, ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸುವಂತೆ ಮನವರಿಕೆ ಮಾಡಲಾಯಿತು. ಮಕ್ಕಳ ಶಿಕ್ಷಣಕ್ಕೆ ಸರ್ಕಾರದ ವತಿಯಿಂದ ಸೌಲಭ್ಯದ ಬಗ್ಗೆ ತಿಳಿಸಲಾಯಿತು. ಆ ಬಳಿಕವಷ್ಟೆ ರಕ್ಷಿಸಲ್ಪಟ್ಟ ಮಹಿಳೆಯರನ್ನು ಸಮಿತಿ ಮುಂದೆ ಹಾಜರುಪಡಿಸಿ ಕಳುಹಿಸಿಕೊಡಲಾಗುತ್ತದೆ. ಈ ವೇಳೆ ಮೈಸೂರು ಸೇರಿದಂತೆ ಎಲ್ಲಾದರೂ ಚಿಕ್ಕ ಮಕ್ಕಳನ್ನು ಭಿಕ್ಷಾಟನೆಗೆ ಬಳಸಿಕೊಂಡರೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಸಂಖ್ಯೆ ಕರೆ ಮಾಡಿ ಮಾಹಿತಿ ನೀಡುವಂತೆ ಅಧಿಕಾರಿಗಳ ತಂಡ ಸಾರ್ವಜನಿಕರಲ್ಲಿ ಮನವಿ ಮಾಡಿದೆ.

ವಿದ್ಯಾಸಂಸ್ಥೆ ಆಡಳಿತ ಮಂಡಳಿಯ ಕೆಲವರ ವಿರುದ್ಧ ಅಕ್ರಮ ಆರೋಪ



ಮೈಸೂರು,ಜು.26(ಪಿಎಂ)– ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾಸಂಸ್ಥೆಯಲ್ಲಿ ಆಡಳಿತ ಮಂಡಳಿಯ ಕೆಲವರು ಅವ್ಯವಹಾರ ನಡೆಸಿದ್ದಾರೆ ಎಂದು ಆರೋಪಿಸಿದ ದಲಿತ ಸಂಘರ್ಷ ಸಮಿತಿ ಸಂಚಾಲಕ ಚೋರನಹಳ್ಳಿ ಶಿವಣ್ಣ, ಈ ಸಂಬಂಧ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಗಾಂಧಿಯವರ ವ್ಯಕ್ತಿತ್ವಕ್ಕೆ ಮಾರುಹೋದ ಟಿ.ಎಸ್.ಸುಬ್ಬಣ್ಣ ಅವರು ಮೈಸೂರು ಹಾಗೂ ರಾಜ್ಯದ ವಿವಿಧೆಡೆ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವ ಹಂಬಲದಿಂದ ಸಾರ್ವಜನಿಕ ವಿದ್ಯಾಸಂಸ್ಥೆ ಸ್ಥಾಪಿಸಿದರು. ಈ ಸಂಸ್ಥೆ ಇಂದು 500 ಕೋಟಿ ರೂ.ನಷ್ಟು ಆಸ್ತಿ ಹೊಂದಿದೆ ಎಂದರು. ವಿದ್ಯಾಸಂಸ್ಥೆ ಆಡಳಿತ ಮಂಡಳಿಯ ಜಿ.ಸಿ.ರಾಜಣ್ಣ, ನಾಗುನಾಯಕ್, ಪಿ.ಎನ್.ಹರೀಶ್ ಮತ್ತು ಡಾ.ಎ.ಎಸ್.ಚಂದ್ರಶೇಖರ್ ಅವರು ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರತಿಯೊಬ್ಬ ಉದ್ಯೋಗಿಯಿಂದಲೂ ಒಂದು ತಿಂಗಳ ವೇತನವನ್ನು ವಂತಿಗೆಯಾಗಿ ಪಡೆದಿದ್ದು, ಸಾರ್ವಜನಿಕರಿಂದಲೂ ವಂತಿಗೆ ಪಡೆದು ಹಣವನ್ನು ಸಂಸ್ಥೆಯ ಬ್ಯಾಂಕ್ ಖಾತೆಗೆ ಜಮಾ ಮಾಡದೇ ವಂಚಿಸಿದ್ದಾರೆ. ಈ ಸಂಬಂಧ ಮೈಸೂರಿನ ವಿದ್ಯಾರಣ್ಯಪುರಂನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇದೇ ಸಂಸ್ಥೆಯ ಕಾರ್ಯದರ್ಶಿ ಡಿ.ಜಿ.ಸೋಮಶೇಖರ ಮೂರ್ತಿ ಅವರು ನೀಡಿದ ದೂರಿನ್ವಯ ಎಫ್‌ಐಆರ್ (ಪ್ರಕರಣ ಸಂಖ್ಯೆ 0035/2023, ದಿನಾಂಕ–2023ರ ಜೂ.17) ಮಾಡಲಾಗಿದೆ ಎಂದು ವಿವರಿಸಿದರು.

ವಿದ್ಯಾರಣ್ಯಪುರಂನಲ್ಲಿರುವ ವಿದ್ಯಾಸಂಸ್ಥೆಯ ಆವರಣದಲ್ಲಿ ಲಕ್ಷಾಂತರ ರೂ. ಬೆಲೆಬಾಳುವ ತೇಗದ ಮರಗಳನ್ನು ಅರಣ್ಯ ಇಲಾಖೆ ಅನುಮತಿ ಪಡೆಯದೇ ಅಕ್ರಮವಾಗಿ ಕಡಿಯಲಾಗಿದೆ. ಇದೇ ಸಂಸ್ಥೆ ಶಿಕ್ಷಕ ರಮೇಶ್ ಎಂಬಾತ ಟಿ.ಎಸ್. ಸುಬ್ಬಣ್ಣನವರ ಜೀವನ ಕುರಿತು ಪುಸ್ತಕ ಬರೆಯುವ ನೆಪದಲ್ಲಿ ಪುಸ್ತಕದಲ್ಲಿ ಶೋಷಿತ ಸಮುದಾಯಕ್ಕೆ ಅವಹೇಳನ ಮಾಡಿದ್ದಾರೆ ಎಂದು ಆರೋಪಿಸಿದರು.

ಈ ಕೂಡಲೇ ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯನ್ನು ಅಮಾನತ್ತಿನಲ್ಲಿಟ್ಟು ಸಮಗ್ರ ತನಿಖೆ ನಡೆಸುವ ಜೊತೆಗೆ ಸಂಸ್ಥೆಯನ್ನು ಸರ್ಕಾರ ತನ್ನ ವಶಕ್ಕೆ ಪಡೆದುಕೊಳ್ಳಬೇಕು. ಈ ಸಂಬಂಧ ಜು.18ರಂದು ಜಿಲ್ಲಾಧಿಕಾರಿಗಳಿಗೂ ದೂರು ನೀಡಲಾಗಿದೆ ಎಂದರು. ಸಂಘಟನೆಯ ಕೆ.ವಿ.ದೇವೇಂದ್ರ, ಹಾರೋಹಳ್ಳಿ ನಟರಾಜ್, ಶಿವಮೂರ್ತಿ ಶಂಕರಪುರ ಮತ್ತಿತರರು ಗೋಷ್ಠಿಯಲ್ಲಿದ್ದರು.

ವಚನ ಸಾಹಿತ್ಯ ಸಂರಕ್ಷಣೆಗೆ ಆದ್ಯತೆ ನೀಡಬೇಕಿದೆ: ಶಾಸಕ ಹರೀಶ್‌ಗೌಡ



ಮೈಸೂರು,ಜು.26(ಎಂಟಿವೈ)– ಶ್ರೇಷ್ಠತೆ ಹೊಂದಿರುವ ವಚನ ಸಾಹಿತ್ಯ ಸಂರಕ್ಷಣೆಗೆ ಹೆಚ್ಚು ಒತ್ತು ನೀಡುವ ಅಗತ್ಯವಿದೆ ಎಂದು ಶಾಸಕ ಕೆ.ಹರೀಶ್‌ಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ಡಾ.ಫ.ಗು.ಹಳಕಟ್ಟಿ ಜನ್ಮದಿನದ ಅಂಗವಾಗಿ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಹಾಗೂ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಚನ ಸಾಹಿತ್ಯ ಶ್ರೇಷ್ಠ ಸಾಹಿತ್ಯಗಳಲ್ಲಿ ಒಂದು. ಇದು ನಮ್ಮ ಸಂಸ್ಕೃತಿ ಮತ್ತು ಸಂಸ್ಕಾರಕ್ಕೆ ಆಧಾರವಾಗಿದೆ. ವಚನಗಳು ಸಾರುವ ಶ್ರೇಷ್ಠ ಸಂದೇಶಗಳ ಮೇಲೆ ನಾಡು ನಿಂತಿದೆ ಎಂದರು. ವಚನಗಳ ಸಂರಕ್ಷಣೆಯಲ್ಲಿ ವಿಶ್ವವಿದ್ಯಾನಿಲಯಗಳ ಪಾತ್ರ ಪ್ರಮುಖವಾಗಿದೆ. ಇವುಗಳು ನಶಿಸದಂತೆ ಸಂರಕ್ಷಣೆಗೆ ಕ್ರಮ ಕೈಗೊಂಡು ಮುಂದಿನ ಪೀಳಿಗೆಗೆ ಕೊಡುಗೆ ನೀಡಬೇಕಾಗಿದೆ. ವಚನ ಸಾಹಿತ್ಯದ ಸಾರ–ಸಂದೇಶಗಳ ಬಗ್ಗೆಯೂ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಮೇಯರ್ ಶಿವಕುಮಾರ್ ಸಮಾರಂಭ ಉದ್ಘಾಟಿಸಿ ಮಾತನಾಡಿ, ಅಂದಿನ ಕಾಲದಲ್ಲಿಯೇ ವಚನಕಾರರು ಸಮಾಜದ ಸುಧಾರಣೆಗೆ ಹಾಗೂ ಸಮಾಜದಲ್ಲಿ ತುಳಿತಕ್ಕೊಳಗಾದ ವರಿಗೆ ಸಾಮಾಜಿಕ ದನಿಯಾಗಿದ್ದರು. ವಚನ ಸಾಹಿತ್ಯದ ಮಹತ್ವವನ್ನು ಅರಿಯಲು ಈ ರೀತಿಯ ವಿಚಾರ ಸಂಕಿರಣಗಳು ಸಹಾಯಕವಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥೆ ಡಾ. ವಿಜಯ್ ಕುಮಾರಿ ಕರಿಕಲ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ. ಗೋವಿಂದರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಇದ್ದರು.

ಮುಸಲ್ಮಾನರಿಂದ ಮೊಹರಂ ಆಚರಣೆ

ಮೈಸೂರು, ಜು.26(ಸಿಎನ್)–ಮೊಹರಂ ಅಂಗವಾಗಿ ಮೈಸೂರು ಮೊಹರಂ ಕಮಿಟಿ ಹಾಗೂ ಮುಸ್ಲಿಂ ಬಾಂಧವರು ಶ್ರದ್ಧಾ ಭಕ್ತಿಯಿಂದ ವಿಶೇಷ ಪ್ರಾರ್ಥನೆ ನಡೆಸಿ ಮೆರವಣಿಗೆ ನಡೆಸಿದರು.



ಮಂಡಿ ಮೊಹಲ್ಲಾ ವ್ಯಾಪ್ತಿಯ ಮಂಡಿ ಮಾರ್ಕೆಟ್‌ನ ಅಶುಕಾನ (ಮುಸ್ಲಿಂ ಪ್ರಾರ್ಥನಾ ಮಂದಿರ)ದಿಂದ ಸುಮಾರು 2 ಕಿಲೋ ಮೀಟರ್ ಮೆರವಣಿಗೆ ನಡೆಯಿತು. ಈ ಸಂದರ್ಭ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರಿಂದ ಕಟ್ಟೆಚ್ಚರ ವಹಿಸಲಾಗಿತ್ತು. ವಿವಿಧ ಕಡೆಗಳಿಂದ ಆಗಮಿಸಿದ್ದ ಸಮುದಾಯದವರು, ಸ್ಥಳೀಯರು ಸೇರಿದಂತೆ ಸುಮಾರು 150 ಮಂದಿ ಭಾಗಿಯಾಗಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಅಂಗಡಿ ಬಾಡಿಗೆಗೆ ಇದೆ
ಇರ್ವಿನ್ ರಸ್ತೆ, ಮೈಸೂರು
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9353400182

S.K.CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ Loan ಮಾಡಿಸಿ ಪ್ರಾರಂಭ 25% ನಾವೇ ಹಾಕಿ Plan, 3D Elivation ಸಹಿತ ಉತ್ತಮ ಗುಣ ಮಟ್ಟದಲ್ಲಿ ಮನೆ ಮಾಡಿಕೊಡುತ್ತೇವೆ.
9620528490

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಬೇಕಾಗಿದ್ದಾರೆ
2 ವರ್ಷ ಅನುಭವವುಳ್ಳ ಮಹಿಳಾ ಅಕೌಂಟೆಂಟ್ ಬೇಕಾಗಿದ್ದಾರೆ. ಟೆಲಿಮಾರ್ಕೆಟಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ:
9591233303, 7676841708

SITE FOR SALE
North Facing 40x60 Ramakrishna Nagara, (Near Andolana Circle)
9845598855

ಕೆಲಸಕ್ಕೆ ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್: ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಕೆ.ಆರ್.ಎಸ್. ರಸ್ತೆ, ಜೆ.ಎಸ್.ಎಸ್. ಊಟಿ ರಸ್ತೆ, ಚಾಮುಂಡಿಪುರಂ, ಹಿನ್ಕಲ್, ನಂಜನಗೂಡು, ಸಿಂಧುವಳ್ಳಿ, ಬೇಗೂರು ಹತ್ತಿರ.
2. ಫ್ರಂಟ್ ಆಫೀಸ್ ಮ್ಯಾನೇಜರ್ ಬೇಕಾಗಿದ್ದಾರೆ.
8310098788
6361439167

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಮತ್ತು ಹೌಸ್‌ಕೀಪಿಂಗ್, ಗಾರ್ಡನ್ ಫ್ಯಾಕ್ಟರಿಯಲ್ಲಿ & ಕಂಪನಿಯಲ್ಲಿ ಹೆಲ್ಪರ್‌ಗಳು ಹಾಗೂ ಫ್ರಂಟ್ ಆಫೀಸ್‌ಗಾಗಿ BA, B.Com, ITI, PUC ಯಾದವರು ಸಂಪರ್ಕಿಸಿ
9035367083
8123769346

GSS Property Mall
VERIFIED PROPERTIES IN MYSORE
BUYING & SELLING PROPERTIES IN MYSURU
VISIT OUR WEBSITE: WWW.GSSPROPERTYMALL.COM
96868-25025

WANTED
RECEPTIONIST (LADIES & GENTS)
naturals — India's No.1 hair and beauty salon
ROYAL LOOK SALON — PROFESSIONAL UNISEX
SARASWATHIPURAM | JP NAGAR | DATTAGALLI
90362 06233

ARAS HOMES PVT LTD
Trusted Mark
• Civil Engineers • Builders
4 BHK House From 88 Lakhs with Interiors
* Concrete Road
* Underground Drainage
* Underground Electricity
* Attached to Highway
* Near Infosys, L&T
* Gated Community
• 9538003006 • 0821-4525966
www.arashomes.net • arashomes27@gmail.com
#27/B, 1st Floor, Nivedhitha Nagar, NKU Road, Mysore-22

ಭೂಮಿ ಬೇಕಾಗಿದೆ
ಭೋಗ್ಯಕ್ಕೆ ಹಾಗೂ ಖರೀದಿಗೆ ಜಮೀನು ಮತ್ತು ತೋಟ ಬೇಕಾಗಿದೆ
ಭೂಮಿಪುತ್ರ
9845395000 | 9845104048
659, ದಿಗಂತ ವೃತ್ತ, ಟಿ.ಕೆ ಬಡಾವಣೆ, ಮೈಸೂರ್

ಶ್ರೀ ಗೌರಿಶಂಕರ ಟ್ರಾವೆಲ್ಸ್
30–7–2023 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಶನ್, ಕೋಟಿಲಿಂಗ.
28–8–2023 (7 ದಿನ): ಅಯೋಧ್ಯೆ, ಪ್ರಯಾಗ್ ರಾಜ್, ಕಾಶಿ, ಗಯಾ, ಬಾಬಾಬೈದ್ಯನಾಥ್ ಇತ್ಯಾದಿ.
24–9–2023 (13 ದಿನ): ಹರಿದ್ವಾರ, ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರಿನಾಥ್, ಇತ್ಯಾದಿ.
ವಿಮಾನ / ಬಸ್ / ಊಟ / ರೂಂ.
Mob: 9620002114

ಬೇಕಾಗಿದ್ದಾರೆ
ಟೀಮ್ ಲೀಡರ್ ಮತ್ತು ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ಇಂಗ್ಲೀಷ್, ಹಿಂದಿ) ಸ್ಥಳ–ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, ಸಂಬಳ: 8000 ರಿಂದ 11000 ರವರೆಗೆ
8150005111

ನಗರದ ಸಿಹಿ & ಖಾರ ತಿಂಡಿ ಅಂಗಡಿಯೊಂದಕ್ಕೆ
ಅಸಿಸ್ಟೆಂಟ್ ಅಕೌಂಟೆಂಟ್ ಕೌಂಟರ್ ಸೇಲ್ ಡೆಲಿವರಿ ಬಾಯ್ಸ್ (ಆಲ್‌ರೌಂಡರ್ಸ್) ಬೇಕಾಗಿದ್ದಾರೆ.
9606116663
9606116664

ITIಗೆ ಪ್ರವೇಶಾವಕಾಶ
ಎರಡು ವರ್ಷದ ITI ತರಬೇತಿಗೆ SSLC, PUC ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ NCVT ಭಾರತ ಸರ್ಕಾರದಿಂದ ಸಂಯೋಜನೆ ಗೊಂಡಿರುತ್ತದೆ.
ಬೆನಕ ಐ.ಟಿ.ಐ. ಕಾಲೇಜ್
ಕಾವೇರಿ ವೃತ್ತದ ಹತ್ತಿರ, ಡಾ|| ರಾಜ್‌ಕುಮಾರ್ ರಸ್ತೆ, ರಾಘವೇಂದ್ರ ನಗರ, ಮೈಸೂರು–29
9342123467,9141756695

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

CAUVERY ENCLAVE
MUDA APPROVED
SITES FOR SALE
Between Manipal Hospital & Narayana Hrudayalaya Hospital. Measuring 20x30, 30x40 & 40x60. Loan available from all major Banks.
Call: 89711 19292 / 96112 23444

Commercial Spaces for Rent
Ground Floor-850Sqft
First Floor-920Sqft
Suitable for Office Purpose
Prime Location
North East Corner
Devegowda Circle
Bannur - Malavalli Ring Road Junction
S.D. Jayaram Layout Mysuru
Contact: 8147821168, 7760968403

ಉಚಿತ ತರಬೇತಿ
ಮನೆಯಿಂದಲೇ ಬತ್ತಿ ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬರವಣಿಗೆಯ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಶೀಟ್‌ಗೆ 40 ರೂ.ಗಳನ್ನು ಪಡೆಯಿರಿ.
9731891409 ಮೈಸೂರು ಅಗ್ರಹಾರ.
9449774839 ಚಾಮರಾಜನಗರ

ಸ್ವ ಉದ್ಯೋಗ ಅವಕಾಶ
BUSINESS OPPERTUNITY
Network Marketing ಮೂಲಕ ಸ್ವಾವಲಂಬಿಗಳಾಗಿ ಬದುಕಲು ಭಾರತ ಪ್ರತಿಷ್ಠಿತ ಕಂಪೆನಿಯೊಂದು ಅವಕಾಶ ಕೊಡುತ್ತಿದೆ. Full Time/Time Work ಮುಖಾಂತರ ಕೆಲಸ ಮಾಡಿ ಹಣ ಗಳಿಸುವ ಅವಕಾಶವಿದೆ. ಆಸಕ್ತರು ಕೆಳಗಿನ ನಂಬರಿಗೆ ಕರೆ ಮಾಡಿ.
7406910389,9113874534

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
8861612486

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

MICROWAVE OVEN SERVICES
Indian / Imported
Call For Microwave Oven Repair
9900237315
9845963421
0821-4266495

ಸೈಟು ಮಾರಾಟಕ್ಕಿದೆ
30x60, (MUDA SITE) ಪೂರ್ವದಿಕ್ಕು, ಹಳೆಯ ವಿದ್ಯಾರಣ್ಯ ಟಾಕೀಸ್ ಹಿಂಭಾಗ, (ಕನಕದಾಸ ಹಾಸ್ಟೆಲ್ ಪಕ್ಕದಲ್ಲಿ) ವಿದ್ಯಾರಣ್ಯಪುರಂ, ಮೈಸೂರು
9448608680

ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ
ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ವಿದ್ಯಾರ್ಹತೆ SSLC, ವಯೋಮಿತಿ: 50 ವರ್ಷ, ವೇತನ : 15,000/- ESI, PF, (12 Hours Duty)
9986501873
9611064640

FOR SALE
Buy & Sell site, House, land
1) 20x30,30x40,40x60 sites in H D Kote Road and Bogadi Road
2) 30x40 and 40x60 site Dattagalli, Vijayanagar
3)50x90 West East Road Old House Jayanagar
4) 14x100 east and west road RAMAVILAS road near
9538690359,9035990359

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

V-GUARD GEYSER
BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
INDIAN FAMOUS ASTROLOGER
Mob:9036984793
ಪಂಡಿತ್: ಕೆ.ಎಸ್. ಪಣಿಕ್ಕರ್ (ಕೇರಳ)
ಜ್ಯೋತಿಷ್ಯ ವಿದ್ವಾನ್ ಶ್ರೀ ಶ್ರೀ ಎಸ್ ಕುಮಾರ್, (ಕೊಳ್ಳೇಗಾಲ)
ಇವರು ಕೇರಳದ ಕುಟ್ಟಿಚಾತನ್ ಕೊಳ್ಳೇಗಾಲದ ಕುಳ್ಳಚೌಡಿ ಅಘೋರ ಶಕ್ತಿಯಿಂದ, ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರುದೋಷ, ಇನ್ನೂ ಯಾವುದೇ ನಿಮ್ಮ ಗುಪ್ತ ಸಮಸ್ಯೆಗಳಿಗೆ ಸ್ಥಳದಲ್ಲಿಯೇ. ಪರಿಹಾರ ತಿಳಿಸುತ್ತಾರೆ.
ಖಾಯಂ ವಿಳಾಸ: ಪಡುವಾರಹಳ್ಳಿ ಸಿಗ್ನಲ್, ಭೂದೇವಿ ಫಾರ್ಮ್ ಎದುರು, ವಿನೋಬ ರಸ್ತೆ ಮೈಸೂರು–570006

WANTED
FEMALE TELECALLERS
9972255302

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9110837736

ಸೈಟು ಬೇಕಾಗಿದೆ
KHB ಇಲವಾಲದಲ್ಲಿ 20x30 ಅಳತೆಯ, ಡೈರೆಕ್ಟ್ ಓನರ್ ಮಾತ್ರ, ಕೆ.ಹೆಚ್.ಬಿ ಕೆಂಚಲಗೂಡಿನಲ್ಲಿ 20x30 ಅಳತೆಯ ಡೈರೆಕ್ಟ್ ಓನರ್ ಮಾತ್ರ, ಸಂಪರ್ಕಿಸಿ:
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9972557534

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಂತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9902914891

ಬೇಕಾಗಿದ್ದಾರೆ
ಡ್ರೈವರ್ 10 ಜನ (Bolero Pickups, ಆಕರ್ಷಕ ಸಂಬಳ) + ಊಟದ ಭತ್ಯೆ. ಮಾರ್ಕೆಟಿಂಗ್ ಮ್ಯಾನೇಜರ್ 1 (5 ವರ್ಷ Logistics ಅನುಭವ ಹೊಂದಿರಬೇಕು). ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ 1 (2 ವರ್ಷ Logistics ಹೊಂದಿರಬೇಕು). ಟೆಲಿಕಾಲರ್ (2 ಜನ) (ಕನ್ನಡ, ಇಂಗ್ಲೀಷ್, ಹಿಂದಿ ಮಾತನಾಡಲು ಬರಬೇಕು). ಡಿಜಿಟಲ್ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ 1 (5 ವರ್ಷ ಅನುಭವ ಹೊಂದಿರಬೇಕು.). ಸಂಪರ್ಕಿಸಿ:
MOVE MY GOODS (ಮೂವ್ ಮೈ ಗೂಡ್ಸ್)
Mob: 9019029036
ಅರ್ಜುನ್‌ರಾಜ್: 6362568155 (Whats app No.)

AFFIDAVIT
I, Lakshmamma, residing at Door No. 1368/A, 9th Cross, Janathanagar, Mysuru-570 022. I declare that my correct name is Lakshmamma (in my Aadhaar Card No. 8195 6591 6901 and Voter ID it is mentioned correctly as Lakshmamma), but at the time of issuing my SBI Bank Account No. 64023659085 my name was mentioned as Lakshmi. Hence I declare this in front of Notary C. Mangala, that both Lakshmamma and Lakshmi both names belong to my name and same one person.
Sd/- Lakshmamma

AFFIDAVIT
I, Sri Syed Imran Pasha, residing at Door No. 554, Srirampura Extension, T. Narasipura Town-571124, Mysuru District. Presently R/at Door No. 669, Vivekananda Nagara, Ward No. 06, T. Narasipura-571124, Mysuru District. In my passport No. Q778825, file No. 59/135 38/93, dated 23-11-1993 in front my name mentioned as Syed Abdula. The said Syed Abdulla is my father. Hence, my name mentioned in the passport may kindly read as Syed Imran Pasha, S/o Syed Abdulla. I am swearing this in front of Notary on 25-7-2023.
Sd/- Syed Imran Pasha

DOCUMENT LOST
I, Mir Mustafa Kamal, have lost my house possession certificate & allotment letter of House No. 966, 2nd Stage, Rajiv Nagar, Mysuru.
Finders please contact:
Mob: 7406686748

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಂತೂರ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಗರು, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

NISARGA ENTERPRISES
LOAN OFFICE
MOB: 8296400433, 9880436288
New Start of Business Loan
Industrial Loan, Machinery Loan, Garments Loan, Business Loan, Home Loan, Home Mortgage Loan, Site Mortgage Loan, Personal Loan 12,000/- Salary above

SITE FOR SALE
60x40 Feet, East Facing at Ahad City Mysuru. Beautiful Layout, Gaited community UGD Electricity Water Multiple gardens. Best Price Rs.1800/-Per Sqft.
9901231117

J.N.B. World
ಗ್ಯಾಸ್ ಸ್ಟೌವ್, ಗ್ಯಾಸ್ ಗೀಸರ್ ಚಿಮಿಣಿ, ಹಬ್ ಸೇಲ್ಸ್ ಮತ್ತು ಸರ್ವಿಸ್ ಹಾಗೂ ಮನೆಗಳಿಗೆ (PNG & LPG) ಗ್ಯಾಸ್ ಪೈಪ್‌ಲೈನ್ ಮಾಡಲಾಗುತ್ತದೆ.
9916168080
9731919195

WANTED
Sales Manager and Executives
Telecaller
Receptionist
Data Entry Operators
Office Assistants
9743283001

MUDA APPORVED SITE FOR SALE
30x40, (No. # 369)
East face, Park Opposite, A block, Brahmins Layout,
29.5 Lakhs
9591831115

FOR SALE
Boutique for Sale & Lease and Women's Beauty Parlour For Sale & Lease, Both in Kuvempunagar Area
8792720395

100% TEAK WOOD FACTORY FINISH DOORS
@ DEPOT RATES
10 YEARS WARRANTY
www.ssbuildmart.com
9901291267
9845426862

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 99012 91267, 98454 26862

WALK IN
For JOBS On
- Banking Process
- Medical Management

Age Limit : 18 to 45 Years
9620198701

SITE FOR SALE
1350 Sqft North Facing Site in MUDA Approved Layout in Vijayanagar, 4th Stage, (Prime Location)
For Details Contact
9483358399

ಕೆಲಸಕ್ಕೆ ಬೇಕಾಗಿದ್ದಾರೆ
ಶಾರದಾದೇವಿ ನಗರದಲ್ಲಿರುವ ಶ್ರೀ ಗುರುರಾಘವೇಂದ್ರ ಹೋಂ ನೀಡ್ಸ್ ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಕ್ಯಾಶಿಯರ್ ಮತ್ತು ಹೆಲ್ಪರ್ ಕೆಲಸಕ್ಕೆ ಆಸಕ್ತಿಯುಳ್ಳ ಹುಡುಗರು ಹಾಗೂ ಹುಡುಗಿಯರು ಬೇಕಾಗಿದ್ದಾರೆ.
Part / Full Time
9972356444

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ಡಾಕ್ಟರ್ಸ್, ಇಂಜಿನಿಯರ್ ಮತ್ತು ಎಲ್ಲಾ ವಿದ್ಯಾವಂತ ವಧುವರರಿಗೆ ನೇರ ಸಂಪರ್ಕಿಸಿ
ಡಾ. ಗುರೂಜಿ
9448229184
7899625268
Lady Receptionist ಬೇಕಾಗಿದ್ದಾರೆ. ವಿದ್ಯಾರಣ್ಯಪುರಂ ಸುತ್ತ ಮುತ್ತಲಿನವರಿಗೆ ಆದ್ಯತೆ.

HOUSE FOR RENT
KRS Main Road Gokulam, Mysuru
9900237315

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹೆಂಗಸರು/ಗಂಡಸರು ಬೇಕಾಗಿದ್ದಾರೆ. 35 ರಿಂದ 50 ವರ್ಷದವರಿಗೆ ಮೊದಲ ಆದ್ಯತೆ
ವೇತನ : 12,000 ರೂ.
7899754149

WANTED IMMIDETLY ACCOUNTANT
Prefered only Male candidate Experinced or Freshers can also apply with Basic Computer Knowldege Tally with GST.
9243505461
7624968220
0821-2547926

ಮನೆ ಭೋಗ್ಯಕ್ಕೆ ಬಾಡಿಗೆಗೆ
ಕುವೆಂಪುನಗರ ಡಿಪೋ ಹತ್ತಿರ ಅರವಿಂದನಗರ 10ನೇ ಕ್ರಾಸ್
7899109926
8073758867
9980228851

ತಕ್ಷಣ ಬೇಕಾಗಿದ್ದಾರೆ
ಕಡಕೊಳ ಮತ್ತು ತಾಂಡ್ಯ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ: 16000/-
ESI & PF ಸೌಲಭ್ಯವಿರುತ್ತದೆ.
9538567819
9620667819

ಬೇಕಾಗಿದ್ದಾರೆ
1. ರಿಸೆಪ್ಷನಿಸ್ಟ್ – 2 ಹುದ್ದೆ (M/F) (ಬೆಳಗಿನ ಪಾಳಿಗೆ ಮಾತ್ರ
ಗುಪ್ತಾ ಹೋಟೆಲ್
ಅಶೋಕ ರಸ್ತೆ, ಮೈಸೂರು
9886577795
9886166044

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ Aw Group of Company ಗೆ SSLC (Pass) PUC, ITI, Any Degree ಆಗಿರುವ ಗ್ರಾಮೀಣ+ನಗರದ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕನ್ನಡ ಬಲ್ಲವರಿಗೆ ಮೊದಲ ಆದ್ಯತೆ. (Consultancy ಅಲ್ಲ)
100% Job Confirm
ವಯೋಮಿತಿ : 18–30 ವರ್ಷ
ತಿಂಗಳಿಗೆ : 27560–31,770+ಉಚಿತ ವಸತಿ
ಭವ್ಯಗೌಡ: 9900163228, 7349699460

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC & ಮೇಲ್ಪಟ್ಟು
ಸಂಬಳ: 17000/-
ESI & PF, ಊಟ–ತಿಂಡಿ ಸೌಲಭ್ಯವಿರುತ್ತದೆ.
9620667819
9880727819

ಈ ತಕ್ಷಣ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ (Security Guard) ಗಾರ್ಡುಗಳು ತಕ್ಷಣ ಬೇಕಾಗಿದ್ದಾರೆ
7795285485
8105249880

ಬಾಡಿಗೆಗೆ ಇದೆ
ರಾಮಾನುಜಾ ರಸ್ತೆ, ಗನ್‌ಹೌಸ್ ಸರ್ಕಲ್‌ಗೆ ಸಮೀಪ ಮೊದಲನೇ ಮಹಡಿಯಲ್ಲಿ ಚಿಕ್ಕ ಕುಟುಂಬ/ಕಛೇರಿಗೆ ಸೂಕ್ತವಾದ ಮನೆ ಸಸ್ಯಹಾರಿಗಳಿಗೆ ಮಾತ್ರ
9449886322

ವೃದ್ಧರನ್ನು ಮತ್ತು ಹಾಸಿಗೆ ಹಿಡಿದ ರೋಗಿಗಳನ್ನು ಅವರ ಮನೆಯಲ್ಲಿಯೇ ಉಳಿದುಕೊಂಡು ಆರೈಕೆ ಮಾಡುವ ಅನುಭವವಿರುವ ಹೋಂ ನರ್ಸ್ ಲಭ್ಯವಿದ್ದಾರೆ.
ಸಂಪರ್ಕಿಸಿ:
8861042384

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ Helpers ಕೆಲಸ ನಿರ್ವಹಿಸಲು ಪುರುಷರು ಬೇಕಾಗಿದ್ದಾರೆ. ಒಳ್ಳೆಯ ವೇತನದೊಂದಿಗೆ ಇ.ಎಸ್.ಐ., ಪಿ.ಎಫ್ ಹಾಗೂ ಕ್ಯಾಂಟೀನ್ ಸೌಲಭ್ಯವಿರುತ್ತದೆ.
9164198619

SITE FOR SALE
Railway Badavane Goruru No.8, 40x60, South Face, 40 Ft Road, Semi Commercial, Genuine Buyer Contact. Very Near to Srirampura Ring Road
9741514776

ಅಡುಗೆ ಭಟ್ಟರು ಬೇಕಾಗಿದ್ದಾರೆ
ಮಹಿಳೆಯರ ಪಿಜಿಯಲ್ಲಿ ಅಡುಗೆ ಮಾಡಲು 30 ರಿಂದ 45 ವರ್ಷದ ನಮ್ಮಲ್ಲೆ ಉಳಿದುಕೊಳ್ಳುವಂತಹ ಮಹಿಳಾ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಬಳ 10000/-
6366141518

ವಾಸದ ಮನೆ ಭೋಗ್ಯಕ್ಕೆ/ಬಾಡಿಗೆಗೆ
2BHK ಮನೆ ಕುವೆಂಪುನಗರ, ಎಂ.ಬ್ಲಾಕ್, ಮೈಸೂರು
Independent house
9448703404
9148015648

WANTED
BSG Properties
- Telecallers 10 Nos. (F)
- House Keeping 2 nos.(F)
- HR (F)

FIXED SALARY
No Target
9008639936

ಬೇಕಾಗಿದ್ದಾರೆ
ಹೌಸ್ ಕೀಪಿಂಗ್ ಪುರುಷರು, ಹೆಂಗಸರು ಬೆಳಗಿನ ಪಾಳಿ & ರಾತ್ರಿ ಪಾಳಿಯಲ್ಲಿ ಹೋಟೆಲ್‌ಗೆ (ಲಾಡ್ಜ್) ಅಶೋಕ ರಸ್ತೆ, ಮೈಸೂರು
9845682777
9538651845

WANTED
Marketing Executives with or Without Experience with Good Communication Skill Send Bio Data. Whatsapp
9845353746

ಸಾಲ / LONS
- HOUSE / SITE PURCHASE LOAN
- CONSTRUCTION LOAN
- MORTGAGE LOAN

(Muda, Corporation & Revenue Properties
7760598705

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ದೋಸೆ ಹಾಕುವವರು ಪುರುಷರು ಬೇಕಾಗಿದ್ದಾರೆ.
ಸ್ಥಳ : ಸುಳ್ಯ
9902176566

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಪತ್ರಕರ್ತ, ಶಾಸಕರು ಸೇರಿದರೆ ತಾಲೂಕು ಅಭಿವೃದ್ಧಿ

ಪತ್ರಿಕಾ ದಿನಾಚರಣೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯ



ಹೆಚ್.ಡಿ.ಕೋಟೆ, ಜು.26– ತಾಲೂಕಿನ ಅಭಿವೃದ್ಧಿಯಲ್ಲಿ ಶಾಸಕರ ಜವಾಬ್ದಾರಿ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದ ಜವಾಬ್ದಾರಿಯನ್ನು ಪತ್ರಕರ್ತರೂ ನಿರ್ವಹಿಸುತ್ತಾರೆ. ಇಬ್ಬರೂ ಸೇರಿದರೆ ಮಾತ್ರ ತಾಲೂಕು ಅಭಿವೃದ್ಧಿಯತ್ತ ಸಾಗಲು ಸಾಧ್ಯ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಮಳಲಿ ಗ್ರಾಮದ ಡಿಸ್ಕವರಿ ವಿಲೇಜ್ ರೆಸಾರ್ಟ್‌ನಲ್ಲಿ ಎಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಪತ್ರಕರ್ತರ ಸಂಘದ ವತಿಯಿಂದ ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾವು ಮಾಡುವ ಒಳ್ಳೆಯ ಕೆಲಸಗಳನ್ನು ಗುರುತಿಸುವ ಜತೆಗೆ ತಾಲೂಕಿನಲ್ಲಿರುವ ಸಮಸ್ಯೆಗಳನ್ನೂ ನಮ್ಮ ಗಮನಕ್ಕೆ ತರುವಲ್ಲಿ ಪತ್ರಕರ್ತರು ನಿಷ್ಠೆಯಿಂದ ಕೆಲಸ ಮಾಡುತ್ತಾರೆ ಎಂದರು.

ನಾನು ಇಂದು ಎರಡನೇ ಬಾರಿ ಶಾಸಕನಾಗಿದ್ದೇನೆ ಎಂದರೆ ಅದಕ್ಕೆ ಅವರ ಸಹಕಾರವೂ ಮುಖ್ಯವಾಗಿದೆ. ಪತ್ರಕರ್ತ ಎಂಬ ಹುದ್ದೆ ಅತ್ಯಂತ ಮಹತ್ವವಾದದ್ದು, ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗದಂತೆ ಪತ್ರಿಕಾ ರಂಗಕ್ಕೂ ವಿಧಾನಸಭೆಗೆ ಬರಲು ಅವಕಾಶವಿದೆ. ಒಬ್ಬ ಸಮಾಜ ಸೇವಕನಂತೆ ಪತ್ರಕರ್ತ ಕೆಲಸ ಮಾಡುತ್ತಾನೆ ಎಂದರು.

ತಾಲೂಕಿನಲ್ಲಿ ಒಂದು ಪತ್ರಕರ್ತರ ಭವನ ವಾಗಬೇಕು ಎಂಬ ಬೇಡಿಕೆಯನ್ನು ಇಟ್ಟಿದ್ದೀರಿ. ಅದನ್ನು ಆದಷ್ಟು ಬೇಗ ಈಡೇರಿಸುವ ಪ್ರಯತ್ನ ಮಾಡುತ್ತೇನೆ. ಅಲ್ಲದೆ ರಾಜ್ಯದ ಗ್ರಾಮೀಣ ಭಾಗ ಪತ್ರಕರ್ತರಿಗೆ ಬಸ್‌ಪಾಸ್ ನೀಡಿ ಎಂಬ ಬೇಡಿಕೆಯೂ ಇದ್ದು ಅದನ್ನು ಮುಖ್ಯಮಂತ್ರಿಗಳ ಬಳಿ ಚರ್ಚಿಸುತ್ತೇನೆ ಎಂದರು.

ಬುಡಕಟ್ಟು ಸಮುದಾಯಕ್ಕೆ ಪೂರೈಕೆಯಾಗುತ್ತಿದ್ದ ಪೌಷ್ಟಿಕ ಆಹಾರವನ್ನು ವರ್ಷಪೂರ್ತಿ ನೀಡಬೇಕು ಎಂಬ ಬೇಡಿಕೆಯನ್ನು ಈಗಾಗಲೇ ಸರ್ಕಾರ ಈಡೇರಿಸಿದೆ. ಅಲ್ಲದೆ ಮೈಸೂರು– ಮಾನಂದವಾಡಿ ಮುಖ್ಯರಸ್ತೆ ನಿರ್ಮಾಣ ಮಾಡಲು ಭಾರತ್ ಮಾಲ್ ಯೋಜನೆಯಡಿ 920 ಕೋಟಿ ರೂ.ಗಳಿಗೆ ಡಿಪಿಆರ್ ಸಿದ್ಧವಾಗುತ್ತಿದೆ. ಬೇಗ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳು ಹಾಗೂ ಹಿರಿಯ ಪತ್ರಕರ್ತ ಮಂಜು ಬೀಚನಹಳ್ಳಿ ಅವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್, ಪ್ರಧಾನ ಕಾರ್ಯದರ್ಶಿ ಸುಬ್ರಮಣ್ಯ, ನಿರ್ದೇಶಕ ಎಂ.ಎಲ್.ರವಿಕುಮಾರ್, ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ ಅಧ್ಯಕ್ಷ ಕೆ. ದೀಪಕ್, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ರಾಘವೇಂದ್ರ ತಾಲೂಕು ಪತ್ರಕರ್ತರ ಸಂಘ ಅಧ್ಯಕ್ಷ ಬಿ.ಸತೀಶ್ ಆರಾಧ್ಯ, ಉಪಾಧ್ಯಕ್ಷ ಮಂಜು ಕೋಟೆ, ಕಾರ್ಯದರ್ಶಿ ಬೀಚನಹಳ್ಳಿ ಮಂಜು, ಖಜಾಂಚಿ ದೊಡ್ಡಸಿದ್ದು, ನಿರ್ದೇಶಕರಾದ ಪುರುಷೋತ್ತಮ, ಆನಂದ್, ಶರಾವಣ, ಚಿಕ್ಕಣ್ಣೇಗೌಡ, ಸುರೇಶ್, ಹಂಪಾಪುರ ನಾಗೇಶ್, ಬಸವರಾಜು, ವಾಸುಕಿ ನಾಗೇಶ್, ದಾಸೇಗೌಡ, ಜಶೀಲ, ಶ್ರೀನಿಧಿ, ನಿಂಗಣ್ಣ, ಜಿ.ರವಿಕುಮಾರ್, ರವಿ ಆರಾಧ್ಯ, ಕನ್ನಡ ಪ್ರಮೋದ್, ಚಂದ್ರು ಹಾದನೂರು, ಅನಿಲ್ ಅಂತರಸಂತೆ ಇತರರು ಹಾಜರಿದ್ದರು.

ಮೈದುಂಬಿ ಹರಿಯುತ್ತಿರುವ ಕಪಿಲೆ

ಸ್ನಾನಘಟ್ಟ, ಹದಿನಾರು ಕಾಲು ಮಂಟಪ ಮುಳುಗಡೆ



ನಂಜನಗೂಡು, ಜು.26– ಕಬಿನಿ ಜಲಾಶಯ ತುಂಬಿರುವ ಹಿನ್ನೆಲೆಯಲ್ಲಿ ಕಪಿಲಾ ನದಿಗೆ ನೀರನ್ನು ಬಿಟ್ಟಿರುವ ಕಾರಣ ಕಪಿಲೆ ಮೈದುಂಬಿ ಹರಿಯುತ್ತಿದ್ದಾಳೆ. ಇದರಿಂದ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟ ಸಂಪೂರ್ಣವಾಗಿ ಮುಳುಗಡೆಯಾಗಿದೆ. ಜೊತೆಗೆ ಐತಿಹಾಸಿಕ ಹದಿನಾರು ಕಾಲು ಮಂಟಪ ಭಾಗಶಃ ಮುಳುಗಡೆಯಾಗಿದೆ.

ನದಿ ಹರಿವಿನ ಪ್ರಮಾಣದಲ್ಲಿ ಇನ್ನಷ್ಟು ಹೆಚ್ಚಾದಲ್ಲಿ ನದಿ ತೀರದ ಪ್ರದೇಶಗಳಲ್ಲಿ ಬೆಳೆ ಮತ್ತು ಮನೆಗಳು ಜಲಾವೃತವಾಗುವ ಆತಂಕ ಸಾರ್ವಜನಿಕರಲ್ಲಿ ಎದುರಾಗಿದೆ.

ಮೈದುಂಬಿ ಹರಿಯುತ್ತಿರುವ ಕಪಿಲೆಯನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗರು ನಗರದ ಹೆಜ್ಜಿಗೆ ಸೇತುವೆ ಮತ್ತು ಶ್ರೀಕಂಠೇಶ್ವರ ಸ್ನಾನಘಟ್ಟದ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು.

ಕೇರಳದ ವೈನಾಡಿನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಹೆಚ್.ಡಿ. ಕೋಟೆ ತಾಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ 21 ಸಾವಿರ ಕ್ಯೂಸೆಕ್ಸ್ ನೀರನ್ನು ಹೊರ ಬಿಡಲಾಗುತ್ತಿರುವುದರಿಂದ ಕಪಿಲೆ ಮೈದುಂಬಿ ಹರಿಯುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಮೈಸೂರು ತಾಲೂಕು ಮಾರ್ಬಳ್ಳಿ ಗ್ರಾಪಂ ಕಾಂಗ್ರೆಸ್ ತೆಕ್ಕೆಗೆ

ಅಧ್ಯಕ್ಷರಾಗಿ ಲಕ್ಷ್ಮಿ ಚಿಕ್ಕಣ್ಣ, ಉಪಾಧ್ಯಕ್ಷರಾಗಿ ಕೆ.ನಾಗರಾಜು ಅವಿರೋಧ ಆಯ್ಕೆ



ಮೈಸೂರು: ಜಯಪುರ ಹೋಬಳಿಯ ಮಾರ್ಬಳ್ಳಿ ಗ್ರಾಮ ಪಂಚಾಯಿತಿಗೆ ಎರಡನೇ ಅವಧಿಗೆ ಅಧ್ಯಕ್ಷರಾಗಿ ಲಕ್ಷ್ಮಿ ಚಿಕ್ಕಣ್ಣ, ಉಪಾಧ್ಯಕ್ಷರಾಗಿ ಕೆ.ನಾಗರಾಜು ಅವಿರೋಧವಾಗಿ ಆಯ್ಕೆಯಾದರು.

ಮಾರ್ಬಳ್ಳಿ ಗ್ರಾಮ ಪಂಚಾಯಿತಿಗೆ ಅಧ್ಯಕ್ಷ ಸ್ಥಾನ ಎಸ್ಟಿ ಮಹಿಳೆಗೆ ಮೀಸಲಾಗಿದ್ದು, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಬುಧವಾರ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಟಿ.ಕಾಟೂರು ಗ್ರಾಮದ ಸದಸ್ಯೆ ಲಕ್ಷ್ಮಿ ಚಿಕ್ಕಣ್ಣ ಮಾತ್ರ ಅಧ್ಯಕ್ಷ ಸ್ಥಾನಕ್ಕೆ, ಉಪಾಧ್ಯಕ್ಷ ಸ್ಥಾನಕ್ಕೆ ಮಾರ್ಬಳ್ಳಿಹುಂಡಿ ಗ್ರಾಮದ ಕೆ.ನಾಗರಾಜು ನಾಮಪತ್ರ ಸಲ್ಲಿಸಿದ್ದರು. ಅಧ್ಯಕ್ಷ ಸ್ಥಾನಕ್ಕೆ ಲಕ್ಷ್ಮಿ ಚಿಕ್ಕಣ್ಣ ಅವರನ್ನು ಸದಸ್ಯ ದೇವರಾಜ್ ಟಿ.ಕಾಟೂರು ಸೂಚಿಸಿ ಅನುಮೋದಿಸಿದರು.

ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದು, ಮಾರ್ಬಳ್ಳಿಹುಂಡಿ ಕೆ. ನಾಗರಾಜು ಅವರನ್ನು ಮಹದೇವನಾಯಕ ಉಪಾಧ್ಯಕ್ಷ ಸ್ಥಾನಕ್ಕೆ ಸೂಚಿಸಿ, ಅನುಮೋದಿಸಿದರು. ಕಾಂಗ್ರೆಸ್ ಬೆಂಬಲಿತ 15 ಜನ ಸದಸ್ಯರು ಹಾಜರಿದ್ದರು. ಜೆಡಿಎಸ್ ಬೆಂಬಲಿತ 7 ಸದಸ್ಯರು ಗೈರು ಹಾಜರಾಗಿದ್ದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಗ್ರಾಮ ಪಂಚಾಯಿತಿ ಸದಸ್ಯರಾದ ದೇವರಾಜ್ ಟಿ.ಕಾಟೂರು, ಪುಟ್ಟಸ್ವಾಮಿ, ಜ್ಯೋತಿ, ಮಾರ್ಬಳ್ಳಿಯ ದೇವರಾಜು, ನಿಂಗನಾಯಕ, ಮಹದೇವನಾಯಕ, ಪದ್ಮಶಿವಣ್ಣ, ರತ್ನಮ್ಮ, ಮಾರ್ಬಳ್ಳಿಹುಂಡಿ, ನಾಗರಾಜು, ಬಸಮ್ಮ, ಶಿವಮ್ಮ, ಮಾಲಮ್ಮ, ಅರಸೀನಕೆರೆ ಶಿವಮ್ಮ, ಪಿಡಿಓ ಕುಮಾರಸ್ವಾಮಿ, ಕಾರ್ಯದರ್ಶಿ ಮಹೇಶ್ ಅಭಿನಂದಿಸಿದರು.

ಮುಖಂಡರಾದ ಕೆ.ಮರಿಗೌಡ, ತಾಪಂ ಮಾಜಿ ಸದಸ್ಯರಾದ ಎಂ.ಎಸ್.ಎಸ್. ಕುಮಾರ್, ಎಂ.ಎಚ್.ರಾಜಶೇಖರಮೂರ್ತಿ, ಕೇಶವಮೂರ್ತಿ, ಜೆ.ಮರುಚ್ಚನಾಯಕ, ಸಿ.ಸ್ವಾಮಿ, ಆರ್.ಗೋವಿಂದ, ಸ್ವಾಮಿನಾಯಕ, ಹನುಮನಾಯಕ, ಕೆ.ಗೋವಿಂದ, ಎಸ್.ಸಿದ್ದರಾಜು, ಮರಿಯಪ್ಪ, ಸುತ್ತೂರು ನಾಗರಾಜು, ಪಾಂಡು, ಅಂಕನಾಯಕ, ಮಾರ್ಬಳ್ಳಿ ಶಿವಣ್ಣ, ನಾಗಣ್ಣ, ಕಾಳಸ್ವಾಮಿ, ಮರಿಸ್ವಾಮಿ, ಲೋಕೇಶ್ ಎಲ್ಲಪ್ಪ, ನೀಲಕಂಠಪ್ಪ, ಮಾರ್ಬಳ್ಳಿಹುಂಡಿ ಸ್ವಾಮಿ, ಅಜೇಯ್, ಕೆಂಚೇಗೌಡ, ಹುಚ್ಚೇಗೌಡ, ಸಿದ್ದರಾಮೇಗೌಡ, ಸ್ವಾಮಿಗೌಡ, ಅರಸೀನಕೆರೆ ಕುಮಾರ್, ಕೆಂಪರಾಜು, ಕುಮಾರ ಉಪಸ್ಥಿತರಿದ್ದರು.

ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ನನ್ನನ್ನು ನೇಮಕ ಮಾಡಿ

ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಮನವಿ



ತಿ.ನರಸೀಪುರ, ಜು.26– ವರುಣ ಹಾಗೂ ತಿ.ನರಸೀಪುರ ವಿಧಾನಸಭಾ ಕ್ಷೇತ್ರಗಳಲ್ಲಿ 36 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತನಾಗಿ ಪಕ್ಷದ ಸಂಘಟನೆಗಾಗಿ ದುಡಿಯುತ್ತಾ ಬಂದಿರುವ ನನ್ನನ್ನು ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷನನ್ನಾಗಿ ಮಾಡುವ ಮೂಲಕ ಜನಸೇವೆ ಮಾಡಲು ಅವಕಾಶ ಕಲ್ಪಿಸಿಕೊಡುವಂತೆ ತಾ.ಪಂ ಮಾಜಿ ಉಪಾಧ್ಯಕ್ಷ ಹಾಗೂ ಕಾಂಗ್ರೆಸ್ ಹಿರಿಯ ಮುಖಂಡ ಬಿ. ಮರಯ್ಯ ಮನವಿ ಮಾಡಿದ್ದಾರೆ.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ 36 ವರ್ಷಗಳ ಕಾಲ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಸ್ಥಾನ ಕಲ್ಪಿಸಿಕೊಡುವಂತೆ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಡಾ. ಎಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಲಿದ್ದೇನೆ ಎಂದರಲ್ಲದೆ ತಮಗೆ ಸ್ಥಾನ ದೊರಕುವ ವಿಶ್ವಾಸ ವ್ಯಕ್ತಪಡಿಸಿದರು.

ಮಾದಿಗ ಜನಾಂಗದ ಮುಖಂಡನಾಗಿರುವ ನಾನು ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಹಾಗೂ ತಿ.ನರಸೀಪುರ ಕ್ಷೇತ್ರದಲ್ಲಿ ಡಾ.ಎಚ್.ಸಿ.ಮಹದೇವಪ್ಪರವರ ಗೆಲುವಿಗೆ ಶಕ್ತಿ ಮೀರಿ ಶ್ರಮಿಸಿದ್ದೇನೆ. 1986 ರಲ್ಲಿ 2 ಬಾರಿ ಮಂಡಲ ಪಂಚಾಯ್ತಿ ಗ್ರಾಪಂಯಲ್ಲಿ 3 ಬಾರಿ ಸದಸ್ಯನಾಗಿ ಹಾಗೂ ತಾಪಂ ಉಪಾಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೇನೆ. ಜೊತೆ ಜೊತೆಗೆ ಎರಡೂ ಕ್ಷೇತ್ರದಲ್ಲೂ ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಸಿದ್ದರಾಮಯ್ಯ ಅವರು ಬಳ್ಳಾರಿಗೆ ಪಾದಯಾತ್ರೆ ಮಾಡಿದ ಸಂದರ್ಭ ಅವರೊಂದಿಗೆ ಬಳ್ಳಾರಿವರೆಗೂ ಹೆಜ್ಜೆಹಾಕಿದ್ದೇನೆ.

ವರುಣ, ತಿ.ನರಸೀಪುರ ಕ್ಷೇತ್ರದಲ್ಲಿ ನಡೆಯುವ ಕಾಂಗ್ರೆಸ್ ಪಕ್ಷದ ಎಲ್ಲ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಪಕ್ಷನಿಷ್ಠೆ ತೋರುತ್ತಾ ಬಂದಿದ್ದೇನೆ. 2022ರಲ್ಲಿ ಕೊರೊನಾ ಮಹಾಮಾರಿ ಮಾರಕ ರೋಗದ ವೇಳೆ ಆಗಿದ್ದ ಲಾಕ್‌ಡೌನ್ ವೇಳೆ ವಾರ್ಡಿನ ಜನರಿಗೆ ಧವಸ–ಧಾನ್ಯ ಹಾಗೂ ಅಗತ್ಯ ಮೆಡಿಕಲ್ ಕಿಟ್ ನೀಡಿ ಕಷ್ಟ–ಸುಖಕ್ಕೆ ಸ್ಪಂದಿಸಿದ್ದೇನೆ. ಸತತವಾಗಿ 35 ವರ್ಷಗಳಿಂದಲೂ ನಿರ್ಗತಿಕರಿಗೆ ಮನೆ, ವೃದ್ಧಾಪ್ಯ ವೇತನ, ವಿಧವಾ ವೇತನ, ಪಡಿತರ ಚೀಟಿ ಹಾಗೂ ಗ್ರಾಮದ ರಸ್ತೆ ಚರಂಡಿ ಹಾಗೂ ಮೂಲಸೌಕರ್ಯಗಳನ್ನು ಒದಗಿಸಿಕೊಡುವ ಮೂಲಕ ಗ್ರಾಮದ ಅಭಿವೃದ್ಧಿಗೂ ಶ್ರಮ ಹಾಕಿದ್ದೇನೆ ಎಂದರು.



ಟಿ.ನರಸೀಪುರ ತಾಲೂಕಿನ ಯಾಕನೂರು ಗ್ರಾಮದ. ಕಬ್ಬು ಬೆಳೆಗಾರರ ಸಂಘದ ತಾಲೂಕು ಸಂಘಟನಾ ಕಾರ್ಯದರ್ಶಿ ರಾಜೇಶ್ ಅವರು ಶ್ರೀರಂಗಪಟ್ಟಣ ತಾಲೂಕು ಅರಕೆರೆ ಗ್ರಾಮದಲ್ಲಿ ನಡೆದ ರಾಜ್ಯಮಟ್ಟದ ಕರುಗಳ ಚಕ್ಕಡಿ ಜೋಡಿ ಗಾಡಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ವಿಶೇಷವೇನೆಂದರೆ ನೂರು ಜೊತೆ ಕರುಗಳ ರೇಸ್‌ನಲ್ಲಿ ದ್ವಿತೀಯ ಸ್ಥಾನ ಪಡೆದ ಟಿ.ನರಸೀಪುರ ತಾಲೂಕಿಗೆ ರೈತ ಬಾಂಧವರಿಗೆ ಹೆಮ್ಮೆಯ ವಿಚಾರವಾಗಿದೆ.

ಗೃಹಲಕ್ಷ್ಮಿಯಲ್ಲಿ ಸ್ವಾರಸ್ಯಕರ ಪ್ರಸಂಗ

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಫೋಟೋ ಕಂಡು, ಅದು ತೆಗೆದು ನನ್ನ ಫೋಟೋ ಹಾಕಿ, ನಾನು ಬಡವಿ ಎಂದ ಮಹಿಳೆ

ಪಿರಿಯಾಪಟ್ಟಣ, ಜು.26– ರಾಜ್ಯ ಸರ್ಕಾರದ ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿಗೆ ಅರ್ಜಿ ಸಲ್ಲಿಸುವ ವೇಳೆ ಸ್ವಾರಸ್ಯಕರವಾದ ಘಟನೆಯೊಂದು ಸಂಭವಿಸಿದ್ದು, ಮಹಿಳೆಯೊಬ್ಬರು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಫೋಟೋ ತೆಗೆದು ತನ್ನ ಫೋಟೋ ಹಾಕುವಂತೆ ಒತ್ತಾಯಿಸಿದ ಪ್ರಸಂಗ ಜರುಗಿದೆ.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಸೈಬರ್ ಕೇಂದ್ರವೊಂದರಲ್ಲಿ ಗೃಹಲಕ್ಷ್ಮಿಗೆ ಅರ್ಜಿ ಸಲ್ಲಿಸಲು ಮಹಿಳೆಯರು ಬಂದಿದ್ದರು. ಅದರಲ್ಲಿ ಮಹಿಳೆಯೊಬ್ಬರು ಅರ್ಜಿಯ ಮೇಲ್ಭಾಗದಲ್ಲಿ ಬರುವ ಫೋಟೋ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ನೋಡಿ, ಈ ಫೋಟೋ ನನ್ನದಲ್ಲ ಯಾರದೋ ಬೇರೆ ಮಹಿಳೆಯ ಫೋಟೋ ಹಾಕಿದ್ದೀರಿ. ಅದನ್ನು ತೆಗೆದು ನನ್ನ ಫೋಟೋ ಹಾಕಿ ಎಂದು ಪಟ್ಟು ಹಿಡಿದರು. ಇದರಿಂದ ನನಗೆ ಬರುವ ದುಡ್ಡು ಬೇರೆ ಮಹಿಳೆಗೆ ಹೋಗುತ್ತದೆ. ನಾನು ಬಡವಿ ಆ ಫೋಟೋ ನೋಡಿದರೆ ಯಾರೋ ಶ್ರೀಮಂತರಂತೆ ಕಾಣುತ್ತಿದ್ದಾರೆ. ಆದ್ದರಿಂದ ದಯಮಾಡಿ ನನ್ನ ಫೋಟೋ ಹಾಕಿ ಕೊಡಿ ಎಂದು ಮಹಿಳೆ ಒತ್ತಾಯಿಸಿದರು. ಸೈಬರ್ ಸೆಂಟರ್‌ನವರು ಆಕೆಗೆ ಅದು ಸಚಿವರ ಫೋಟೋ ಎಂದು ಅರ್ಥ ಮಾಡಿಸಲು ಯತ್ನಿಸಿದರೂ ಪ್ರಯೋಜನವಾಗಲಿಲ್ಲ.

ಆಕೆಯ ಮುಗ್ಧತೆ ಕಂಡ ಸಾರ್ವಜನಿಕರು ಆ ಮಹಿಳೆಗೆ ಅದು ಸಚಿವರ ಫೋಟೋ. ಅದಕ್ಕೂ ನಿಮಗೂ ಸಂಬಂಧವಿಲ್ಲ ಎಂದು ತಿಳುವಳಿಕೆ ಹೇಳಿ ಸಮಾಧಾನ ಪಡಿಸಿದರು. ಇದರಿಂದ ಸೈಬರ್ ಕೇಂದ್ರಕ್ಕೆ ಅರ್ಜಿ ಸಲ್ಲಿಸಲು ಬಂದಿದ್ದ ಜನರಲ್ಲಿ ಕೆಲವರಿಗೆ ಮನರಂಜನೆಯಾಗಿ ಕಂಡರೆ ಇನ್ನು ಕೆಲವರು ಮುಗ್ಧತೆ ಕಂಡು ಮರುಕ ವ್ಯಕ್ತಪಡಿಸಿದರು.

ಚಿಕ್ಕಕವಲಂದೆ ಗ್ರಾಪಂ ಸದಸ್ಯರಾಗಿ ಪಾರ್ವತಮ್ಮ ಆಯ್ಕೆ



ನಂಜನಗೂಡು, ಜು.26– ತಾಲೂಕಿನ ಚಿಕ್ಕಕವಲಂದೆ ಗ್ರಾಮದ ನೂತನ ಗ್ರಾಪಂ ಸದಸ್ಯರಾಗಿ ಪಾರ್ವತಮ್ಮ ಆಯ್ಕೆಯಾದರು. ಈ ಹಿಂದೆ ಗ್ರಾಪಂ ಸದಸ್ಯರಾಗಿದ್ದ ಶಿವಲೀಲಾ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಭಾನುವಾರ ಚುನಾವಣೆ ನಡೆಸಲಾಗಿತ್ತು. ಚುನಾವಣೆಯಲ್ಲಿ ಚೈತ್ರ ಮತ್ತು ಪಾರ್ವತಮ್ಮ ಸ್ಪರ್ಧಿಸಿದ್ದರು.

ಈ ಸಂಬಂಧ ಜು.26ರ ಬುಧವಾರ ನಗರದ ತಹಸೀಲ್ದಾರ್ ಕಚೇರಿಯಲ್ಲಿ ಮತ ಎಣಿಕೆ ನಡೆಸಲಾಯಿತು. ಪಾರ್ವತಮ್ಮ 441 ಮತಗಳನ್ನು ಪಡೆದು ವಿಜಯಶಾಲಿಯಾದರೆ. ಚೈತ್ರ 359 ಮತಗಳನ್ನು ಪಡೆದು ಸೋಲು ಅನುಭವಿಸಿದರು. ಚುನಾವಣಾಧಿಕಾರಿಯಾಗಿ ಮಹದೇವಪ್ರಸಾದ್ ಕಾರ್ಯನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಮಹೇಂದ್ರ, ಮುಖಂಡರಾದ ಸಿದ್ದನಾಯಕ, ಸುರೇಶ, ಗುರುಸ್ವಾಮಿ, ಮಹೇಶ, ಸಿ.ಎಸ್.ಮಹದೇವಸ್ವಾಮಿ, ನಾಗ ನಾಯಕ, ಮಂಜು, ಮಹದೇವಮ್ಮ ಇದ್ದರು.

ಮುಂಜನಹಳ್ಳಿ ಗ್ರಾಪಂ ಜೆಡಿಎಸ್ ತೆಕ್ಕೆಗೆ

ಅಧ್ಯಕ್ಷರಾಗಿ ಶಿಲ್ಪಶ್ರೀ, ಉಪಾಧ್ಯಕ್ಷರಾಗಿ ಶೋಭಾ ಆಯ್ಕೆ



ಭೇರ್ಯ, ಜು.26– ಸಾಲಿಗ್ರಾಮ ತಾಲೂಕಿನ ಮುಂಜನಹಳ್ಳಿ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಶಿಲ್ಪಶ್ರೀ ಅನೀಫ್ ಕುಮಾರ್, ಉಪಾಧ್ಯಕ್ಷರಾಗಿ ಶೋಭಾ ದಿನೇಶ್ ಅವಿರೋಧವಾಗಿ ಆಯ್ಕೆಯಾದರು.

ಸರ್ಕಾರ ಎರಡನೇ ಅವಧಿಗೆ ಮೀಸಲಾತಿ ನಿಗದಿಪಡಿಸಿದ್ದು, ಮುಂಜನಹಳ್ಳಿ ಗ್ರಾಪಂ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಹಾಗೂ ಉಪಾಧ್ಯಕ್ಷ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಶಿಲ್ಪಶೀ ಅನೀಫ್ ಕುಮಾರ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶೋಭಾ ದಿನೇಶ್ ಮಾತ್ರ ನಾಮಪತ್ರ ಸಲ್ಲಿಸಿದ್ದು ಬೇರೆ ಯಾರೂ ಸಲ್ಲಿಸದೇ ಇದ್ದುದರಿಂದ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಶುಸಂಗೋಪನೆ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಮಂಜುನಾಥ್ ಪ್ರಕಟಿಸಿದರು. ಪಿಡಿಓ ಪ್ರತಾಪ್ ಸಹಕರಿಸಿದರು. ಚುನಾವಣೆಯಲ್ಲಿ 16 ಸದಸ್ಯರ ಪೈಕಿ 12 ಸದಸ್ಯರು ಹಾಜರಾಗಿದ್ದು, ನಾಲ್ಕು ಸದಸ್ಯರು ಗೈರಾಗಿದ್ದರು.

ಜೆಡಿಎಸ್ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಗ್ರಾಪಂ ಸದಸ್ಯರಾದ ರಾಮೇಗೌಡ, ಚಂದ್ರೇಗೌಡ, ಸತೀಶ್, ಉಮಾ ಮಹದೇವ್, ಶಶಿಕಲಾರವಿ, ದೇವಕಮ್ಮ ಶಿವಣ್ಣನಾಯಕ, ಸ್ವಾಮಯ್ಯ, ಜಯಮ್ಮ ನಾಗರಾಜಶೆಟ್ಟಿ, ಗ್ರಾ.ಪಂ ಮಾಜಿ ಅಧ್ಯಕ್ಷ ಅನೀಫ್ ಕುಮಾರ್, ಮಾಜಿ ಉಪಾಧ್ಯಕ್ಷ ಸಣ್ಣರಾಮೇಗೌಡ, ಕೆಂಚನಹಳ್ಳಿಮಹದೇವ್, ಗೇರದಡ ರವಿಕುಮಾರ್, ಜೆಡಿಎಸ್ ಮುಖಂಡರಾದ ಚಿದಂಬರನಾಯಕ, ಚೆಲುವರಾಜು, ಸ್ವಾಮೀಗೌಡ, ಮಿರ್ಲೆ ಕಿಶೋರ್, ಮಹೇಶ್ ನೂತನ ಅಧ್ಯಕ್ಷೆ, ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ.
ಸ್ಕ್ರೀನ್ 4	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ.
ಸ್ಕ್ರೀನ್ 2	ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಹಿಡಿಂಬ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೊಲೈ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಓನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡಾನ್ ಕುಮಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾವೀರನ್ (ತ)	4 ಪ್ರದರ್ಶನಗಳು
ಸಂಗಂ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ಲಿಡೋ	
ಬೇಬಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಹಿಡಿಂಬ (ತೆ)	4 ಪ್ರದರ್ಶನಗಳು
ಪ್ರಭಾ	
ಮಧುರಕಾವ್ಯ (ಕ)	4 ಪ್ರದರ್ಶನಗಳು

ಮಣಿಪುರದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ಹುಣಸೂರಲ್ಲಿ ಪ್ರತಿಭಟನೆ



ಹುಣಸೂರು, ಜು.26– ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆ, ಬುಡಕಟ್ಟು ಕೃಷಿಕರ ಸಂಘ, ಆದಿವಾಸಿ ಮಹಿಳಾ ಸಂಘ, ದಲಿತ ಸಂಘರ್ಷ ಸಮಿತಿ, ಡೀಡ್ ಸಂಸ್ಥೆ ಹಾಗೂ ಇನ್ನಿತರ ಪ್ರಗತಿಪರ ಸಂಘಟನೆಗಳು ನಗರದ ಸಂವಿಧಾನ ವೃತ್ತದಲ್ಲಿ ಮಣಿಪುರದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಹೀನ ಕೃತ್ಯವನ್ನು ಖಂಡಿಸಿ ಧರಣಿ ನಡೆಸಿದವು.

ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದ ನವನಿರ್ಮಾಣ ವೇದಿಕೆಯ ಹರಿಹರ ಆನಂದಸ್ವಾಮಿ ನಾಲ್ಕು ತಿಂಗಳಿಂದ ನಡೆಯುತ್ತಿರುವ ಹಿಂಸಾಚಾರವನ್ನು ತಡೆದು ಶಾಂತಿ ಹಾಗೂ ಸಾಮರಸ್ಯ ಸ್ಥಾಪಿಸುವಲ್ಲಿ ಮಣಿಪುರ ಸರ್ಕಾರ ವಿಫಲವಾಗಿದೆ. ಕೇಂದ್ರ ಸರ್ಕಾರವು ಕೂಡ ಕ್ರಮವಹಿಸದೆ ಜಾಣ ಕಿವುಡು ಪ್ರದರ್ಶಿಸುತ್ತಿದೆ. ಕೂಡಲೇ ರಾಷ್ಟ್ರಪತಿಗಳು ಮಧ್ಯ ಪ್ರವೇಶಿಸಿ ಶಾಂತಿ ಕಾಪಾಡಲು ಕ್ರಮವಹಿಸಬೇಕೆಂದು ರಾಜ್ಯಪಾಲರ ಮೂಲಕ ರಾಷ್ಟ್ರಪತಿಗಳಿಗೆ ಮನವಿಯನ್ನು ಇಂದು ಹುಣಸೂರು ಉಪವಿಭಾಗಾಧಿಕಾರಿಗಳ ಮುಖಾಂತರ ಸಲ್ಲಿಸಲಾಗಿದೆ ಎಂದರು.

ಆದಿವಾಸಿ ಮಹಿಳಾ ಪ್ರತಿನಿಧಿ ಲಕ್ಷ್ಮಿ ಮಾತನಾಡಿ, ಎಲ್ಲರೂ ತಾಯಿ ಹೊಟ್ಟೆಯಲ್ಲೆ ಹುಟ್ಟುವುದು. ಇಂಥ ತಾಯಿ ಸಮಾನವಾದ ಹೆಣ್ಣು ಮಕ್ಕಳನ್ನು ಕ್ರೂರಿಗಳು ಬೆತ್ತಲೆ ಮಾಡಿ ಮೆರವಣಿಗೆ ನಡೆಸಿ ಹೀನಕೃತ್ಯವೆಸಗಿರುವವರ ಮೇಲೆ ಮಣಿಪುರ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಕ್ರಮ ಕೈಗೊಳ್ಳದಿರುವುದು ಇಡೀ ದೇಶಕ್ಕೆ ಅವಮಾನ ಎಂದರು.

ಆದಿಜಾಂಬವ ಸಂಘದ ಶಿವಣ್ಣ, ಬುಡಕಟ್ಟು ಕೃಷಿಕರ ಸಂಘದ ಪಿ.ಕೆ.ರಾಮು, ಪಿರಿಯಾಪಟ್ಟಣದ ಆದಿವಾಸಿ ಮುಖಂಡ ಬಸಪ್ಪ, ನವನಿರ್ಮಾಣ ವೇದಿಕೆಯ ದರ್ಶನ್, ದಸಂಸ ದೇವೇಂದ್ರ, ಸ್ವಾಮಿ, ಗಜೇಂದ್ರ ಮುಂತಾದವರು ಮಾತನಾಡಿದರು.

ಒಂದು ಗಂಟೆಯ ಕಾಲ ಧರಣಿ ನಡೆಸಿ ಅಲ್ಲಿಂದ ಪಾದಯಾತ್ರೆಯಲ್ಲಿ ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಅವರಿಗೆ ಹಾಗೂ ತಾಲೂಕು ದಂಡಾಧಿಕಾರಿ ಡಾ.ಅಶೋಕ್ ಅವರ ಮೂಲಕ ರಾಜ್ಯಪಾಲರಿಗೆ ಹಾಗೂ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಡೀಡ್ ಮುಖ್ಯಸ್ಥ ಡಾ.ಎಸ್.ಶ್ರೀಕಾಂತ್, ಆದಿವಾಸಿ ಮಹಿಳಾ ಸಂಘದ ಅಧ್ಯಕ್ಷೆ ಗಿರಿಜಾ, ಲಕ್ಷ್ಮಿ, ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಪಿ.ಕೆ.ರಾಮು, ಜಯಪ್ಪ, ವಿಠಲ್, ಬೊಮ್ಮಿ ಹಾಗೂ ದಲಿತ ಸಂಘರ್ಷ ಸಮಿತಿಯ ನಿಂಗರಾಜು ಮಲ್ಲಾಡಿ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ 100ಕ್ಕೂ ಹೆಚ್ಚು ಧರಣಿನಿರತರು ಹಾಜರಿದ್ದರು.

ದಿ.ಧ್ರುವನಾರಾಯಣ್ ಜನ್ಮದಿನ ಅಂಗವಾಗಿ ಉದ್ಯೋಗ ಮೇಳ



ನಂಜನಗೂಡು: ಮಾಜಿ ಸಂಸದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ದಿವಂಗತ ಆರ್.ಧ್ರುವನಾರಾಯಣ್ ಅವರ 62ನೇ ಹುಟ್ಟುಹಬ್ಬದ ಸ್ಮರಣಾರ್ಥ ಜು.30 ರಂದು ನಗರದ ಶಿವರಾತ್ರೀಶ್ವರ ಮಂಗಳ ಮಂಟಪದಲ್ಲಿ ಬೃಹತ್ ಉದ್ಯೋಗ ಮೇಳ ಹಾಗೂ ಜು.31 ರಂದು ನಗರದ ಬೈಪಾಸ್ ರಸ್ತೆಯಲ್ಲಿರುವ ಮಹದೇಶ್ವರ ಪ್ಯಾಲೆಸ್‌ನಲ್ಲಿ ಬೃಹತ್ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ.

ಶಾಸಕ ದರ್ಶನ್ ಧ್ರುವನಾರಾಯಣ್ ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ನನ್ನ ತಂದೆ ದಿ.ಆರ್.ಧ್ರುವನಾರಾಯಣ್ ಅವರು ಎಂದು ಕೂಡ ತಮ್ಮ ಹುಟ್ಟುಹಬ್ಬವನ್ನು ಆಡಂಬರವಾಗಿ, ವಿಜೃಂಭಣೆಯಿಂದ ಆಚರಿಸಿಕೊಂಡವರಲ್ಲ, ಬದಲಾಗಿ ಕಾರ್ಯಕರ್ತರ ನಡುವೆ ಸಮಾಜಮುಖಿ ಕಾರ್ಯದೊಂದಿಗೆ ಸರಳವಾಗಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದರು. ಜೊತೆಗೆ ಧ್ರುವನಾರಾಯಣ್ ಅವರಿಗೆ ಯುವಕರನ್ನು ಬೆಳೆಸಬೇಕು ಎಂಬ ಹಂಬಲವಿತ್ತು. ಅವರ ಸಮಾಜ ಸೇವೆ ಕಾರ್ಯಗಳನ್ನು ಮುಂದು ವರಿಸುವ ಸಲುವಾಗಿ ಧ್ರುವನಾರಾಯಣ್ ಅಭಿಮಾನಿ ಬಳಗದ ವತಿಯಿಂದ ಜು. 30ರ ಭಾನುವಾರದಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದರು.

ಈ ಉದ್ಯೋಗ ಮೇಳದಲ್ಲಿ ಸುಮಾರು ನೂರಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, ವರುಣ ಹಾಗೂ ನಂಜನಗೂಡು ಕ್ಷೇತ್ರದ ಸಾವಿರಾರು ಯುವಕರಿಗೆ ಉದ್ಯೋಗ ಸಿಗುವ ಮೂಲಕ ಈ ಭಾಗದಲ್ಲಿ ಹೆಚ್ಚಾಗಿರುವ ನಿರುದ್ಯೋಗ ಸಮಸ್ಯೆ ಸ್ವಲ್ಪಮಟ್ಟಿಗೆ ಕಡಿಮೆಯಾಗಲಿದೆ ಎಂದರು.

ಜು.31ರಂದು ಧ್ರುವನಾರಾಯಣ್ ಅವರ ಹುಟ್ಟುಹಬ್ಬದ ಅಂಗವಾಗಿ ನಗರದ ಬೈಪಾಸ್ ರಸ್ತೆಯಲ್ಲಿರುವ ಮಹದೇಶ್ವರ ಪ್ಯಾಲೇಸ್‌ನಲ್ಲಿ ಬೃಹತ್ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ. ಜೊತೆಗೆ ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಚಂದ್ರೋದಯ ಕಲ್ಯಾಣ ಮಂಟಪದಲ್ಲಿ ಬೃಹತ್ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಗಿದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಶ್ರೀಕಂಠ ನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಯುವ ಕಾಂಗ್ರೆಸ್ ಅಧ್ಯಕ್ಷ ಅಶೋಕ್, ಮುಖಂಡರಾದ ನಾಗರಾಜು, ಸತೀಶ್, ಹಾಡ್ಯ ಜಯರಾಮು, ಹಂಡುವಿನಹಳ್ಳಿ ಪರಶಿವಮೂರ್ತಿ, ಅಜಯ್, ರವಿ, ರಂಗರಾಜು, ಪ್ರಶಾಂತ್, ಇದ್ದರು.

ಆಹಾರ ಧಾನ್ಯ, ವೈದ್ಯಕೀಯ ಸೌಲಭ್ಯಕ್ಕೆ ಪ್ರತ್ಯೇಕ ಪಡಿತರ ಚೀಟಿ

ಬೆಂಗಳೂರು, ಜು.26(ಕೆಎಂಶಿ)–ಆಹಾರ ಧಾನ್ಯ ಹಾಗೂ ವೈದ್ಯಕೀಯ ಸೌಲಭ್ಯಕ್ಕೆ ಪ್ರತ್ಯೇಕವಾಗಿ ಪಡಿತರ ಚೀಟಿ ನೀಡಲಾಗುವುದು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವೈದ್ಯಕೀಯ ಮತ್ತು ಇತರೆ ಸೌಲಭ್ಯಕ್ಕಾಗಿ ಬಿಪಿಎಲ್ ಪಡಿತರ ಚೀಟಿ ಬಯಸುತ್ತಿದ್ದಾರೆ. ಅಂಥವರಿಗೆ ಅಕ್ಕಿ ಅವಶ್ಯಕವಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ವಿಭಾಗ ಮಾಡಲು ತೀರ್ಮಾನ ಮಾಡಿದ್ದೇವೆ ಎಂದರು. ಸಾರ್ವಜನಿಕರು ಆಹಾರಧಾನ್ಯ ಬಯಸದೇ ಕೇವಲ ಪಡಿತರ ಚೀಟಿ ಪಡೆಯುವುದರಿಂದ ಸರ್ಕಾರದ ಹೊರೆ ಕಡಿಮೆಯಾಗುತ್ತದೆ. ಯಾರಿಗೆ ಅಕ್ಕಿ ಅನಿವಾರ್ಯವಿದೆಯೋ ಅಂಥವರಿಗೆ ಇದರಿಂದ ಅನುಕೂಲವಾಗಲಿದೆ ಎಂದು ಹೇಳಿದರು.



ಬಿಪಿಎಲ್ ಚೀಟಿ ಬಯಸುವವರಲ್ಲಿ ಪಡಿತರ ಹಾಗೂ ಆರೋಗ್ಯ ಸೇವೆ ಎರಡನ್ನೂ ಬಯಸುವ ವರ್ಗವಿದೆ. ಇನ್ನೊಂದು ವರ್ಗ ಪಡಿತರ ಪಡೆಯದೆ ಕೇವಲ ಆರೋಗ್ಯ ಸೇವೆಯನ್ನಷ್ಟೇ ಪಡೆಯಲು ಇಚ್ಛಿಸುತ್ತದೆ. ಹೀಗಾಗಿ ಬಿಪಿಎಲ್ ಪಡಿತರ ಚೀಟಿದಾರರನ್ನು ಎ, ಬಿ ಎಂದು ವರ್ಗೀಕರಿಸಲಾಗುವುದು. ಈ ಬಗ್ಗೆ ಮನೆ ಮನೆ ಸರ್ವೆ ಮಾಡಿಸಿ ವರದಿ ಪಡೆದು ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಇದರಿಂದ ಎಷ್ಟು ಪಡಿತರ ಚೀಟಿದಾರರು ಅಕ್ಕಿ ಮತ್ತು ಆರೋಗ್ಯ ಸೇವೆ ಎರಡನ್ನೂ ಬಯಸುತ್ತಾರೆ, ಎಷ್ಟು ಮಂದಿ ಕೇವಲ ವೈದ್ಯಕೀಯ ಸೇವೆಯನ್ನು ಅಪೇಕ್ಷಿಸುತ್ತಾರೆ ಎಂಬುದು ಸ್ಪಷ್ಟವಾಗಲಿದೆ ಎಂದರು. ಹೆಚ್ಚುವರಿ 5 ಕೆಜಿ ಅಕ್ಕಿ ಹಣವನ್ನು ಪಡಿತರ ಚೀಟಿದಾರರ ಖಾತೆಗೆ ಡೆಮೊ ಮಾಡುತ್ತಿದ್ದು, ಈಗಾಗಲೇ 27 ಜಿಲ್ಲೆಗಳ ಪಡಿತರಚೀಟಿದಾರರಿಗೆ ಹಣ ವರ್ಗಾವಣೆಯಾಗಿದೆ. ಇನ್ನು ಚಿಕ್ಕಬಳ್ಳಾಪುರ, ಶಿವಮೊಗ್ಗ, ಉಡುಪಿ, ವಿಜಯನಗರ ಜಿಲ್ಲೆಗಳ ಫಲಾನುಭವಿಗಳ ಖಾತೆಗೆ ನೇರ ಹಣ ವರ್ಗಾವಣೆ ಮಾಡಬೇಕಿದೆ. ಇದು ಈ ತಿಂಗಳ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ.

ಅಕ್ಕಿ ಬದಲು ಹಣ ವರ್ಗಾವಣೆ ಮಾಡುವುದಕ್ಕೆ 566 ಕೋಟಿಯಾಗಿದೆ. ಇದರ ಪ್ರಯೋಜನ 3,45,32,984 ಫಲಾನುಭವಿಗಳಿಗೆ ದೊರೆಯಲಿದೆ. ರಾಜ್ಯದಲ್ಲಿ 1,28,17,337 ಪಡಿತರ ಚೀಟಿದಾರರು ಇದ್ದು, 97,27,165 ಪಡಿತರ ಚೀಟಿದಾರರಿಗೆ ಈ ರೀತಿ ಅಕ್ಕಿ ಬದಲು ಹಣ ವರ್ಗಾವಣೆಯಾಗಲಿದೆ. ಆಧಾರ್ ಕಾರ್ಡ್ ಜೋಡಣೆಯಾಗದ, ಬ್ಯಾಂಕ್ ಖಾತೆ ಇಲ್ಲದೆ, ಕುಟುಂಬದ ಮುಖ್ಯಸ್ಥರಿಲ್ಲದ 30.90 ಲಕ್ಷ ಕಾರ್ಡ್‌ಗಳಿವೆ. ಜಿಲ್ಲಾ ಉಪ ನಿರ್ದೇಶಕರಿಗೆ ಸುತ್ತೋಲೆ ಮೂಲಕ ಸೂಚನೆ ನೀಡಿ ಆಯಾ ಜಿಲ್ಲೆಯಲ್ಲಿ ಬ್ಯಾಂಕ್ ಖಾತೆ ಹೊಂದಿಲ್ಲದ ಪಡಿತರ ಚೀಟಿದಾರರಿಗೆ ಬ್ಯಾಂಕ್ ಖಾತೆ, ಆಧಾರ್ ಖಾತೆ ಜೋಡಣೆ ಮಾಡುವುದು, ಒಂದು ವೇಳೆ ಯಜಮಾನರು ಮೃತರಾಗಿದ್ದಾರೆ ಅವರನ್ನು ಬದಲಾಯಿಸುವುದು, ಜನನವಾದ ಮಕ್ಕಳ ಹೆಸರನ್ನು ಸೇರ್ಪಡೆ ಮಾಡಲು ಸೂಚಿಸಲಾಗುವುದು ಎಂದರು.

ಮಾಸಿಕ 2.40 ಲಕ್ಷ ಟನ್ ಅಕ್ಕಿ ಬೇಕಾಗಿದ್ದು, ಅಕ್ಕಿ ಖರೀದಿಗೆ ಸದ್ಯದಲ್ಲೇ ಟೆಂಡರ್ ಕರೆಯಲಾಗುವುದು. ಕನಿಷ್ಠ ಬೆಂಬಲ ಬೆಲೆಯಡಿ ಭತ್ತ, ರಾಗಿ ಖರೀದಿ ಮಾಡಿದರೂ ಒಂದು ಕ್ವಿಂಟಾಲ್ ಭತ್ತಕ್ಕೆ 67 ಕೆಜಿ ಅಕ್ಕಿ ಬರುತ್ತದೆ. ರಾಗಿಯನ್ನು ದಾಸ್ತಾನು ಮಾಡುತ್ತೇವೆ. 14 ಜಿಲ್ಲೆಗಳಲ್ಲಿ ತಲಾ ಎರಡು ಕೆಜಿಯಂತೆ ರಾಗಿ ಪಡೆಯುತ್ತಿದ್ದಾರೆ.

ಈ ರೀತಿ 6 ಲಕ್ಷ ಟನ್ ರಾಗಿ ಬೇಕಾಗುತ್ತದೆ. ವಾರ್ಷಿಕ 30 ಟನ್ ಅಕ್ಕಿ ಬೇಕಾಗುತ್ತದೆ. ರೈತರು ಐಆರ್ 64 ತಳಿಯ ಭತ್ತವನ್ನು ಬೆಳೆದರೆ ಪಡಿತರ ವ್ಯವಸ್ಥೆಯಡಿ ಅಕ್ಕಿ ವಿತರಣೆ ಮಾಡಲು ಸಹಕಾರಿಯಾಗುತ್ತದೆ ಎಂದು ರೈತರಿಗೆ ಅರಿವು ಮೂಡಿಸಲಾಗುವುದು ಎಂದರು.

ಎಕ್ಸ್‌ಪ್ರೆಸ್‌ವೇಯಲ್ಲಿ ತುರ್ತು ಕರೆ ಬಾಕ್ಸ್ ಬಳಸುವುದು ಹೇಗೆ?





ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಅಳವಡಿಸಿರುವ ಸೋಲಾರ್ ಚಾಲಿತ ಎಸ್‌ಓಎಸ್ ಬಾಕ್ಸ್ ಅನ್ನು ಕ್ಲಿಕ್ಕಿಸುತ್ತಿರುವ ಪತ್ರಕರ್ತ ಸುರೇಶ್ (ಬಲಚಿತ್ರ). ಬಾಕ್ಸ್‌ನ ಕಾಲ್ ಬಟನ್ ಅನ್ನು (ವೃತ್ತದೊಳಗೆ) ಎಡಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು. 26(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಯ ಹಲವೆಡೆ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಹೆಚ್‌ಎಐ)ವು 'Save Our Soul' (SOS) ಜೀವ ರಕ್ಷಕ ಕಾಲ್ ಬಾಕ್ಸ್‌ಗಳನ್ನು ಅಳವಡಿಸಿದೆ. ಸೋಲಾರ್ ಚಾಲಿತ ಎಸ್‌ಓಎಸ್ ಬಾಕ್ಸ್‌ಗಳಲ್ಲಿರುವ ಬಟನ್ ಅನ್ನು ಒತ್ತಿದರೆ ತುರ್ತು ಸಹಾಯವಾಣಿ ಕೇಂದ್ರದಲ್ಲಿ ಡಯಲ್ ಆಗುತ್ತದೆ. ಜಿಪಿಎಸ್ ತಂತ್ರಜ್ಞಾನದ ಈ ಬಾಕ್ಸ್‌ನಿಂದ ಬಂದ ಕರೆಗಳನ್ನು ಸ್ವೀಕರಿಸುವ ಸಿಬ್ಬಂದಿಗಳು, ಅಪಘಾತ, ವಾಹನಗಳು ಕೆಟ್ಟು ನಿಂತರೆ, ಅಗ್ನಿ ಅವಘಡವಾದರೆ ಅಥವಾ ಇನ್ನಿತರ ತೊಂದರೆಯಾಗಿರುವ ಬಗ್ಗೆ ಮಾಹಿತಿ ಸಂಗ್ರಹಿಸಿ ಸಂಬಂಧಪಟ್ಟ ತಂಡಗಳಿಗೆ ತಿಳಿಸಿದ್ದಾರೆ.

ಹಳದಿ ಬಣ್ಣದ ಈ ಬಾಕ್ಸ್‌ಗಳ ಮಧ್ಯೆ ಒಂದು ಚಿಕ್ಕ ಬಟನ್ ಇದ್ದು, ಅದನ್ನು ಒತ್ತಿದ ತಕ್ಷಣ ರಿಂಗ್ ಟೋನ್ ಬರುತ್ತದೆ. ಕರೆ ಸ್ವೀಕರಿಸಿದವರೊಂದಿಗೆ ಮಾತನಾಡಲು ಸ್ಪೀಕರ್ ಅಳವಡಿಸಲಾಗಿದೆ. ಯಾವುದೇ ಫೋನ್ ಇಲ್ಲದೆ, ನಿಂತು ಹಾಗೆಯೇ ಸ್ಥಳದಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಹೇಳಿಕೊಳ್ಳಬಹುದು. ಮಾಹಿತಿ ಪಡೆದ ತಕ್ಷಣವೇ ಪರಿಹರಿಸಲು ರಕ್ಷಣಾ ತಂಡವು ಆ ಸ್ಥಳಕ್ಕೆ ಆಗಮಿಸಲಿದೆ.

ಎಸ್‌ಓಎಸ್ ಬಾಕ್ಸ್‌ನಿಂದ ಮಾತನಾಡುವವರ ಕರೆಯು ಮೈಸೂರಿನ ಜೆಎಲ್‌ಬಿ ರಸ್ತೆಯ ಅಯ್ಯ ಟವರ್‌ನಲ್ಲಿರುವ ಕಾಲ್ ಸೆಂಟರ್‌ಗೆ ಸಂಪರ್ಕ ಕಲ್ಪಿಸುತ್ತದೆ. ತಕ್ಷಣ ಅವರು ಹತ್ತಿರದ ಪೊಲೀಸ್ ಠಾಣೆ, ಆಂಬುಲೆನ್ಸ್, ಪೆಟ್ರೋಲಿಂಗ್ ವಾಹನ, ಕ್ರೇನ್‌ಗಳಿಗೆ ಕನೆಕ್ಟ್ ಮಾಡಿ ಕ್ಷಣಾರ್ಧದಲ್ಲಿ ಮಾಹಿತಿ ರವಾನಿಸುತ್ತಾರೆ.

ಎಸ್‌ಓಎಸ್ ಬಾಕ್ಸ್‌ಗಳಿಗೆ ಯಾವುದೇ ಇಂಟರ್‌ನೆಟ್ ಅವಶ್ಯಕತೆ ಇಲ್ಲ. ಎಕ್ಸ್‌ಪ್ರೆಸ್‌ವೇಯ ಯಾವುದೇ ಸ್ಥಳದಲ್ಲಿ ಏನೇ ತೊಂದರೆಯಾದರೂ ಸಾರ್ವಜನಿಕರು ಆತಂಕ ಪಡುವಂತಿಲ್ಲ. ಬಾಕ್ಸ್‌ನ ಬಟನ್ ಒತ್ತಿ ಮಾಹಿತಿ ಹೇಳಿ ಅಲ್ಲಿಯೇ ನಿಂತರೆ ಸಾಕು ಕೆಲವೇ ನಿಮಿಷದಲ್ಲಿ ತುರ್ತು ಸುರಕ್ಷತಾ ಕಾರ್ಯಪಡೆ ತಂಡ ನೆರವಿಗೆ ಬರುತ್ತದೆ. ದಶಪಥ ರಸ್ತೆಯ ಹಲವೆಡೆ ಅಳವಡಿಸಿರುವ ಸೋಲಾರ್ ಪ್ಯಾನಲ್ ಹೊಂದಿದ SOS ಬಾಕ್ಸ್‌ಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸಲಿದ್ದು, ರಸ್ತೆ ಬಳಕೆದಾರರು ತುರ್ತು ಸೇವೆಗಾಗಿ ಈ ಸೌಲಭ್ಯವನ್ನು ಬಳಸಿಕೊಳ್ಳಬೇಕೆಂದು ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಕೆಎಸ್‌ಐಸಿ ರೇಷ್ಮೆ ಕಾರ್ಖಾನೆಗಳಲ್ಲಿ ಮುಂದಿನ ಮೂರು ವರ್ಷಗಳಲ್ಲಿ

ಉತ್ಪಾದನೆ ದ್ವಿಗುಣಗೊಳಿಸುವ ಉದ್ದೇಶ



ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕೆಎಸ್‌ಐಸಿ ರೇಷ್ಮೆ ನೇಯ್ಗೆ ಕಾರ್ಖಾನೆಗೆ ಬುಧವಾರ ಸಚಿವ ಕೆ.ವೆಂಕಟೇಶ್ ಭೇಟಿ ನೀಡಿದ್ದರು.

ರೇಷ್ಮೆ ಸಚಿವ ಕೆ.ವೆಂಕಟೇಶ್ ವಿವರಣೆ

ಮೈಸೂರು,ಜು.26(ಪಿಎಂ)– ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ (ಕೆಎಸ್‌ಐಸಿ) ರೇಷ್ಮೆ ಕಾರ್ಖಾನೆಗಳಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಉತ್ಪಾದನೆ ದ್ವಿಗುಣಗೊಳಿಸುವ ಉದ್ದೇಶ ಹೊಂದಲಾಗಿದೆ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕೆಎಸ್‌ಐಸಿ ರೇಷ್ಮೆ ನೇಯ್ಗೆ ಕಾರ್ಖಾನೆಗೆ ಬುಧವಾರ ಭೇಟಿ ನೀಡಿ, ರೇಷ್ಮೆ ಸೀರೆ ತಯಾರಿಕೆ ವಿಧಾನ ಸೇರಿದಂತೆ ಕಾರ್ಖಾನೆಯ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ, ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು. ನಾನು ರೇಷ್ಮೆ ಸಚಿವನಾದ ನಂತರ ಇಲ್ಲಿಗೆ ಭೇಟಿ ನೀಡಿರಲಿಲ್ಲ. ಹಾಗಾಗಿ ಮೊದಲ ಬಾರಿಗೆ ಇಲ್ಲಿಗೆ ಭೇಟಿ ನೀಡಿದ್ದೇನೆ. ನಮ್ಮ ರೇಷ್ಮೆ ಕಾರ್ಖಾನೆಗಳ ಚಟುವಟಿಕೆ ಬಗ್ಗೆ ಗಮನ ಹರಿಸಲು ಬಂದಿದ್ದೇನೆ. ಚಾಮರಾಜನಗರ, ರಾಮನಗರದ ಕೆಎಸ್‌ಐಸಿ ಕಾರ್ಖಾನೆಗಳಿಗೂ ಭೇಟಿ ನೀಡಲಿದ್ದೇನೆ. ಇಲ್ಲಿಂದ ಪ್ರಾರಂಭ ಮಾಡಿದ್ದೇನೆ ಎಂದು ತಿಳಿಸಿದರು.

ಮೈಸೂರು ಭಾಗದಲ್ಲೂ ರೇಷ್ಮೆ ಮಾರುಕಟ್ಟೆ ಮಾಡಬೇಕೆಂಬ ಒತ್ತಾಯವಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ನನ್ನ ಗಮನಕ್ಕೂ ಇದು ಬಂದಿದೆ. ಏನು ಮಾಡಬಹುದೆಂದು ಪರಿಶೀಲಿಸಲಾಗುವುದು ಎಂದರಲ್ಲದೆ, ರೇಷ್ಮೆ ಬೆಳೆಗೆ ಈ ಭಾಗದಲ್ಲಿ ಹೆಚ್ಚು ಉತ್ತೇಜನ ನೀಡಬೇಕೆಂಬ ಚಿಂತನೆಯೂ ನನಗಿದೆ. ಏಕೆಂದರೆ ನಮ್ಮ ಪಿರಿಯಾಪಟ್ಟಣ ಭಾಗದಲ್ಲಿ ತಂಬಾಕು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾರೆ. ತಂಬಾಕು ಬೆಳೆಗಾರರು ಪರ್ಯಾಯ ಬೆಳೆ ಬೇಕೆಂದು ಆಗಾಗ್ಗೆ ಕೇಳುತ್ತಿರುತ್ತಾರೆ. ರೇಷ್ಮೆ ಕೂಡ ವಾಣಿಜ್ಯ ಬೆಳೆಯಾಗಿದ್ದು, ಹಾಗಾಗಿ ಇದಕ್ಕೆ ಉತ್ತೇಜನ ನೀಡಿದರೆ ರೈತರಿಗೆ ಅನುಕೂಲವಾಗಲಿದೆ ಎಂದರು.

ರೇಷ್ಮೆ ಉತ್ಪನ್ನದ ಬೆಲೆ ದುಬಾರಿಯಾದ ಹಿನ್ನೆಲೆಯಲ್ಲಿ ಬಡ ವರ್ಗದವರು ಖರೀದಿ ಮಾಡಲಾಗದ ಪರಿಸ್ಥಿತಿ ಇದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಯಾವ ಸೀರೆಗೆ ಎಷ್ಟು ಬೆಲೆ ಇದೆ ಎಂಬ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಕಡಿಮೆ ಬೆಲೆಗೆ ರೇಷ್ಮೆ ಸೀರೆ ಉತ್ಪಾದನೆ ಮಾಡುವ ಸಂಬಂಧ ಪರಿಶೀಲನೆ ಮಾಡಬೇಕು. 20, 30 ಸಾವಿರ ಬೆಲೆ ರೇಷ್ಮೆ ಸೀರೆಗೆ ಇದೆ ಎಂದು ಕೇಳಿದ್ದೇನೆ. ಆ ಬಗ್ಗೆ ನನಗೆ ಹೆಚ್ಚು ಗೊತ್ತಿಲ್ಲ ಎಂದರು.

ರೇಷ್ಮೆಗೂಡಿನ ದರ ಇಳಿಕೆಯಾಗಿರುವ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಈಗ ತುಸು ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ಬೆಲೆ ಸಿಗುವ ನಿರೀಕ್ಷೆ ಇದೆ. ಹಾಗಾಗಿ ರೈತರು ಆತಂಕಪಡಬೇಕಿಲ್ಲ. ರೈತರಿಗೆ ಅನನುಕೂಲ ಆಗದಂತೆ ನಮ್ಮ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ವತಿಯಿಂದ ರೇಷ್ಮೆ ಗೂಡು ಖರೀದಿ ಮಾಡಲಾಗುತ್ತದೆ. ರೇಷ್ಮೆ ಯಾವ ಗುಣಮಟ್ಟದಲ್ಲಿದ್ದರೂ ವಾಪಸ್ ಕಳುಹಿಸುತ್ತಿಲ್ಲ. ಖರೀದಿಗೆ ನಮ್ಮ ಬಳಿ ಸಾಕಷ್ಟು ಹಣ ಇದೆ ಎಂದು ಹೇಳಿದರು.

ಕೆಎಸ್‌ಐಸಿ ವ್ಯವಸ್ಥಾಪಕ ನಿರ್ದೇಶಕಿ ವಿ.ವಿ.ಜ್ಯೋತ್ಸ್ನಾ ಮಾತನಾಡಿ, ಸಚಿವರ ನಿರ್ದೇಶನದಂತೆ ಮುಂದಿನ ಮೂರು ವರ್ಷಗಳಲ್ಲಿ ಉತ್ಪಾದನೆ ದ್ವಿಗುಣಗೊಳಿಸುವ ಉದ್ದೇಶದೊಂದಿಗೆ ಅಗತ್ಯ ರೂಪುರೇಷೆ ಬಗ್ಗೆ ಚಿಂತನೆಗಳನ್ನು ನಡೆಸಲಾಗುತ್ತಿದೆ. ಬೇಡಿಕೆ ಹೆಚ್ಚಿರುವ ಹಿನ್ನೆಲೆಯಲ್ಲಿ ಉತ್ಪಾದನೆ ಹೆಚ್ಚಳ ಮಾಡಬೇಕಿದೆ. ಹಾಗಾಗಿ ಉತ್ಪಾದನೆಯತ್ತ ಹೆಚ್ಚಿನ ಗಮನ ನೀಡಬೇಕಿದೆ. ಇದಕ್ಕೆ ಪೂರಕ ಯಂತ್ರೋಪಕರಣಗಳು ಬೇಕಾಗುತ್ತವೆ. ನಮ್ಮಲ್ಲಿ ಉತ್ಪಾದನೆಯಾಗುವ ಎಲ್ಲಾ ಉತ್ಪನ್ನಗಳು ಮಾರಾಟವಾಗುತ್ತಿದ್ದು, ನಮ್ಮ ಉತ್ಪನ್ನಗಳಿಗೆ ಉತ್ತಮ ಬೇಡಿಕೆ ಇದೆ ಎಂದು ವಿವರಿಸಿದರು.

> ❝ ಮೈಸೂರು ನಗರದಲ್ಲಿ ಕೆಎಸ್‌ಐಸಿಯ ಆರು ಮಳಿಗೆಗಳು ಇವೆ. ಮೃಗಾಲಯ ಎದುರು ಬಾಡಿಗೆಗೆ ಮಳಿಗೆ ತೆಗೆದುಕೊಂಡಿದ್ದು, ಅದರ ನವೀಕರಣ ಅಂತಿಮ ಹಂತಕ್ಕೆ ಬಂದಿದೆ. ನಮ್ಮ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ 2021–22ನೇ ಸಾಲಿನಲ್ಲಿ ನಾಲ್ಕೂವರೆ ಲಕ್ಷ ಮೀಟರ್ ರೇಷ್ಮೆ ಬಟ್ಟೆ ಉತ್ಪನ್ನಗಳ ಉತ್ಪಾದನೆ ಮಾಡಿದ್ದೇವೆ. 22–23ನೇ ಸಾಲಿನಲ್ಲಿ ಐದೂವರೆ ಲಕ್ಷಕ್ಕೆ ಹೆಚ್ಚಳವಾಗಿದೆ. ಅಲ್ಲಿಗೆ ಒಂದು ಲಕ್ಷ ಮೀಟರ್ ಹೆಚ್ಚಳ ಮಾಡಿದ್ದೇವೆ. ಅದೇ ರೀತಿ ನಮ್ಮ ಉತ್ಪನ್ನಗಳ ಮಾರಾಟದಿಂದ ಬರುತ್ತಿದ್ದ ಆದಾಯ 200 ಕೋಟಿ ರೂ. ಇತ್ತು, ಇದೀಗ ಕಳೆದ ಮಾರ್ಚ್‌ಗೆ 240 ಕೋಟಿಗೆ ಏರಿಕೆ ಕಂಡಿದೆ. –ವಿ.ವಿ.ಜ್ಯೋತ್ಸ್ನಾ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಐಸಿ

ನಮ್ಮ ಸರ್ಕಾರ ಸುಭದ್ರ

ಮೈಸೂರು,ಜು.26(ಪಿಎಂ)– ನಮ್ಮ ಸರ್ಕಾರ ಸುಭದ್ರವಾಗಿದ್ದು, ಅಭದ್ರತೆ ಕಾಡುವ ಪ್ರಶ್ನೆಯೇ ಇಲ್ಲ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಮೈಸೂರಿನ ಕೆಎಸ್‌ಐಸಿ ರೇಷ್ಮೆ ಕಾರ್ಖಾನೆ ಆವರಣದಲ್ಲಿ ಬುಧವಾರ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು. ಸರ್ಕಾರಕ್ಕೆ ಅಭದ್ರತೆ ಕಾಡುತ್ತಿದ್ದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ನಾವು 136 ಮಂದಿ ಇದ್ದೇವೆ. ಅಭದ್ರತೆ ಕಾಡುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು. ನಮ್ಮ ಸರ್ಕಾರ ಕೊಟ್ಟ ಭರವಸೆಗಳನ್ನು ಈಡೇರಿಸುತ್ತಿದೆ. ಹಾಗಾಗಿ ಪ್ರತಿಪಕ್ಷದವರಿಗೆ ಹೊಟ್ಟೆಯುರಿ ತಡೆದುಕೊಳ್ಳಲಾಗದೇ ಅಭದ್ರತೆ ಎಂದು ಬೋಗಸ್ ಸುದ್ದಿ ಹರಡುತ್ತಿದ್ದಾರೆ. ಸಿಂಗಾಪುರ ಮತ್ತೊಂದು ಮಗದೊಂದು ಎಂದು ಏನೇನೋ ಮಾಡಿದ್ದಾರೆ. ಅದ್ಯಾವುದೂ ಇಲ್ಲಿ ನಡೆಯುವುದಿಲ್ಲ ಎಂದು ಕಿಡಿಕಾರಿದರು.

ಹಲವು ಸಚಿವರ ವಿರುದ್ಧ ಶಾಸಕರು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯಿಸಿ, ನೋಡಿ ಒಂದು ಸಂಸ್ಥೆ ಇಲ್ಲವೇ ಒಂದು ರಾಜಕೀಯ ಪಕ್ಷ ಎಂದ ಮೇಲೆ ಅಸಮಾಧಾನ ಸಾಮಾನ್ಯ. ಒಂದು ಕುಟುಂಬದಲ್ಲೇ ಅಸಮಾಧಾನ ಇರುತ್ತದೆ. ಎಲ್ಲವನ್ನೂ ಸರಿಪಡಿಸಿಕೊಂಡು ಹೋಗುತ್ತೇವೆ. ಏನೂ ತೊಂದರೆ ಇಲ್ಲ ಎಂದರು.

ಬೆಂಗಳೂರಿನ ಡಿಜೆ ಹಳ್ಳಿ, ಕೆಜಿ ಹಳ್ಳಿ, ಶಿವಮೊಗ್ಗ ಹಾಗೂ ಹುಬ್ಬಳ್ಳಿ ಗಲಭೆಯಲ್ಲಿ ಬಂಧಿತರಾಗಿರುವ ಆರೋಪಿಗಳನ್ನು ಬಿಡುಗಡೆ ಮಾಡಬೇಕೆಂದು ಗೃಹಸಚಿವರಿಗೆ ಶಾಸಕ ತನ್ವೀರ್ ಸೇಠ್ ಪತ್ರ ಬರೆದಿರುವ ಸಂಬಂಧ ಪ್ರತಿಕ್ರಿಯಿಸಿದ ಅವರು, ತನ್ವೀರ್‌ಸೇಠ್ ತಮ್ಮ ಅಭಿಪ್ರಾಯ ಹೇಳಿದ್ದು, ಗೃಹಮಂತ್ರಿಗಳು ಗಮನಹರಿಸಿ, ಸೂಕ್ತವಾದ ನಿರ್ಧಾರ ತೆಗೆದುಕೊಳ್ಳುತ್ತಾರೆ. ಗಲಭೆಗಳಲ್ಲಿ ಆ ಆರೋಪಿಗಳು ನಿಜವಾಗಿಯೂ ಭಾಗವಹಿಸಿದ್ದಾರೆಯೇ ಅಥವಾ ಇಲ್ಲವೇ ಎಂದು ನೋಡಬೇಕಲ್ವಾ? ಎಂದು ಹೇಳಿದರು.